ಸಂಪುಟ 15
ಸಂಚಿಕೆ 09

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

7 ಮಾರ್ಚ್ 1993
ರೂ. 2.00

ರೈಲು ಬಜೆಟ್ ಹೊರೆಗಳು

ಇವನ್ನು ಜನ ಒಪ್ಪಲು ಸಿದ್ಧವಿಲ್ಲ

- ಪೊಲಿಟ್‌ಬ್ಯೂರೋ


ಪ್ರಯಾಣ ದರಗಳಲ್ಲಿ ಶೇ. 10-12 ಏರಿಕೆ, ಸಾಗಾಣಿಕೆ ದರಗಳಲ್ಲೂ ಅಷ್ಟೇ ಏರಿಕೆ, ಧಾನ್ಯಗಳು, ಸಕ್ಕರೆ, ಎಣ್ಣೆ ಬಿಲ್ಲೆಗಳು, ಡೀಸೆಲ್ ಸಾಗಾಣಿಕೆಗೆ ಇದುವರೆಗೆ ನೀಡಿದ್ದ ರಿಯಾಯ್ತಿಯ ರದ್ಧತಿ ಇವು ಈ ಬಾರಿಯೂ ಜನರನ್ನು ತಲ್ಲಣಗೊಳಿಸಿರುವ ರೈಲ್ವೇ ಮಂತ್ರಿ ಜಾಫರ್ ಷರೀಫ್‌ರವರು ಮಂಡಿಸಿದ ಬಜೆಟ್‌ನ ಮುಖ್ಯಾಂಶಗಳು. ಈ ಏರಿಕೆ ಅನಿವಾರ್ಯ ಎಂದೂ ಅವರು ಹೇಳಿಕೊಂಡಿದ್ದಾರೆ. ಆದರೆ ಇವನ್ನು ದೇಶದ ಜನ ಒಪ್ಪಲು ಸಿದ್ಧರಿಲ್ಲ. ಈ ಪ್ರಸ್ತಾಪಗಳನ್ನು ಜನ ಸ್ವೀಕರಿಸುವುದಿಲ್ಲ. ದೇಶಾದ್ಯಂತ ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಈ ಏರಿಕೆಗಳನ್ನು ಪ್ರತಿರೋಧಿಸಿ ಅವನ್ನು ಹಿಂತೆಗೆದುಕೊಳ್ಳುವಂತೆ ಮಾಡಲು ಜನಗಳನ್ನು ಅಣಿನೆರೆಸಬೇಕೆಂದು ಅದು ಕರೆ ನೀಡಿದೆ. ಈ ಬಜೆಟ್ ಪ್ರಸ್ತಾಪಗಳು ದೇಶದ ಜನಸಾಮಾನ್ಯರ ಮೇಲೆ ಇನ್ನೊಂದು ದೊಡ್ಡ ಧಾಳಿ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಜ್ಯೋತಿ ಬಸು ಖಂಡಿಸಿದ್ದಾರೆ.

ಇತ್ತೀಚೆಗಷ್ಟೇ ಕಲ್ಲಿದ್ದಲು, ಉಕ್ಕಿನ ಮೇಲೆ ಸರಕಾರ ದೆಲೆಯೇರಿಕೆ ಹೇರಿತ್ತು. ಈಗ ಈ ರೈಲ್ವೇ ಬಜೆಟ್ಟಿನ ಪ್ರಸ್ತಾಪಗಳನ್ನು ಸಂಸತ್ತು ಒಪ್ಪಿಕೊಂಡರೆ ಈ ಎರಡು ಸಾಮಗ್ರಿಗಳ ಬೆಲೆ ಇನ್ನಷ್ಟು ಏರಲಿದೆ. ಈ ಮೂಲಕ ಇಳಿಮುಖವಾಗುತ್ತಿದೆಯೆಂದು ಸರಕಾರ ಇತ್ತೀಚೆಗೆ ದಿನದಿನಗಳಾವರೆ ಡಂಗುರ ಹಾಕುತ್ತಿದ್ದ ಹಣದುಬ್ಬರ ವ್ಯಾಪಕಗೊಳ್ಳಲಿದೆ. ಹಣದುಬ್ಬರ ದರ ಇಳಿದಿದೆ ಎಂದು ಹೇಳುತ್ತಿರುವಾಗ ಜನ ತಮ್ಮ ಸುತ್ತಮುತ್ತ ಬೆಲೆಗಳೇರುವುದನ್ನಷ್ಟೇ ನೋಡುತ್ತಿದ್ದಾರೆ. ಈಗ ಸರಕಾರವೇ ಮಾಡಿರುವ ನೇರ ಬೆಲೆಯೇರಿಕೆ ಹಾಗೂ ಸಾಗಾಣಿಕೆ ದರ ಏರಿಕೆಯಿಂದ ಜನಸಾಮಾನ್ಯರ ಜೀವನ ಎಷ್ಟೊಂದು ದುರ್ಭರವಾಗಲಿದೆ ಎಂದು ಊಹಿಸಲೂ ಸಾಧ್ಯವಿಲ್ಲ.

ರೈಲ್ವೇ ಮಂಡಳಿ ಅಧ್ಯಕ್ಷರ ಪ್ರಕಾರವೇ ಸಾಗಾಣಿಕೆ ದರ ಏರಿಕೆಗಳಿಂದಾಗಿ ಕಲ್ಲಿದ್ದಲು ಸಾಗಾಣಿಕೆ ದರ ಟನ್‌ಗೆ 33ರೂ, ಉಕ್ಕಿಗೆ 97 ರೂ, ಪೆಟ್ರೋಲ್‌ಗೆ ಲೀಟರ್‌ಗೆ 5 ಪೈಸೆ, ಡೀಸೆಲ್‌ಗೆ 13 ಪೈಸೆ, ಸೀಮೆಎಣ್ಣೆಗೆ 3 ಪೈಸೆ, ಸಕ್ಕರೆಗೆ ಕೆ.ಜಿ.ಗೆ 20 ಪೈಸೆ ಹಾಗೂ ಗೋಧಿಗೆ ಕೆ.ಜಿ.ಗೆ 15 ಪೈಸೆ ದರ ಹೆಚ್ಚಲಿದೆ.

ರೈಲ್ವೇ ನಿರ್ವಹಣಾ ವೆಚ್ಚದಲ್ಲಿ ಸರ್ವತೋಮುಖ 'ಏರಿಕೆ, ಕಲ್ಲಿದ್ದಲು ಬೆಲೆಯೇರಿಕೆ, ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗಳು ವಿದ್ಯುಚ್ಛಕ್ತಿ ದರ ಏರಿಸಿದ್ದು ಇವುಗಳಿಂದಾಗಿ ಈ ಹಣದುಬ್ಬರಕಾರೀ ಬಜೆಟ್ ಮಂಡಿಸುವುದು ಅನಿವಾರ್ಯವಾಯಿತು ಎಂಬುದು ರೈಲ್ವೇ ಮಂತ್ರಿಗಳ ಸಮರ್ಥನೆ. ಆದರೆ ಬೆಲೆಯೇರಿಕೆ ಇಳಿಯುತ್ತಿದೆ ಎಂದು ಸರಕಾರವೇ ಡಂಗುರ ಸಾರುತ್ತಿರುವಾಗ ಮತ್ತೆ ಈ ಬೆಲೆಯೇರಿಕೆಯ ನೆಪವೇಕೆ? ಕಲ್ಲಿದ್ದಲು ಬೆಲೆ ಏರಿಸಿದ್ದು, ರಾಜ್ಯ ವಿದ್ಯುತ್ ಮಂಡಳಿಗಳು ವಿದ್ಯುಚ್ಛಕ್ತಿ ಬೆಲೆ ಏರಿಸುವಂತೆ ಒತ್ತಡ ಹೇರಿದ್ದು ಕೂಡಾ ಜಾಫರ್ ಷರೀಫ್‌ರ ಸರಕಾರವೇ ಅಲ್ಲವೇ? ಮತ್ತೇಕೆ ಈ ನೆಪ?

ಫೆಬ್ರವರಿ 17-18ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮೊದಲೇ ಎಚ್ಚರಿಸಿದಂತೆ ನರಸಿಂಹರಾವ್ ಸರಕಾರ ಜನಗಳ ಮೇಲೆ ನಿರಂತರವಾಗಿ ಹೊರೆಗಳನ್ನು ಏರಿಸುತ್ತಿರುವ ದೇಶದ ಸಾರ್ವಭೌಮತೆಗೆ ಧಕ್ಕೆ ತರುವ ಆರ್ಥಿಕ ನೀತಿಗಳನ್ನು ಬದಲಿಸಲು ಸಿದ್ಧವಿಲ್ಲ, ಬಜೆಟ್ ಮೊದಲೇ ಬಹಳಷ್ಟು ತೆರಿಗೆ, ಬೆಲೆಯೇರಿಕೆಗಳನ್ನು ಜನಗಳ ಮೇಲೆ ಕುಕ್ಕಿದ ಸರಕಾರಕ್ಕೆ ಅದರಿಂದಲೂ ತೃಪ್ತಿಯಾದಂತಿಲ್ಲ, ತೃಪ್ತಿಯಾಗುವಂತೆಯೂ ಇಲ್ಲ. ಏಕೆಂದರೆ ಇನ್ನೂ 5-6 ಶತಕೋಟಿ ಡಾಲರುಗಳ(ಸುಮಾರು 200 ಶತಕೋಟಿ ರೂಪಾಯಿಗಳ) ಸಾಲ ಪಡೆಯಲು ಐಎಂಎಫ್-ವಿಶ್ವಬ್ಯಾಂಕ್‌ನೆದುರು ಸಾಷ್ಟಾಂಗ ನಮಸ್ಕಾರ ಹಾಕಿರುವ ಸರಕಾರ, ಅದೇ ಸರಿಯಾದ ನೀತಿ ಎಂದು ಹೇಳುವ ಸರಕಾರ ಇಂತಹ ಜನ-ವಿರೋಧಿ, ದೇಶ-ವಿರೋಧಿ ನೀತಿಗಳನ್ನು ಅನುಸರಿಸುವದರಲ್ಲದೆ ಬೇರೇನು ತಾನೇ ಮಾಡಬಲ್ಲದು? ಸರಕಾರೀ ವಲಯದಲ್ಲಿ ತೊಡಗಿಸುವುದನ್ನು ಕಡಿತ ಮಾಡಬೇಕೆಂಬ ಐಎಂಎಫ್ ನಿರ್ದೇಶಿತ ನೀತಿಯಿಂದಾಗಿಯೇ ರೈಲ್ವೇ ಅಭಿವೃದ್ಧಿಗೆ ಧಕ್ಕೆ ಬಂದಿದೆಯೆಂದು ರೈಲ್ವೇ ಮಂತ್ರಿಗಳೇ ಹೇಳಿಲ್ಲವೇ? ಆದರೆ ಈ ದೇಶದ ಜನಗಳು, ದುಡಿಯುವ ಜನಗಳ ಹಿತಾಸಕ್ತಿಗಳಿಗಾಗಿ ಹೋರಾಡುವ ಸಿಪಿಐ(ಎಂ) ಈ ಬೆಲೆಯೇರಿಕೆಗಳನ್ನು ಸ್ವೀಕರಿಸುವುದಿಲ್ಲ, ಅದನ್ನು ಬಲವಾಗಿ ವಿರೋಧಿಸುತ್ತಾರೆ.



ಬೆಂಗಳೂರಿನಲ್ಲಿ ನಡೆದ ಸಿಐಟಿಯು ಜನರಲ್ ಕೌನ್ಸಿಲ್ ಸಭೆಯ ವೇದಿಕೆ

ಜಾಗತೀಕರಣದ ಹೆಸರಿನಲ್ಲಿ ಭಾರತ ಗುಲಾಂ

- ಇ. ಬಾಲಾನಂದನ್. .... ಪುಟ 2 ನೋಡಿ

ಮೊಯಿಲಿಯವರ ಬಜೆಟ್: ಕೊಟ್ಟ ಭರವಸೆಗಳು ಈಡೇರಿಸುತ್ತವೆಯೇ?

ಎನ್.ಕೆ.ಉಪಾಧ್ಯಾಯ

48.91 ಕೋಟಿ ರೂ. ಹೊಸ ಹೊರೆಯ 26.16 ಕೋಟಿ ರೂ ಕೊರತೆಯ ಬಜೆಟನ್ನು ಮುಖ್ಯಮಂತ್ರಿ ಹಾಗೂ ಆರ್ಥಿಕ ಮಂತ್ರಿಯೂ ಆಗಿರುವ ಎಂ.ವೀರಪ್ಪ ಮೊಯಿಲಿಯವರು ವಿಧಾನಸಭೆಯಲ್ಲಿ ಮಂಡಿಸಿದ್ದಾರೆ. ತೋರಿಕೆಗೆ ಈ ಬಜೆಟ್ ಹೆಚ್ಚಿನ ಹೊರೆಯಿಲ್ಲದ ಮತ್ತು ನೀರಾವರಿ-ವಿದ್ಯುತ್ ಉತ್ಪಾದನೆಗೆ ಹೆಚ್ಚು ಹಣ ಮೀಸಲಿಟ್ಟ ಬಜೆಟ್ ಎಂದು ಕಂಡುಬಂದರೂ ಇದರ ಮೂಲ ಉದ್ದೇಶ ಕೇಂದ್ರ ಸರಕಾರ ಐಎಂಎಫ್ ಆದೇಶದಂತೆ ಅನುಸರಿಸುತ್ತಿರುವ ಆರ್ಥಿಕ ನೀತಿಯ ಪ್ರತಿಪಾದನೆಯ ಬಜೆಟ್ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಐಎಂಎಫ್ ಒತ್ತಡದಿಂದಾಗಿ ಕೇಂದ್ರ ಸರಕಾರ ಈಗಾಗಲೇ ಸಕ್ಕರೆ, ಗೋದಿ, ಅಕ್ಕಿ, ಉಕ್ಕು, ಕಲ್ಲಿದ್ದಲು ಮೊದಲಾದ ವಸ್ತುಗಳ ಬೆಲೆಯನ್ನು ಹೆಚ್ಚಿಸಿದೆ. ಮನ್‌ಮೋಹನ್‌ಸಿಂಗ್ ಅವರು ತಾವು ಮಂಡಿಸಲಿರುವ ಹೊಸ ಬಜೆಟ್‌ನಲ್ಲಿ ಇನ್ನೂ ಹೆಚ್ಚಿನ ತೆರಿಗೆ ವಿಧಿಸಲಿದ್ದಾರೆ. ರೈಲ್ವೇ ಮಂತ್ರಿ ಜಾಫರ್ ಶರೀಫ್ ಅವರು 1848 ಕೋಟಿ ರೂ. ಹೆಚ್ಚಿನ ಹೊರೆ ಹೇರಿದ್ದಾರೆ. ಮಾರ್ಕೆಟಿನಲ್ಲಿ ವ್ಯಾಪಾರಸ್ಥರು, ಹೋಟೆಲ್ ಮಾಲಕರೆಲ್ಲ ಹೇಳದೆ ಕೇಳದ ಬೆಲೆ ಹೆಚ್ಚಿಸುತ್ತಾರೆ. ಇದೊಂದು ತರದ ಹೊರೆಯಾದರೆ ವೀರಪ್ಪ ಮೊಯಿಲಿಯವರ ಸರಕಾರ ಜನಸಾಮಾನ್ಯರಿಗೆ ನೇರವಾಗಿಯೇ ಸಂಬಂಧ ಪಡುವಂಥ ಅಲ್ಯೂಮಿನಿಯಂ ಪಾತ್ರೆ, ಕನ್ನಡಕ, ಬಟ್ಟೆ, ಸೋಪು, ಮೈದಾ, ರವೆ, ಸಿದ್ಧ ಆಹಾರ ವಸ್ತುಗಳ ಬೆಲೆ ಹೆಚ್ಚಿಸಿದ್ದಾರೆ.

ಮಧ್ಯಮ ವರ್ಗದವರಿಗೆ ದಿನನಿತ್ಯ ವಸ್ತುಗಳ ಬೆಲೆ ಭಾರದ ಜೊತೆಯಲ್ಲಿಯೇ ಬೇರೆ ಎರಡು ತರದ ಹೊರೆ ಹೇರಿದ್ದಾರೆ ವೀರಪ್ಪ ಮೊಯಿಲಿಯವರು. ತಿಂಗಳಿಗೆ ರೂ. 4000 ಗಿಂತ ಹೆಚ್ಚಿಗೆ ವೇತನ ಪಡೆಯುವವರ ವೃತ್ತಿ ತೆರಿಗೆ ಹೆಚ್ಚಿಸಿದ್ದಾರೆ. ಪೆಟ್ರೋಲ್ ಮೇಲೆ ತರಿಗೆ ಏರಿಸಿರುವುದರಿಂದ ಅದರ ಬೆಲೆಯಲ್ಲಿಯೂ ಹೆಚ್ಚಳವಾಗುತ್ತದೆ.

ಬಡ-ಮಧ್ಯಮ ವರ್ಗದವರ ಮೇಲೆ ಹೆಚ್ಚಿನ ಕರಭಾರ-ಬೆಲೆ ಹೆಚ್ಚಳದ ಭಾರ ಬೀಳುವಂತೆ ಮಾಡುವ ಕ್ರಮ ಐಎಂಎಫ್ ನಿರ್ದೇಶನದ ಕೊಡುಗೆ, ಅದನ್ನು ವೀರಪ್ಪ ಮೊಯಿಲಿಯವರು ನಿಷ್ಠೆಯಿಂದ ಪಾಲಿಸಿದ್ದಾರೆ. ಅಂದರೆ ಅವರು ತಮ್ಮ ಪಕ್ಷದ ನೀತಿಯನ್ನು ಚಾಚೂ ತಪ್ಪದೆ ಜಾರಿಯಲ್ಲಿ ತಂದಿದ್ದಾರೆ.

ಅಭಿವೃದ್ಧಿ ಕೆಲಸಗಳ ಹೆಗ್ಗಳಿಕೆ

ವೀರಪ್ಪ ಮೊಯಿಲಿಯವರು ತಮ್ಮ ಬಜೆಟನ್ನು ವಿವರಿಸುತ್ತಾ ಪುಸ್ತಕಮುಂಗಡ ಪತ್ರದಲ್ಲಿ ನೀರಾವರಿ ಕ್ಷೇತ್ರಕ್ಕೆ 1400 ಕೋಟಿ ರೂ. ಒದಗಿಸಿರುವುದು ಒಂದು ದಾಖಲೆಯಾಗಿದೆಂದು ಇದರಲ್ಲಿ ಕಾವೇರಿಗೆ 300 ಕೋಟಿ, ಕೃಷ್ಣಾಗೆ 900 ಕೋಟಿ ಹಾಗೆಯೇ ಸಂಬಂಧಪಟ್ಟ ಯೋಜನೆಗಳ ಫಲಾನುಭವಿಗಳಿಂದ ನೀರಾವರಿ ನಿಧಿ ರೂಪದಲ್ಲಿ ಸಂಗ್ರಹಿಸಲು ಉದ್ದೇಶಿಸಿರುವ 500 ಕೋಟಿ ಅದರಂತೆಯೇ ವಿದ್ಯುತ್ ಕ್ಷೇತ್ರಕ್ಕೆ 700 ಕೋಟಿ ಒದಗಿಸಿರುವುದು ಕೂಡ ಒಂದು ದಾಖಲೆಯೆಂದು ಬೆನ್ನು ಚಪ್ಪರಿಸಿಕೊಂಡಿದ್ದಾರೆ. ಹೌದು. 2000 ಇಸವಿಯೊಳಗಾಗಿ ಕೃಷ್ಣೆಯಲ್ಲಿ ಹರಿಯುವ ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಲೇಬೇಕು. ಇಲ್ಲದಿದ್ದರೆ ನಮ್ಮ ರೈತರಿಗೆ ದ್ರೋಹ ಬಗೆದಂತಾಗುತ್ತದೆ. ನಮ್ಮ ಪಾಲಿನ ನೀರಿನ ಮೇಲಿನ ಹಕ್ಕನ್ನು ಕೈ ಬಿಟ್ಟಂತಾಗುತ್ತದೆ. ಆದರೆ 1994ರ ಮಾರ್ಚ್ ತಿಂಗಳೊಳಗೆ 900 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಲು ತಕ್ಕ ವ್ಯವಸ್ಥೆಯಿದೆಯೇ? ಹೋದ ವರ್ಷ ಕೃಷ್ಣಾ ಮೇಲ್ದಂಡೆಗಾಗಿ 100 ಕೋಟಿ ರೂಪಾಯಿ ಖರ್ಚು ಮಾಡಲಿಕ್ಕಾಗದಿರುವಾಗ ಈ ವರ್ಷ ಇಷ್ಟು ಹಣ ಖರ್ಚು ಮಾಡಲು ಸಾಧ್ಯವಿದೆಯೇ? ಇದರಲ್ಲಿಯೂ ಹೆಚ್ಚಿನ ಹಣ ಕಾಂಟ್ರಾಕ್ಟರರ ಬಾಕಿ ಉಳಿದ ಬಿಲ್ ಪಾವತಿ ಮಾಡಲಿಕ್ಕೆ ಖರ್ಚಾಗಬಹುದು. ಅದರ ಜೊತೆಯಲ್ಲಿಯೇ ರೂಪಾಯಿಯ ಅಪಮೌಲ್ಯ, ಹಣದುಬ್ಬರ, ಬೆಲೆ ಹೆಚ್ಚಳದ ಕಾರಣಗಳಿಂದಾಗಿ ಕೃಷ್ಣಾ ನೀರಾವರಿಗಾಗಿ ತೆಗೆದಿಟ್ಟಿರುವ 900 ಕೋಟಿ ರೂಪಾಯಿಯ ನಿಜವಾದ ಮೌಲ್ಯ 200-300 ಕೋಟಿ ಮಾತ್ರ ಆಗಬಹುದಾಗಿದೆ. ಹಾಗಿರುವಾಗ ಕೃಷ್ಣಾ ಯೋಜನೆಗೆ 900 ಕೋಟಿ ರೂಪಾಯಿಯೆಂದು ಬಜೆಟಿನಲ್ಲಿ ತೋರಿಸಿರುವುದು ಶ್ಲಾಘನೀಯವಾದರೂ ನಿಜವಾದ ಅರ್ಥದಲ್ಲಿ ಅಷ್ಟು ಹಣ ಲಭ್ಯವಾಗುವುದಿಲ್ಲವೆಂದನ್ನು ತಿಳಿಯತಕ್ಕದ್ದು.

ಕರ್ನಾಟಕ ಏಕೀಕರಣವಾಗಿ 34 ವರ್ಷಗಳಾದರೂ ಕೃಷ್ಣಾ ಯೋಜನೆಯನ್ನು ಸರಕಾರ ಈಗ ಏಳು ವರ್ಷಗಳಲ್ಲಿ ಆ ಯೋಜನೆ ಮುಗಿಸಿಯೇ ತೀರುತ್ತೇವೆಂದು ಹೇಳಿಕೊಳ್ಳುತ್ತಿರುವುದು, ಜಂಬದ ಕೋಳಿಯ ಕೂಗಾದೀತು. ಅಂತೂ ಇಷ್ಟು ಹಣ ಒದಗಿಸುತ್ತೇವೆಂದು ಹೇಳಿರುವುದು ಸ್ವಾಗತಾರ್ಹ.

ವಿದ್ಯುಚ್ಛಕ್ತಿಗಾಗಿ 700 ಕೋಟಿ

ವಿದ್ಯುಚ್ಛಕ್ತಿ ಅಭಾವ ನೀಗಿಸಲು ಈ ವರ್ಷ 700 ಕೋಟಿ ರೂ ಖರ್ಚು ಮಾಡುವ ಯೋಜನೆ ಸ್ವಾಗತಾರ್ಹ. ಆದರೆ ನೀರಾವರಿ ಯೋಜನೆಗಳಂತೆ ಈ ಯೋಜನೆ ಕೂಡಾ ಸಫಲತೆ ಕಂಡೀತೇ? ಶರಾವತಿ, ರಾಯಚೂರು, ಸೂಪಾ ಘಟಕಗಳಲ್ಲಿ ಸಮಾಧಾನಕಾರಕವಾಗಿ ವಿದ್ಯುಚ್ಛಕ್ತಿ ಉತ್ಪಾದನೆ ಆಗುತ್ತಿಲ್ಲ. ಅವು ಹಲವಾರು ಸಮಸ್ಯೆಗಳನ್ನೆದುರಿಸುತ್ತಿವೆಂಬುದರ ಕುರಿತು ಈಗಾಗಲೇ ಐಕ್ಯರಂಗದಲ್ಲಿ ಬರೆಯಲಾಗಿದೆ. ರಾಯಚೂರಿನಲ್ಲಿ ಐದನೇ ಘಟಕ ಸ್ಥಾಪಿಸಿ ವಿದ್ಯುಚ್ಛಕ್ತಿ ಹೆಚ್ಚು ಉತ್ಪಾದಿಸುವ ಕುರಿತು ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಕಳೆದೆರಡು ಮೂರು ವರ್ಷಗಳಿಂದ ರಾಯಚೂರಿನಲ್ಲಿ ಈಗಾಗಲೇ ಚಾಲ್ತಿಯ ಮೂರು ಘಟಕಗಳಲ್ಲಿ ಎರಡು ಘಟಕಗಳು ಸರಿಯಾಗಿ ಕೆಲಸ ನಡೆಯುತ್ತಿಲ್ಲವೆಂಬ ವರದಿಗಳು ಬೆಳಕು ಕಾಣುತ್ತಿವೆ. ಮೂರರಲ್ಲಿ ಒಂದು ಘಟಕದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ತನ್ನು ಸಾಗಿಸಲು ಸರಿಯಾದ ಸೌಲಭ್ಯ ಇಲ್ಲದಂತಾಗಿ ಆ ಯೂನಿಟ್ ಕೆಲಸ ನಿಲ್ಲಿಸುವಂತಾಗಿದೆ. ಈಗ ಎಸ್.ಎಂ. ಕೃಷ್ಣ ವಿದ್ಯುತ್ ಖಾತೆಯ ಜವಾಬ್ದಾರಿ ಹೊತ್ತಿರುವುದರಿಂದ ಅದರ ಕುರಿತು ಕಾಳಜಿ ವಹಿಸುವ ಹೇಳಿಕೆಗಳನ್ನು ನೀಡುತ್ತಿರುವುದರಿಂದ ಈ 700 ಕೋಟಿ ರೂಗಳ ಸದುಪಯೋಗವಾಗಬಹುದೋ ಎಂಬುದನ್ನು ಕಾದು ನೋಡಬೇಕಾಗಿದೆ.

ಹೋದ ವರ್ಷ ಬಂಗಾರಪ್ಪ ಸರಕಾರ ಕೈಗೊಂಡಂತೆ ಕೆಳಗಿನ ವರ್ಗದ ಹಿಂದುಳಿದ ಜನರಿಗೆ ಸಹಾಯವಾಗಬೇಕೆಂಬ ಹಲವಾರು ಯೋಜನೆಗಳನ್ನು ವೀರಪ್ಪ ಮೊಯಿಲಿಯವರೂ ಪ್ರಕಟಿಸಿದ್ದಾರೆ. ಬಂಗಾರಪ್ಪ ಸರಕಾರ 2.35 ಲಕ್ಷ ಮನೆಗಳನ್ನು ನಿರ್ಮಿಸುವ ಆಶ್ವಾಸನೆ ನೀಡಿತ್ತು. ಆದರೆ 1992 ಡಿಸೆಂಬರ್‌ರವರೆಗೆ ನಿರ್ಮಾಣವಾದ ಮನೆಗಳು ಕೇವಲ 1979 ಮಾತ್ರ. ಈ ವರ್ಷ ಜೂನ್ ತಿಂಗಳೊಳಗಾಗಿ ಅಂದರೆ ಮುಂದಿನ ಮೂರು ತಿಂಗಳಲ್ಲಿ 160.50 ಕೋಟಿ ರೂ. ಖರ್ಚು ಮಾಡಿ 1.05 ಲಕ್ಷ ಮನೆಗಳನ್ನು ಕಟ್ಟುವ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಇದು ಸಾಧ್ಯವೇ?

ಬಂಗಾರಪ್ಪನವರ ಸರಕಾರ ಪ್ರಕಟಿಸಿದ ಯೋಜನೆಗಳಲ್ಲದೆ "ನೆರಳಿನ ಭಾಗ್ಯ" "ಸಂಪದ", "ಆಶಾಕಿರಣ" ಮೊದಲಾದ ಹೊಸ ಯೋಜನೆಗಳನ್ನು ಮೊಯಿಲಿಯವರು ಪ್ರಕಟಿಸಿದ್ದಾರೆ.

ವೀರಪ್ಪ ಮೊಯಿಲಿಯವರ ಉದ್ದೇಶವನ್ನು ನೀರಾವರಿ, ವಿದ್ಯುತ್ ಗ್ರಾಮಾಭಿವೃದ್ಧಿ, ಹಿಂದುಳಿದ ಜನರಿಗೆ ಸವಲತ್ತು ಒದಗಿಸುವಂಥ ಕಾರ್ಯಕ್ರಮಗಳಿಗೆ ನಮ್ಮ ವಿರೋಧವಿಲ್ಲ. ಆದರೆ ಅವುಗಳಳೆಲ್ಲಾ ಕಾರ್ಯರೂಪದಲ್ಲಿ ಬಂದು ಸಾರ್ವಜನಿಕರಿಗೆ ಅವುಗಳ ಲಾಭ ತಟ್ಟೀತೇ? ಅದರ ಕುರಿತು ಮೊಯಿಲಿಯವರು ಸರಿಯಾದ ಕ್ರಮತೆಗೆದುಕೊಂಡಾರೇ ಎಂಬ ಪ್ರಶ್ನೆ ನಮ್ಮ ಮುಂದಿದೆ.

ಓದುಗರ ಗಮನಕ್ಕೆ

ಕಳೆದ ವಾರ ನಮ್ಮ ಡಿಟಿಪಿ ಘಟಕ ಹಾಗೂ ವಿದ್ಯುತ್ತಿನ ತೊಂದರೆಯಿಂದಾಗಿ ಸಂಚಿಕೆ ತಡವಾಗಿ ಪ್ರಕಟವಾಯಿತು. ಇದಕ್ಕಾಗಿ ಕ್ಷಮೆ ಕೋರುತ್ತೇವೆ.

ಈ ವಾರದಿಂದ ಕನ್ನಡ ಪತ್ರಿಕಾರಂಗದಲ್ಲಿ ಚಾಲ್ತಿಯಲ್ಲಿರುವ ಪದ್ಧತಿಯಂತೆ ಪತ್ರಿಕೆಯ ದಿನಾಂಕವನ್ನು ಬದಲಿಸಲಾಗಿದೆ.

ವಾರದ ನುಡಿ

ರಾಮನನ್ನು ನೆನೆದಾಗೆಲ್ಲ ನನ್ನ ಮನದಲ್ಲಿ ಎಲ್.ಕೆ.ಅಡ್ವಾಣಿಯ ಚಿತ್ರವೇ ಮೂಡಿ ಹಿಂಸೆಯಾಗುತ್ತದೆ. ದೇವರೆಂದರೆ ತಲ್ಲಣವಾಗುತ್ತದೆ. ನನ್ನಲ್ಲಿರುವ ಶ್ರೀರಾಮನನ್ನು ಬಿಜೆಪಿ ನಿರ್ನಾಮ ಮಾಡಿದೆ.

- ಡಾ. ಅಶೋಕ್ ಮಿತ್ರಾ
'ಟೈಮ್ಸ್ ಆಫ್ ಇಂಡಿಯಾ'
ಓದುಗರ ಪತ್ರದಲ್ಲಿ

ಸಿಐಟಿಯು ಜನರಲ್ ಕೌನ್ಸಿಲ್ ಸಭೆ

ಜಾಗತೀಕರಣದ ಹೆಸರಿನಲ್ಲಿ ಭಾರತ ಗುಲಾಂ ಆಗಲಿದೆ


- ಇ. ಬಾಲಾನಂದನ್

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಗತ್ ಸಿಂಗ್‌ರಂತಹ ವೀರರ ತ್ಯಾಗ ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯದ ಹಿನ್ನೆಲೆಯನ್ನು ನೆನಪಿಸಿ, ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ಭಾರತ ಸಾಧಿಸಿದ ಅಲ್ಪಸ್ವಲ್ಪ ಸಾಧನೆಯು ಕೇಂದ್ರದ ಹೊಸ ನೀತಿಗಳಿಂದ ನಾಶವಾಗುತ್ತಿದೆ. ಉತ್ತಮ ಗುಣ ಮಟ್ಟದ ಉತ್ಪಾದನೆ ನೀಡುತ್ತಿರುವ ಭಾರತದ ಸಾರ್ವಜನಿಕ ಉದ್ದಿಮೆಗಳನ್ನು ಕಾರ್ಮಿಕರ, ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಆರ್ಥಿಕತೆಯ ಜಾಗತೀಕರಣದ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ನುಂಗಿಹಾಕಲು ಮುಕ್ತ ಅವಕಾಶ ನೀಡಲಾಗುತ್ತಿದೆ. ಇದರಿಂದ ದೇಶದ ಆರ್ಥಿಕತೆ ಉದ್ಯೋಗವಕಾಶಗಳ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತದೆ. ದೇಶದ ಸುಮಾರು 2 ಮಿಲಿಯನ್ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಬದುಕು ಗಂಡಾಂತರದಲ್ಲಿದೆ ಎಂದು ಸಿಐಟಿಯು ಅಧ್ಯಕ್ಷ ಕಾಂ.ಇ.ಬಾಲಾನಂದನ್ ಎಚ್ಚರಿಸಿದರು. ಅವರು 21ರಂದು ಬೆಂಗಳೂರಿನ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಸಿಐಟಿಯು ಏರ್ಪಡಿಸಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಫೆಬ್ರವರಿ 19ರಿಂದ 21ರವರೆಗೆ ಬೆಂಗಳೂರಿನಲ್ಲಿ ನಡೆದ ಸಿಐಟಿಯುವಿನ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆ ನರಸಿಂಹರಾವ್ ಸರಕಾರದ ಅಪಾಯಕಾರಿ ದೇಶ- ವಿರೋಧಿ, ಜನ-ವಿರೋಧಿ ನೀತಿಗಳ ವಿರುದ್ಧ, ದೇಶದ ಆರ್ಥಿಕ ಸಾರ್ವಭೌಮತೆಯ ರಕ್ಷಣೆಯ ಹೋರಾಟಕ್ಕೆ, ಕೋಮುವಾದಿಗಳ ವಿರುದ್ಧ ಹೋರಾಟಕ್ಕೆ ಪರಿಣಾಮಕಾರಿ ನೇತೃತ್ವ ನೀಡುವಂತಹ ಸಂಘಟನೆ ಬೆಳೆಸುವ ಬಗ್ಗೆ ಚರ್ಚಿಸಿತು. ಈ ವಿಶೇಷ ಸಭೆಯ ನಂತರ ಸಾರ್ವಜನಿಕ ಸಭೆ ಏರ್ಪಡಿಸಲಾಗಿತ್ತು.

ಕರ್ನಾಟಕದಲ್ಲಿ ಸಿಗುವ ಶ್ರೇಷ್ಠ ಕಬ್ಬಿಣದ ಅದಿರನ್ನು ಟನ್ ಒಂದಕ್ಕೆ ಕೇವಲ 400 ರೂಗೆ ರಫ್ತು ಮಾಡಲಾಗುತ್ತಿದೆ. ಅದೇ ಅದಿರಿನಿಂದ ತಯಾರಾದ ಉಕ್ಕನ್ನು ನಾವು ಸುಮಾರು 10,000 ರೂಗಳನ್ನು ತೆತ್ತು ಪಡೆಯುತ್ತಿದ್ದೇವೆ.

ರಾಷ್ಟ್ರದಲ್ಲಿ ಉಕ್ಕಿನ ಅಗತ್ಯ ಇದ್ದರೂ ಸಹ ವಿಜಯನಗರ ಉಕ್ಕಿನ ಕಾರ್ಖಾನೆಗೆ ಶಂಕು ಸ್ಥಾಪನೆಯಾಗಿ 20 ವರ್ಷವಾದರೂ ಸಹ ಸರಕಾರ ಇಲ್ಲಿ ಬಂಡವಾಳ ಹೂಡಲು ಸಿದ್ಧವಿಲ್ಲ ಎಂದು ನಂತರ ಮಾತನಾಡಿದ ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಪಂಧೇ ಕೇಂದ್ರ ಸಾಮ್ರಾಜ್ಯಶಾಹಿ ಪರ ಆರ್ಥಿಕ ನೀತಿಯ ದುಷ್ಪರಿಣಾಮದ ಒಂದು ಉದಾಹರಣೆ ನೀಡಿದರು. ಭಾರತದಲ್ಲಿ ಸಮೃದ್ಧ ಪ್ರಾಕೃತಿಕ ಸಂಪತ್ತು ಇದೆ. ನುರಿತ ಕಾರ್ಮಿಕರಿದ್ದಾರೆ. ಆದರೆ ಸರ್ಕಾರದ ನೀತಿಗಳಿಂದಾಗಿ ಇವುಗಳ ಲಾಭ ವಿದೇಶೀ ಕಂಪೆನಿಗಳಿಗೆ ಹೋಗುತ್ತಿದೆ. ದೇಶದಲ್ಲಿ ಕೋಟ್ಯಾಂತರ ಜನ ಅರೆ ಬೆತ್ತಲೆ ಇರಬೇಕಾದ ಪರಿಸ್ಥಿತಿ ಇರುವಾಗಲೂ ಮೈಸೂರಿನ ಕೆ.ಆರ್. ಮಿಲ್‌ನಂತೆ ದೇಶದ ಟೆಕ್ಸ್‌ಟೈಲ್ ಕಾರ್ಖಾನೆಗಳು ಸರಕಾರದ ನೀತಿಗಳಿಂದ ಮುಚ್ಚಲ್ಪಡುತ್ತಿವೆ ಎಂದು ಅವರು ಖೇದ ವ್ಯಕ್ತಪಡಿಸಿದರು. ಭಾರತದ ಬಂಗಾಳದಲ್ಲಿ ದೊರೆಯುವ ಟಂಗ್‌ಸ್ಟನ್ ಲೋಹದ ಅದಿರನ್ನು ನಾವು ಟನ್ ಒಂದಕ್ಕೆ 350 ರೂನಂತೆ ರಫ್ತು ಮಾಡುತ್ತಿದ್ದೇವೆ. ಸಿದ್ಧಪಡಿಸಿದ ಟಂಗ್‌ಸ್ಟನ್ ತಂತಿಯನ್ನು ಸುಮಾರು 60000ದಿಂದ 70000ರೂಗಳನ್ನು ಕೊಟ್ಟು ಆಮದು ಮಾಡಿಕೊಳ್ಳುತ್ತಿದ್ದೇವೆ ಎಂದು ಅವರು ಸಾಮ್ರಾಜ್ಯಶಾಹಿಯ ಶೋಷಣೆಯ ಸ್ವರೂಪವನ್ನು ವಿವರಿಸಿದರು. ದೇಶದಲ್ಲಿ ಲಭ್ಯವಿರುವ ಚಿನ್ನದ ಉತ್ಪಾದನೆಗೆ ಗಮನ ನೀಡದೆ ಹೊರಗಿನಿಂದ ಚಿನ್ನ ಆಮದಿಗೆ ತೆರಿಗೆ ರಹಿತ ಮುಕ್ತ ಅವಕಾಶ ಮಾಡಿಕೊಡಲಾಗಿದೆ ಎಂದು ಟೀಕಿಸಿದರು.

ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಕೋಮುವಾದಿಗಳು ಜನರ ಗಮನವನ್ನು ಇದರಿಂದ ಬೇರೆಡೆ ಸೆಳೆದು ಕೋಮು ಗಲಭೆಗಳನ್ನುಂಟುಮಾಡುತ್ತಿದ್ದಾರೆ. ಕೋಮು ಹಿಂಸಾಚಾರಕ್ಕೆ ಗುರಿಯಾದವರು ಬಹುಪಾಲು ಅಮಾಯಕ ಗುಡಿಸಲು ವಾಸಿಗಳು ಕಡು ಬಡವರು ಎಂದ ಅವರು ಒಂದು ಕಡೆ ಕೇಂದ್ರ ಸರಕಾರ ಭಾರತವನ್ನು ಸಾಮ್ರಾಜ್ಯಶಾಹಿಗಳಿಗೆ ಮಾರುವ ಪ್ರಯತ್ನ ನಡೆಸಿದ್ದಾರೆ. ಇನ್ನೊಂದೆಡೆ ಕೋಮುವಾದಿಗಳು ಭಾರತವನ್ನು ಛಿದ್ರ ಛಿದ್ರ ಮಾಡಲು ಪ್ರಯತ್ನಿಸುತ್ತಿದ್ದಾರೆ. ಈ ಅಪಾಯಗಳ ವಿರುದ್ಧ ಕಾರ್ಮಿಕವರ್ಗ ಧೀರ ಹೋರಾಟ ನಡೆಸಬೇಕೆಂದು ಅವರು ಕರೆ ನೀಡಿದ ಅವರು ವಿಶೇಷವಾಗಿ ಕರ್ನಾಟಕದ ಸಿಐಟಿಯು ಇಂತಹ ಅಪಾಯಗಳ ವಿರುದ್ಧ ಕಾರ್ಮಿಕ ವರ್ಗವನ್ನು ಅಣಿನೆರೆಸುವಲ್ಲಿ ಯಶಸ್ವಿಯಾಗುವುದು ಎಂಬ ವಿಶ್ವಾಸವನ್ನು, ಆಶಯವನ್ನು ವ್ಯಕ್ತಪಡಿಸಿದರು.



ಅಖಿಲ ಭಾರತೀಯ ಸಿಐಟಿಯು ಜನರಲ್ ಕೌನ್ಸಿಲ್ ಸಭೆಯ ಉದ್ಘಾಟನಾ ಅಧಿವೇಶನ. ಕೋಮು ದಳ್ಳುರಿಗೆ ಬಲಿಯಾದವರ ನೆನಪಿನಲ್ಲಿ ಮೌನವಾಗಿ ನಿಂತಿರುವ ಸಿಐಟಿಯು ಮುಖಂಡರು ಹಾಗೂ ಜನರಲ್ ಕೌನ್ಸಿಲ್ ಸದಸ್ಯರು.

ಮಾರ್ಚ್ 30 ಬೃಹತ್ ರ‍್ಯಾಲಿ

ಕಾಂಗ್ರೆಸ್ ಜನ ವಿರೋಧಿ ನೀತಿಗಳ ವಿರುದ್ಧ, ಕೋಮುವಾದಿಗಳ ಅಪಾಯಕಾರಿ ಆಟಗಳ ವಿರುದ್ಧ ಮಾರ್ಚ್ 30 ರಂದು ರಾಷ್ಟ್ರೀಯ ಏಕತಾ ಆಂದೋಲನ ಸಮಿತಿಯು ದೆಹಲಿಯಲ್ಲಿ ನಡೆಸುವ ಬೃಹತ್ ರ‍್ಯಾಲಿಯ ಯಶಸ್ಸಿಗೆ ಶ್ರಮಿಸಲು ಸಭೆ ಕರೆ ನೀಡಿತು.

ನವಂಬರ್ 25ರ ರ‍್ಯಾಲಿಯ ಕರೆಯಂತೆ ರೈತರು, ಕೂಲಿಕಾರರು, ವಿದ್ಯಾರ್ಥಿಗಳು, ಯುವಜನ, ಮಹಿಳೆಯರು ಇತ್ಯಾದಿ ಜನವಿಭಾಗಗಳನ್ನು ಹಂತ ಹಂತವಾಗಿ ಅಣಿನೆರೆಸಿ ಭಾರತ್ ಬಂದ್‌ವರೆಗೆ ವಿವಿಧ ಘಟ್ಟದ ಆಂದೋಲನ ನಡೆಸುವ ದಿಕ್ಕಿನಲ್ಲಿ ಸಿಐಟಿಯುವಿನ ಎಲ್ಲಾ ಘಟಕಗಳು ಎಲ್ಲಾ ಜನವಿಭಾಗಗಳನ್ನು ಅಣಿನೆರೆಸಬೇಕೆಂದು ಜನರಲ್ ಕೌನ್ಸಿಲ್ ಕರೆ ನೀಡಿತು. ಕೇಂದ್ರ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಹಾಗೂ ಸಮಾನ ಮನಸ್ಕ ರಾಜಕೀಯ ಪಕ್ಷ ಇತರರೊಂದಿಗೆ ಕೇಂದ್ರ ಹೊಸ ಆರ್ಥಿಕ ಕೈಗಾರಿಕಾ ನೀತಿಗಳ ವಿರುದ್ಧ ಕೋಮುವಾದದ ವಿರುದ್ಧ ಮುಂದಿನ ದಿನಗಳಲ್ಲಿ "ಭಾರತ್ ಬಂದ್" ಸಂಘಟಿಸಬೇಕೆಂದು ಇಲ್ಲಿ ನಡೆದ ಸಿ.ಐ.ಟಿ.ಯು ಜನರಲ್ ಕೌನ್ಸಿಲ್ ಸಭೆ ತೀರ್ಮಾನಿಸಿದೆ.

ಕಾಂ. ಸೂರ್ಯನಾರಾಯಣರಾವ್ ಭಾಷಣ ಮಾತನಾಡುತ್ತಾ ಕಾರ್ಮಿಕ ವರ್ಗದಲ್ಲಿ ಕೋಮು ಭಾವನೆ ಬೆಳೆದರೆ ದೇಶದ ವಿನಾಶ ಖಚಿತ ಎಂದು ಎಚ್ಚರಿಸಿದ್ದರು.

ದೇಶದ ಜಾತ್ಯಾತೀತ ರಾಜಕೀಯ ಪಕ್ಷಗಳು, ಸಂವಿಧಾನದ, ಜಾತ್ಯತೀತತೆ ರಕ್ಷಣೆಗೆ, ಸರಕಾರ ತೆಗೆದುಕೊಳ್ಳುವ ಕ್ರಮವನ್ನೆಲ್ಲಾ ಬೆಂಬಲಿಸುವ ಭರವಸೆಯನ್ನು ನೀಡಿದ್ದಾಗ್ಯೂ ಡಿಸೆಂಬರ್ 6 ರಂದು ಮಸೀದಿಯ ನಾಶವನ್ನು ತಡೆಯಲಾಗದ ವೈಫಲ್ಯವನ್ನು ತೀವ್ರವಾಗಿ ಖಂಡಿಸಿದರು.

ಕೋಮು ಗಲಭೆಗಳಲ್ಲಿ ಯಾವ ಬಂಡವಾಳಶಾಹಿಯೂ, ಶ್ರೀಮಂತರೂ ಸಾಯುತ್ತಿಲ್ಲ. ಮುಂದೈನ ಕೋಮು ಗಲಭೆಗಳ ಸಂದರ್ಭದಲ್ಲಿ ಕೇವಲ ಮುಸ್ಲಿಮರಷ್ಟೇ ಅಲ್ಲದೆ ಮರಾಠಿಯೇತರ ಭಾಷಾ ಅಲ್ಪಸಂಖ್ಯಾತರು ಸಹ ಕೋಮುವಾದಿಗಳ ತೀವ್ರ ಧಾಳಿಗೆ ತುತ್ತಾಗಿದ್ದಾರೆ. ಈ ಸಂಕುಚಿತ ಮನೋಭಾವದ ಅಪಾಯವನ್ನು ಕಾರ್ಮಿಕರು ಮನಗಾಣಬೇಕು. ಕಾರ್ಮಿಕ ವರ್ಗ ಐಕ್ಯತೆಯನ್ನು ಬೆಳಸಬೇಕೆಂದು ಕರೆ ನೀಡಿದರು.

ಕಾಂ.ಎಸ್.ಕೆ.ಉಪಾಧ್ಯಾಯ ಅವರು ವಂದನಾರ್ಪಣೆ ಸಲ್ಲಿಸಿದರು.

ಇದಕ್ಕೆ ಮೊದಲು ಕಾರ್ಮಿಕರ ಒಂದು ಬೃಹತ್ ವರ್ಣರಂಜಿತ ಮೆರವಣಿಗೆ ನಡೆಯಿತು.

ರಾಜ್ಯದ ವಿವಿಧ ಭಾಗಗಳಿಂದ ಬಂದ ಸಾವಿರಾರು ಜನ ಒಕ್ಕೊರಲಿನಿಂದ ಕೂಗಿದರು. "ಕಾರ್ಮಿಕವರ್ಗದ ಐಕ್ಯತೆ ಚಿರಾಯುವಾಗಲಿ", "ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳಿಗೆ ಧಿಕ್ಕಾರ," "ಸಾಮ್ರಾಜ್ಯಶಾಹಿ ಐ.ಎಂ.ಎಫ್., ಅಮೇರಿಕಾಗಳ ಪರತ್ತುಗಳಿಗೆ ಧಿಕ್ಕಾರ."

ಅಂದು ಸಂಜೆ 4 ಗಂಟೆಗೆ ನಗರದ ಚಿಕ್ಕಲಾಲ್‌ಬಾಗ್‌ನಿಂದ ಹೊರಟ ರ‍್ಯಾಲಿ, ಗಣನೀಯ ಸಂಖ್ಯೆಯ ಮಹಿಳೆಯರೂ ಸೇರಿದಂತೆ ನೂರಾರು ಕೆಂಪು ಸ್ವಯಂ ಸೇವಕರ ಶಿಸ್ತು ಬದ್ಧ ನಡಿಗೆಯ ಹಿಂದೆ ಸಾಗಿತು. ಡಂ ಡಂ ಢ್ರಂನ ಸದ್ದು, ಪಟಿ, ಪಟಿ ಕೆಂಬಾವುಟಗಳ ಹಾರಾಟ. ಮನೆಯೊಳಗಿದ್ದ ಜನ ಹೊರಕ್ಕೆದ್ದು ಬಂದರು. ಕಾಟನ್ ಪೇಟೆ, ಮಾರ್ಕೆಟ್ ಮೂಲಕ ಹಾದು ಬಂದ ರ‍್ಯಾಲಿಗೆ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿ ಸಂಗಾತಿಗಳಿಂದ ಕ್ರಾಂತಿಗೀತೆಯ ಸ್ವಾಗತದ ನಂತರ ಸಾರ್ವಜನಿಕ ಸಭೆ ಆರಂಭವಾಯಿತು.

ವರದಿ : ರಾಮಕೃಷ್ಣ

ಬಜೆಟ್ ಮೊದಲ ಪೆಟ್ಟುಗಳು

ಕೇಂದ್ರ ಸರಕಾರ ಸಕ್ಕರೆ ಬೆಲೆಯನ್ನು ಶೇ. 20ರಷ್ಟು ಹೆಚ್ಚಿಸಿದೆ. ಬಜೆಟ್ ಅಧಿವೇಶನ ಆರಂಭವಾಗುವ ಸ್ವಲ್ಪ ಮೊದಲೇ ಕೈಗೊಂಡಿರುವ ಈ ಕ್ರಮ ಸರಕಾರಕ್ಕೆ ಸಂಸತ್ತಿನ ಬಗೆಗೆ ಎಂತಹ ಧೋರಣೆ ಇದೆ ಎಂಬುದನ್ನು ತೋರಿದೆ. ಬಡ ದುಡಿವ ಜನರ ಹೊಟ್ಟೆಯ ಮೇಲೆ ಹೊಡೆದ ಈ ಕ್ರಮವನ್ನು ಸಂಸತ್ತು ಅಧಿವೇಶನದಲ್ಲಿರುವಾಗ ಕೈಗೊಂಡರೆ ಸರಕಾರ ಜನಪ್ರತಿನಿಧಿಗಳಿಂದ ಪ್ರಬಲ ವಿರೋಧ ಬರಬಹುದಿತ್ತು. ಆದ್ದರಿಂದಲೇ ಈ ಹಿಂಬಾಗಿಲಿನ ಕ್ರಮ. ಸರಕಾರ ಐಎಂಎಫ್ ವಿಶ್ವಬ್ಯಾಂಕ್‌ಗಳಿಗೆ ಎಷ್ಟು ಗುಲಾಮಗಿರಿ ತೋರುತ್ತಿದೆಯೆಂದರೆ ದೇಶಪ್ರೇಮಿಯಾದ ಎಂತಹವನಿಗೂ ಮೈ ಉರಿಯುತ್ತದೆ. ನಮ್ಮ ಬಡ ಜನತೆಯ ಬಗ್ಗೆ ಅಷ್ಟೇ ತುಚ್ಛೀಕಾರ ಭಾವನೆ ಸರಕಾರದ್ದು. ಬಹುಶಃ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ದಿಸೆಯಲ್ಲಿ ಇದು ಮೊದಲ ಹೆಜ್ಜೆ ಇರಬಹುದು.

ಕಲ್ಲಿದ್ದಲು ಬೆಲೆ ಹೆಚ್ಚಳ ಮತ್ತೊಂದು ಹೊಡೆತ

ಸಕ್ಕರೆ ಬೆಲೆ ಹೆಚ್ಚಿಸಿದ ಹಿನ್ನೆಲೆಯಲ್ಲೇ ಕಲ್ಲಿದ್ದಲಿನ ಬೆಲೆಯ ಹೆಚ್ಚಳ. ಸಂಸತ್ತನ್ನು ಎದುರಿಸುವ ಕನಿಷ್ಠ ಧೈರ್ಯವೂ ಇಲ್ಲದ ಹೇಡಿತನ ಕೇಂದ್ರ ಸರಕಾರದ್ದು.(ಇಂತಹ ಸರಕಾರ ಬಾಬ್ರಿ ಮಸೀದಿಯ ನಾಶವಾಗುವಾಗ ಮತ್ತು ನಂತರ ದೇಶವೇ ಹೊತ್ತಿ ಉರಿವಾಗ ಮೂಕಪ್ರೇಕ್ಷಕನಾಗಿದ್ದು ಸಹಜವಿರಬಹುದಲ್ಲವೇ?) ಕಲ್ಲಿದ್ದಲು ಬೆಲೆಯನ್ನು ಶೇ. 12.8ರಷ್ಟು ಹೆಚ್ಚಿಸಿರುವ ಸರಕಾರ ಇದರ ಪರಿಣಾಮ ಕನಿಷ್ಠ ಪ್ರಮಾಣದ್ದಾಗಿರುತ್ತದೆ ಎಂಬ ಲಜ್ಜೆಗೇಡಿತನದ ಹೇಳಿಕೆ ನೀಡಿದೆ. ವಿದ್ಯುತ್ತು, ಉಕ್ಕು ಇತ್ಯಾದಿ ಮೂಲಭೂತ ವಸ್ತುಗಳ ಉತ್ಪಾದನೆಗೆ ಅವಶ್ಯವಾದ ಕಲ್ಲಿದ್ದಲಿನ ಬೆಲೆ ಹೆಚ್ಚಳವಾದಾಗ ವಿದ್ಯುತ್ ಮತ್ತು ಉಕ್ಕಿನ ಬೆಲೆ ಹೆಚ್ಚಲೇಬೇಕಲ್ಲವೇ ಉದ್ಯಮ ಕೃಷಿ ಇತ್ಯಾದಿಗಳಿಗೆಲ್ಲಾ ಅವಶ್ಯಬೇಕಾಗುವ ಉಕ್ಕು ವಿದ್ಯುತ್‌ಗಳ ಬೆಲೆ ಹೆಚ್ಚಾದರೆ ಜನಜೀವನದ ಎಲ್ಲಾ ವಿಭಾಗಗಳಲ್ಲೂ ಇದು ಬೆಲೆ ಹೆಚ್ಚಿಸುತ್ತದಲ್ಲವೇ? ಹಸಿವಿನಿಂದ ಕಂಗಾಲಾಗಿ ಮೂರ್ಛೆ ಹೋದವನ ಹೊಟ್ಟೆಗೆ ಹೊಡೆದು "ಇವನಿಗೆ ಈ ಹೊಡೆತದಿಂದ ನೋವೇ ಆಗೋಲ್ಲ. ಯಾಕೆಂದರೆ ಆತ ಕೂಗುತ್ತಿಲ್ಲ ನೋಡಿ" ಎಂಬಂತಲ್ಲವೇ ಇದು.

ಏಶಿಯಾ ಅಭಿವೃದ್ಧಿ ಬ್ಯಾಂಕ್ ಸಾಲ ವಿದೇಶೀಯರ ಅಭಿವೃದ್ಧಿಗಾಗಿ

ವಿಶ್ವ ಬ್ಯಾಂಕ್‌ನ ಈ ತಮ್ಮ ವಿಶ್ವಬ್ಯಾಂಕ್‌ನ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡಿದ್ದಾನೆ. ಭಾರತದ ಅಭಿವೃದ್ಧಿಯಲ್ಲಿ ಈ ಬ್ಯಾಂಕ್ 1994 ರಿಂದ 1996ರ ಅವಧಿಗೆ ದೊಡ್ಡ ಕಾರ್ಯಕ್ರಮವನ್ನೇ ಹಮ್ಮಿಕೊಂಡಿದೆಯಂತೆ. ಕೃಷಿಗೆ ಅಭಿವೃದ್ಧಿಗೆ ಸಾಲ ನೀಡುವ ಈ ಬ್ಯಾಂಕ್‌ಗಳು ನಮ್ಮ ದೇಶದ ಉದ್ಯಮವನ್ನು ಆಗಲೇ ಬಹುರಾಷ್ಟ್ರೀಯ ಕಂಪೆನಿಗಳಿಗೆ ಒಪ್ಪಿಸುವಂತೆ ಕಾಣುತ್ತದೆ. ತಮ್ಮ ಶರತ್ತುಗಳಿಂದ ನಾವು ಯಾವ ಉದ್ಯಮ ಅಭಿವೃದ್ಧಿಪಡಿಸಬೇಕು, ಯಾವುದನ್ನು ಕೈಬಿಡಬೇಕೆಂದು ಹೇಳುತ್ತಿರುವ ಇವುಗಳ ಆಸಕ್ತಿ ಇರುವುದು ಬಹುರಾಷ್ಟ್ರೀಯ ಕಂಪೆನಿಗಳಿಗೆ ನೆರವಾಗುವುದರಲ್ಲಿ.

ದೇಶದ ಪರಿಸರ ಮಾಲಿನ್ಯದಂತಹ ಸಮಸ್ಯೆಗಳ ಬಗೆಗೆ ಮಾತನಾಡುತ್ತಿರುವ ಏಶಿಯಾ ಅಭಿವೃದ್ಧಿ ಬ್ಯಾಂಕ್ ನಮ್ಮ ಕೃಷಿಯನ್ನು ಹೇಗೆ ಅಭಿವೃದ್ಧಿಪಡಿಸಬೇಕೆಂಬುದರ ಬಗ್ಗೆ ನಮಗೇ ಪಾಠ ಹೇಳುವ ಪೀಠಿಕೆ ಹಾಕುತ್ತಿರುವಂತಿದೆ.

ಕಾರ್ಲ್ ಮಾರ್ಕ್ಸ್‌ನ ನಾಡಿನಿಂದ ಬಂದ ರಣಹದ್ದು

ಕಾರ್ಲ್ ಮಾರ್ಕ್ಸ್‌ನ ಜನ್ಮ ಸ್ಥಳವಾದ ಜರ್ಮನಿ ದೇಶದ ಛಾನ್ಸಲರ್ ದೇಶಕ್ಕೆ ಭೇಟಿ ಇತ್ತು ಹೋಗಿದ್ದಾನೆ. ಆರ್ಥಿಕವನ್ನು ಉದಾರೀಕರಿಸುತ್ತಿರುವ ಭಾರತದ್ದನ್ನು ತಮ್ಮ ಮೇವಿಗೆ ಹುಲ್ಲುಗಾವಲಾಗಿಸಿಕೊಳ್ಳಲು ಬಂದ ಈತ ಮುಕ್ತ ಮಾರುಕಟ್ಟೆಗಳ ಲಾಭದ ಬಗ್ಗೆ ನಮಗೆ ಸಲಹೆ ನೀಡಿದ್ದಾನೆ. ಕಾರ್ಲ್ ಮಾರ್ಕ್ಸ್‌ನ ವಿಚಾರಗಳ ಬಗ್ಗೆ ಒಲವು ಬೆಳೆಸಿಕೊಳ್ಳಬೇಡಿ ಎಂದೂ ಸಹ ಹೋಗಿದ್ದಾನೆ.

ಕಾರ್ಲ್ ಮಾರ್ಕ್ಸ್‌ನ ವಿಚಾರಗಳ ಬಗೆಗೆ ಒಲವು ಬೆಳೆಸಿಕೊಂಡರೆ ಆತನ ದೇಶ ನಮ್ಮ ದೇಶವನ್ನು ಶೋಷಿಸುವುದು ಸಾಧ್ಯವಾಗದು ಎಂಬ ಭಯವಿರಬೇಕಲ್ಲವೇ ಹೆಲ್ಮಟ್ ಕೋಹ್ಲನಿಗೆ.

ಮೊನ್ನೆ ಬೆಂಗಳೂರಿನಲ್ಲಿ ನಡೆದ ಸಿಐಟಿಯು ಜನರಲ್ ಕೌನ್ಸಿಲ್‌ನ ಸಭೆ ಮುಕ್ತಾಯದ ರ‍್ಯಾಲಿಯಲ್ಲಿ ಕೇಳಿಬಂದ "ವಿಶ್ವ ಕಾರ್ಮಿಕರೇ ಒಂದಾಗಿ" ಎಂಬ ಘೋಷಣೆ ಈ ಕೋಹ್ಲನಿಗೆ ಹೇಳಿದ ಉತ್ತರವಲ್ಲವೇ?

ಡಾ.ರಾಜಾ ಚೆಲ್ಲಯ್ಯನ ಶಿಫಾರಸ್ಸು ಮತ್ತೂ ಬರಲಿದೆ ಆಮದು ಸುಂಕ ಕಡಿತ

ವಿಶ್ವಬ್ಯಾಂಕ್ ಐಎಂಎಫ್‌ಗಳ ಸೂಚನೆಯಂತೆ ನೇಮಕಗೊಂಡ ರಾಜಾ ಚೆಲ್ಲಯ್ಯ ಸಮಿತಿ ನೀಡಿದ ವರದಿಯ ಅನುಷ್ಠಾನ ಮಾಡಲು ಸರಕಾರ ಪಣ ತೊಟ್ಟಿರುವಂತಿದೆ. ಬ್ಯಾಂಕ್-ಫಂಡ್ ಧಣಿಗಳನ್ನು ಮುಚ್ಚಿಸಿ ಗೋಗರೆದು ಸಾಲ ಪಡೆದು ದೇಶವನ್ನೇ ಮಾರಲಿರುವ ಸರಕಾರ ಆಮದು ಸುಂಕವನ್ನು ತೀವ್ರವಾಗಿ ಕಡಿತಗೊಳಿಸುವ ವಿಚಾರ ಹೊಂದಿದೆ. ವಿದೇಶೀ ವಿನಿಮಯದ ತೀವ್ರ ಕೊರತೆ, ದೇಶೀ ಉದ್ಯಮಗಳಲ್ಲಿ ಹಿಂಜರಿತ, ನಿರುದ್ಯೋಗ ಇತ್ಯಾದಿ ಹಲವು ಹತ್ತು ಸಮಸ್ಯೆಗಳು ಉಲ್ಬಣಗೊಳ್ಳುತ್ತಿದ್ದರೂ ನಮ್ಮ ಸರಕಾರಕ್ಕೆ ಇವುಗಳ ನೆನಪೇ ಇಲ್ಲ. ಬಜೆಟ್‌ನಲ್ಲಿ ಹೇಗಾದರೂ ಮಾಡಿ ಹಣಕಾಸಿನ ಖೋತಾ ತಗ್ಗಿಸುವ ಉದ್ದೇಶ ಹೊಂದಿರುವ ಸರಕಾರಕ್ಕೆ ದೇಶದ ಸಮಸ್ಯೆಗಳ ಬಗ್ಗೆ ಚಿಂತಿಸುವ ವ್ಯವಧಾನವೆಲ್ಲಿ?

ಸಾಯಲಿರುವ ಸಹಕಾರಿ ಚಳುವಳಿಗಳು

ರಾಜಾ ಚೆಲ್ಲಯ್ಯ ಸಹಕಾರಿ ಬಗೆಗೂ ಒಂದು ಶಿಫಾರಸ್ಸು ಮಾಡಿದ್ದಾನೆ. ಶಿಫಾರಸ್ಸಿನಂತೆ ಸಹಕಾರಿ ಸಂಘಗಳಿಗೆ ಇಲ್ಲಿಯ ತನಕ ದೊರೆಯುತ್ತಿದ್ದ ರಿಯಾಯಿತಿಗಳನ್ನು ಹಿಂತೆಗೆದುಕೊಳ್ಳಬೇಕು. ಅಂದರೆ ಮೊದಲೇ ರೋಗಗ್ರಸ್ತವಾಗಿರುವ ಸಹಕಾರಿ ಸಂಘಗಳು ಮತ್ತು ಸಹಕಾರಿ ಬ್ಯಾಂಕುಗಳು ಪೂರ್ಣವಾಗಿ ಸಾಯಬೇಕಾಗುತ್ತದೆ.

ಬಂಡವಾಳಶಾಹಿ ಮತ್ತು ಕಮ್ಯುನಿಸಂಗಳು ಎರಡು ಕೊನೆಗಳಾದರೆ ಸಹಕಾರ ಮಧ್ಯಮದ್ದಾಗಿದ್ದು ಉತ್ತಮವಾದದ್ದು ಎನ್ನುತ್ತಿದ್ದ ಸಹಕಾರವಾದಿಗಳು ಈ ಕ್ರಮಕ್ಕೆ ಏನೆನ್ನುವರೋ? ಬಂಡವಾಳವೆಂದರೆ ಹಣ ಲಾಭ ಇಷ್ಟೇ ಉಳಿದದ್ದೆಲ್ಲಾ ಬುರುಡೆ ಎಂಬುದು ಈಗ ಸ್ಪಷ್ಟವಲ್ಲವೇ?

ಭೀಕರ ರೈಲ್ವೇ ಬಜೆಟ್

ಬಜೆಟ್ ಪೂರ್ವ ಕ್ರಮಗಳು ಮತ್ತು ರೈಲ್ವೇ ಬಜೆಟ್ ಇಷ್ಟು ಭೀಕರವಾಗಿರಬೇಕಾದರೆ ಮಂಡನೆಯಾಗಲಿರುವ ಕೇಂದ್ರ ಹಣಕಾಸು ಬಜೆಟ್ ಇನ್ನೆಷ್ಟು ಭೀಕರವಾಗಿರುವುದೋ?

ಸಿಬಿಐಗೆ ಛೀಮಾರಿ

ಜಂಟಿ ಪಾರ್ಲಿಮೆಂಟರಿ ಸಮಿತಿ ಸಿಬಿಐಗೆ ಛೀಮಾರಿ ಹಾಕಿದೆ. ಕಾರಣ: ಮಾಧವನ್‌ರ ವಿಷಯದಲ್ಲಿ ಸಿಬಿಐ ಆತುರದಿಂದ ಸಾರ್ವಜನಿಕ ಹೇಳಿಕೆಗಳನ್ನು ನೀಡಿದ್ದು. ಸಿಬಿಐನೊಂದಿಗೆ ತನಗಿದ್ದ ಗಂಭೀರ ಭಿನ್ನಾಭಿಪ್ರಾಯಗಳಿಂದಾಗಿ ತಾನು ಅವಧಿಗೆ ಮುನ್ನ ನಿವೃತ್ತಿ ಹೊಂದಬೇಕಾಯಿತೇ ಹೊರತು ಸಿಬಿಐ ಮತ್ತು ಸರಕಾರಗಳು ಹೇಳಿರುವಂತೆ ವೈಯಕ್ತಿಕ ಕಾರಣಗಳಿಗಾಗಿ ಅಲ್ಲ ಎಂದು ಸಿಬಿಐನ ನಿವೃತ್ತ ಅಧಿಕಾರಿ ಟೀಕೆ. ಮಾಧವನ್ ಹೇಳಿಕೆ ನೀಡಿದ್ದರಿಂದ ಸಿಬಿಐಗೆ ಇರಿಸುಮುರಿಸಾಗಿತ್ತು. ಸಿಬಿಐ ಜಂಟಿ ಪಾರ್ಲಿಮೆಂಟರಿ ಸಮಿತಿಗೆ ಪತ್ರ ಬರೆದು ಪತ್ರಿಕಾ ಹೇಳಿಕೆ ನೀಡಲು ಅನುಮತಿ ಕೇಳಿತ್ತು. ಆದರೆ ಅನುಮತಿ ಬರುವ ಮೊದಲೇ ಅದು ಪತ್ರಿಕಾ ಹೇಳಿಕೆ ನೀಡಿತು. ದೇಶದ ಅತ್ಯುನ್ನತ ತನಿಖಾ ಸಂಸ್ಥೆ ಸುಳ್ಳುಗಳನ್ನು ಹೇಳಿ ಈಗ ತನ್ನ ವರ್ತನೆಗಳನ್ನು ಸಮರ್ಥಿಸಿಕೊಳ್ಳಲು ಪರದಾಡುತ್ತಿರುವುದು ಹೇಸಿಗೆ ಹುಟ್ಟಿಸುತ್ತಿದೆಯಲ್ಲವೇ?

ಇಂಡಿಯನ್ ರೈಲ್ವೇ ಫೈನಾನ್ಸ್ ಕಾರ್ಪೋರೇಶನ್(ಐಆರ್‌ಎಫ್‌ಸಿ) ಹೊರಬರಬೇಕಾಗಿರುವ ಹೊಲಸುಗಳು

ಜಂಟಿ ಪಾರ್ಲಿಮೆಂಟರಿ ಸಮಿತಿ ಇಂಡಿಯನ್ ರೈಲ್ವೇ ಫೈನಾನ್ಸ್ ಕಾರ್ಪೋರೇಶನ್ ಮತ್ತು ಕ್ಯಾನ್ ಫಿನಾ ನಡುವಿನ ವ್ಯವಹಾರಗಳ ಹೆಚ್ಚಿನ ತನಿಖೆ ಮಾಡಲಿದೆ.

ಐಆರ್‌ಎಫ್‌ಸಿ 1990-91ರ ಸಾಲಿನಲ್ಲಿ 1170 ಕೋಟಿ ರೂಪಾಯಿಗಳ ಬಾಂಡ್‌ಗಳನ್ನು ಮಾರಿತ್ತು. ಈದರ ನಿರ್ವಹಣೆಗೆ ಬರೀ 3.06 ಕೋಟಿ ರೂಪಾಯಿಗಳ ಖರ್ಚಾಗಿತ್ತು. ಆದರೆ 1991-92ರಲ್ಲಿ 1500 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದ ಅದು ಮಾಡಿದ ನಿರ್ವಹಣಾ ವೆಚ್ಚವೆಷ್ಟು ಗೊತ್ತೇ? 82 ಕೋಟಿ ರೂಪಾಯಿಗಳು!!

ಕೆನರಾ ಬ್ಯಾಂಕಿನಲ್ಲೇ ತನ್ನ ಒಟ್ಟು ಠೇವಣಿಗಳ ಶೇ. 90ರಷ್ಟಾದ 783.84 ಕೋಟಿ ರೂಪಾಯಿಗಳನ್ನು ತೊಡಗಿಸಿರುವ ಐಆರ್‌ಎಫ್‌ಸಿ ಉಳಿದ 127.70 ಕೋಟಿ ರೂಪಾಯಿಗಳನ್ನು ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನಲ್ಲಿ ತೊಡಗಿಸಿದೆ.

ಈ ಎಲ್ಲಾ ವ್ಯವಹಾರಗಳ ಒಳಗುಟ್ಟುಗಳು ಇನ್ನೂ ಜಂಟಿ ಪಾರ್ಲಿಮೆಂಟರಿ ಸಮಿತಿಯ ತನಿಖೆಯಿಂದ ಬಯಲಾಗಬೇಕಾಗಿದೆ.

ಎರಡನೇ ವನವಾಸ

ರಾಮ ವನವಾಸದಿಂದ ಹಿಂದಿರುಗಿ ಬಂದಾಗ ಮನೆಗೆ
ರಾಮ ಬಹಳ ನೆನಪಾಯಿತು ಬಂದಾಗ ನಗರಕ್ಕೆ
ಅಂಗಳದಲ್ಲಿ ನಡೆದಿದ್ದ ಹುಚ್ಚು ಕುಣಿತವನ್ನ
ಡಿಸೆಂಬರ್ ಆರರಂದು ನೋಡಿದ ಶ್ರೀರಾಮ
ಯೋಚಿಸಿರಬಹುದು ಇನ್ನೊಂದು ಮರುಳರೆಲ್ಲಿಂದ
ನನ್ನ ಮನೆಗೆ

* * * * * *

ರಾಮನ ಹೆಜ್ಜೆ ಗುರುತುಗಳು ನಳನಳಿಸುತ್ತಿದ್ದಲ್ಲಿ
ಪ್ರೀತಿಯ ನಗುವಿನ ಅಲೆ ಹರಿದಾಡುತ್ತಿದ್ದಲ್ಲಿ
ದ್ವೇಷದ ತಿರುವು ಬಂತು ಅದೇ ಬೀದಿಯಿಂದಲೇ
ಮನೆಗೆ

* * * * * *

ಯಾವುದವರ ಧರ್ಮ ಯಾವುದವರ ಜಾತಿ ಯಾರಿಗೆ
ಗೊತ್ತು
ಮನೆ ಸುಟ್ಟರದಿದ್ದರೆ ಕತ್ತಲಲ್ಲಿ ಆವರ ಗುರುತು ಹೇಗೆ
ಗೊತ್ತು
ನನ್ನ ಮನೆ ಸುಡಲು ಬಂದರಪ್ಪಾ ಗೆಳೆಯರು ನನ್ನ
ಮನೆಗೆ

* * * * * *

ನನ್ನ ಗೆಳೆಯರೇ ಶಾಕಾಹಾರಿ ನಿಮ್ಮ ಕತ್ತಿಗಳೆಲ್ಲಾ
ನೀವು ಬಾಬರನತ್ತ ಎತ್ತೆತ್ತಿ ಎಸೆದ ಕಲ್ಲುಗಳೆಲ್ಲಾ
ನನ್ನ ತಲೆಯುದ್ದೇ ತಪ್ಪು - ಬಿದ್ದರೆ ಆ ಕಲ್ಲು ನನ್ನ ತಲೆಗೆ

* * * * * *

ಇನ್ನೇನು ಇಳಿಯಬೇಕು ಕಾಲು ತೊಳೆಯಲು
ಸರಯೂ ನದಿಗೆ
ಕಂಡಿತು ರಕ್ತದ ದಪ್ಪ ಕಲೆ ಶ್ರೀರಾಮನ ಕಣ್ಣಿಗೆ
ಕಾಲು ತೊಳೆಯದೇ ತಿರುಗಿದನಾತ ಸರಯೂ
ತೀರದಿಂದ
ರಾಜಧಾನಿಯ ಈ ಖೊಟ್ಟಿತನ ಸರಿಬರದು ನನಗೆ
ಆರು ಡಿಸೆಂಬರಿಗೆ ಸಿಕ್ಕಿತು ಎರಡನೇ ವನವಾಸ ನನಗೆ

* * * * * *

- ಹಿಂದಿ ಮೂಲ : ಕೈಫಿ ಅಜ್ಮಿ

ಕೋಮುವಾದದ ವಿರುದ್ಧ ಸಮರದಲ್ಲಿ ಪ.ಬಂಗಾಳದ ಮಾದರಿ

ನಡೆದಿದೆ ಇಲ್ಲಿ ನಿಲ್ಲದ ಸಮರ

ಭಾರತದ ಭವಿಷ್ಯದ ಮೇಲೆ ಕಾರ್ಮೋಡಗಳು ಕವಿದ ಆ ದಿನ - ಡಿ. 6ರಿಂದ ಆರಂಭವಾಗಿ ಪ.ಬಂಗಾಳದಲ್ಲಿ ಕೋಮುವಾದದ ವಿರುದ್ಧ ಹೋರಾಟ ಪ್ರತಿ ಮನೆ ಮನೆಯಲ್ಲಿ ಮನಸು ಮನಸುಗಳಲ್ಲಿಯೂ ನಡೆಯುತ್ತಿದೆ. ಕೋಟಿಗಟ್ಟಳೆ ಜನ ಈ ಹೋರಾಟದ ಭಾಗವಾಗಿದ್ದಾರೆ. ಈ ನಿರಂತರ ಸಮರದ ಭಾಗವಾಗಿ ಬಿಹಾರದ ಮುಖ್ಯಮಂತ್ರಿ ಲಲ್ಲೂ , ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಮತ್ತನೇಕರು ಭಾಗವಹಿಸಿದ ಭಾರಿ ಬಹಿರಂಗ ಸಭೆ.

ಕೋಮುವಾದದ ವಿರುದ್ಧ ದೇಶಾದ್ಯಂತ ನಡೆಯುತ್ತಿರುವ ಚಳುವಳಿಯ ಅಂಗವಾಗಿ ಫೆಬ್ರವರಿ 21ರಂದು ಕಲ್ಕತ್ತ ನಗರದ ಬ್ರಿಗೇಡ್ ಪೆರೇಡ್ ಮೈದಾನದಲ್ಲಿ ಬೃಹತ್ ರ್‍ಯಾಲಿಯೊಂದನ್ನು 18 ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಪಕ್ಷಗಳು ಏರ್ಪಡಿಸಿದ್ದವು. ಆ ದಿನ ಅಂದರೆ ಫೆಬ್ರವರಿ 21ರಂದು ಮೋಡ ಕವಿದ ವಾತಾವರಣ ಕೂಡಾ ಜನರ ಉತ್ಸಾಹಕ್ಕೇನೂ ಭಂಗ ತರಲಿಲ್ಲ. ಶನಿವಾರ ಸಂಜೆಯಿಂದಲೇ ಪ.ಬಂಗಾಳದ ಮೂಲೆ ಮೂಲೆಗಳಿಂದ ಬ್ರಿಗೇಡ್ ಪೆರೇಡ್ ಮೈದಾನದತ್ತ ಜನರ ಮಹಾಪೂರ ಹರಿದು ಬರುತ್ತಿತ್ತು - ಕೋಮುವಾದವನ್ನೆದುರಿಸಲು ಬೇಕಾದ ದೃಢತೆಯೊಂದಿಗೆ, ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ನಡೆಸುವ ಹೋರಾಟದ ಅವಶ್ಯಕತೆಯ ಪ್ರಜ್ಞೆಯೊಂದಿಗೆ. ಕೊನೆಯಿಲ್ಲದ ಪ್ರವಾಹ ಬಂದು ಸೇರಿದ ಪ.ಬಂಗಾಳದ ಜನತೆ ಕೋಮುವಾದವನ್ನು ಎದುರಿಸುವ ತಮ್ಮ ದೃಢ ನಿರ್ಧಾರವನ್ನು ಮತ್ತೊಮ್ಮೆ ಎತ್ತಿ ತೋರಿಸುವ ರೀತಿಯಲ್ಲಿ ಮತ್ತು ಕೇಂದ್ರ ಸರಕಾರದ ಜನವಿರೋಧಿ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ನಿರಂತರ ಹೋರಾಟ ನಡೆಸಲು ಪಣ ತೊಟ್ಟಿದ್ದೇವೆಂದು ನಿರೂಪಿಸುವ ರೀತಿಯಲ್ಲಿ ಅಂದಿನ ಬೃಹತ್ ಸಭೆಯಲ್ಲಿ ಮೇಳೈಸಿದರು. ಈ ಬೃಹತ್ ಸಭೆಯಲ್ಲಿ ಮಾತನಾಡಿದ ನಾಯಕರುಗಳು ಕೋಮುವಾದನ್ನೆದುರಿಸಲು ನಡೆಯುವ ಹೋರಾಟದಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಐಕ್ಯದಿಂದ ಮುನ್ನಡೆಯುವ ಅವಶ್ಯಕತೆಯನ್ನು ಕುರಿತು ಒತ್ತಿ ಹೇಳಿದರು.

ಈ ಸಭೆಯಲ್ಲಿ ಪ.ಬಂಗಾಳದ ಮುಖ್ಯಮಂತ್ರಿಯಾದ ಕಾಂ.ಜ್ಯೋತಿ ಬಸು ಮಾತನಾಡುತ್ತಾ, ಭಾರತದ ಜನತೆ ಎಡ ಶಕ್ತಿಗಳು ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ದೃಢ ಕೋಮುವಾದಿ ವಿರೋಧಿ ನೀತಿಗಳನ್ನು ಎದುರುನೋಡುತ್ತಿದ್ದಾರೆ. ಆದ್ದರಿಂದ ಈ ಶಕ್ತಿಗಳು ಜನತೆಯ ಬಯಕೆಯನ್ನು ಈಡೇರಿಸುವತ್ತ ದೃಢ ಹೆಜ್ಜೆ ಇಡಬೇಕಾಗಿದೆ ಎಂದರು. ಕೋಮುವಾದದ ಅಪಾಯಗಳನ್ನು ಎದುರಿಸಲು ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧವೂ ಈ ಶಕ್ತಿಗಳು ಐಕ್ಯ ಹೋರಾಟಗಳತ್ತ ಮುನ್ನಡೆಯಬೇಕಾಗಿದೆ. ಕೋಮುವಾದಕ್ಕೆದುರಾಗಿ ಸೈದ್ಧಾಂತಿಕ ಹೋರಾಟದ ಅವಶ್ಯಕತೆಯನ್ನು ಒತ್ತಿ ಹೇಳುತ್ತಾ ಕೋಮುವಾದವೆಂಬ ರಕ್ಕಸನನ್ನೆದುರಿಸಿ ಜನತೆ ಹೋರಾಡುವರೆಂದು, ಸಾಮಾನ್ಯ ಜನರು ತಮ್ಮ ಸಹೋದರತ್ವವನ್ನು ಎತ್ತಿ ಹಿಡಿಯುವರೆಂದು ಜ್ಯೋತಿ ಬಸು ಹೇಳಿದರು. ನಮ್ಮಲ್ಲಿ ಕೆಲವು ಭಿನ್ನಾಭಿಪ್ರಾಯಗಳಿದ್ದರೂ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಒಂದು ಐಕ್ಯ ಹೋರಾಟವನ್ನು ರೂಪಿಸಲು ಒಗ್ಗಟ್ಟಿನಿಂದ ಪ್ರಯತ್ನಿಸಿದರೆ ಬಿಜೆಪಿಯ ಮತ್ತದರ ಸಂಘಟನೆಗಳನ್ನು ಬುಡಮಟ್ಟ ಕಿತ್ತುಹಾಕಬಹುದೆಂಬ ನಂಬಿಕೆಯನ್ನು ಅವರು ವ್ಯಕ್ತಪಡಿಸಿದರು. ಕಾಂಗ್ರೆಸ್(ಐ) ದೇಶವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲು ಸಾಧ್ಯವಾಗುತ್ತಿಲ್ಲ. ಇವರ ಪ್ರತಿಫಲವಾಗಿ ಕೋಮುವಾದದ ವಿರುದ್ಧದ ಚಳುವಳಿಯು ತಕ್ಕುದಾದ ರೀತಿಯಲ್ಲಿ ನಡೆಯುತ್ತಿಲ್ಲ. ಇತ್ತೀಚೆಗೆ ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್‌ಸಿಂಗ್ ಕಲ್ಕತ್ತೆಗೆ ಭೇಟಿ ನೀಡಿದ್ದಾಗ ಆ ಪಕ್ಷಕ್ಕೆ ನಿಧಿಯನ್ನೊಳಗೊಂಡಂತೆ ಎಲ್ಲಾ ರೀತಿಯ ಸಹಾಯ ಸಹಕಾರಗಳನ್ನು ಒದಗಿಸಿದ್ದನ್ನು ಪ್ರಸ್ತಾಪಿಸುತ್ತಾ ಜ್ಯೋತಿ ಬಸುರವರು ಆ ಉದ್ಯಮಿಗಳಿಗೆ ಒಂದು ಎಚ್ಚರಿಕೆಯನ್ನು ನೀಡಬಯಸುತ್ತೇನೆ. ಅವರು ತಮ್ಮ ಸ್ವಹಿತಾಸಕ್ತಿಗಳಿಗೋಸ್ಕರವಾದರೂ ಬಿಜೆಪಿಯ ಬರ್ಬರ ಕೃತ್ಯಗಳನ್ನು ಬೆಂಬಲಿಸಬಾರದು. ಈ ರೀತಿಯ ಬೆಂಬಲ ನೀಡುವ ಮೊದಲು ಉದ್ಯಮಿಗಳು ಸ್ವಲ್ಪ ಯೋಚಿಸಬೇಕಾಗಿದೆ. ಬೊಂಬಾಯಿಯ ಪಾಠ ನಮ್ಮ ಕಣ್ಮುಂದೆ ಇದೆ. ಅದನ್ನು ಅವರು ಮರೆಯಬಾರದು.

ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಮಾತನಾಡುತ್ತಾ, ಉತ್ತರಪ್ರದೇಶದಲ್ಲಿ ಮಧ್ಯಂತರ ಚುನಾವಣೆಯನ್ನೆದುರಿಸಲು ಬಿಜೆಪಿ ಸಿದ್ಧವಿದೆಯೇ ಎಂದು ಪ್ರಶ್ನಿಸಿದರು. ಉತ್ತರಪ್ರದೇಶದಲ್ಲಿ ಇಂದು ಚುನಾವಣೆ ನಡೆದರೆ ಬಿಜೆಪಿ ಪಡೆದಿರುವ 217 ಸೀಟುಗಳಲ್ಲಿ 190 ಸೀಟುಗಳನ್ನು ಕಳೆದುಕೊಳ್ಳುತ್ತದೆ ಎಂದರು. ಬಡಜನರಿಗೆ ನಿಜವಾದ ಪರಿಹಾರವನ್ನೊದಗಿಸಲು ಯಾವುದೇ ಪ್ರಯತ್ನ ನಡೆಸಲಿಲ್ಲ. ಸಾಮ್ರಾಜ್ಯಶಾಹಿ ಶಕ್ತಿಗಳು ಭಾರತದಲ್ಲಿ ತಮ್ಮ ಮೂಗು ತೂರಿಸಲು ಬೇಕಾಗುವ ಏಜೆಂಟರ ರೀತಿಯಲ್ಲಿ ಬಿಜೆಪಿ ವರ್ತಿಸುತ್ತಿದೆ. ಕೋಮುವಾದದ ಬೆಳವಣಿಗೆಗೆ ಕಾಂಗ್ರೆಸ್ ಕೂಡಾ ಬಿಜೆಪಿಯಷ್ಟೇ ಕಾಣಿಕೆಯನ್ನು ನೀಡುತ್ತಿದೆ. ಜಾತ್ಯಾತೀತರು ಎಂದು ತಮ್ಮನ್ನು ಗುರುತಿಸಿಕೊಳ್ಳುವ ಕಾಂಗ್ರೆಸ್ಸಿಗರೆಲ್ಲರೂ ಆ ಪಕ್ಷವನ್ನು ಬಿಟ್ಟು ಹೊರಬರಬೇಕು. ಸರಕಾರ ತನ್ನ ಜಾತ್ಯಾತೀತತೆಯ ಬದ್ಧತೆಯನ್ನು ನಿರೂಪಿಸಬೇಕು. ಎಂದು ಮುಲಾಯಂ ಸಿಂಗ್ ಹೇಳಿದರು.

ಬಿಹಾರದ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವ್ ಮಾತನಾಡುತ್ತಾ, ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೇರಬಯಸುವ ಕನಸು ಕಾಣುತ್ತಿದೆ. ಆ ಕನಸನ್ನು ನನಸಾಗದಂತೆ

ಪುಟ 6 ಕ್ಕೆ.........

ಕಾಂಗ್ರೆಸ್ ಎತ್ತ ಸಾಗಿದೆ? ಎತ್ತ ಸಾಗಿದೆ ಕಾಂಗ್ರೆಸ್??

(ಪಿ.ಡಿ. ಸಂಪಾದಕೀಯ)

ಸಾಗರದ ಮಧ್ಯೆ ದಾರಿ ತೋರುತ್ತಿದ್ದ ನಕ್ಷತ್ರವನ್ನು ಮುಚ್ಚಿ ಬಿಟ್ಟ ಮೋಡಗಳಿಂದ ತುಂಬಿದ ಆಕಾಶ ಕಂಡು ಕಂಗೆಟ್ಟ ಅನಾದಿಕಾಲದ ನಾವಿಕನಂತಾಗಿದ್ದಾರೆ ಕಾಂಗ್ರೆಸ್(ಐ)ನ, 90 ಕೋಟಿ ಜನಗಳ ದೇಶ ಚುಕ್ಕಾಣಿ ಹಿಡಿದ ನರಸಿಂಹರಾವ್. ಎತ್ತ ಸರಿಯುತ್ತಿದೆ ಭಾರತ ಎಂಬ ಪ್ರಶ್ನೆಗೆ ಉತ್ತರ ಕೊಡಲಾರದಾಗಿದ್ದಾರೆ.

ಅವರು ಅವರ ಪಕ್ಷದ, ಸರಕಾರದ ಮುಖ್ಯಸ್ಥರು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪಕ್ಷ ಪದ್ಧತಿ ಎಲ್ಲರೂ ಒಪ್ಪಿಕೊಂಡ ಕ್ರಮ. ಆದರೆ ಸರಕಾರ ನಡೆಸುವ ಪಕ್ಷ ಕಾಂಗ್ರೆಸ್(ಐ) ಸಾಗಿದೆ ಎತ್ತ? ಅದೊಂದು ಪಕ್ಷವೇ ಅಥವಾ ಎಲ್ಲಾ ರೀತಿಯ ಜನಗಳ - ಒಳ್ಳೆಯವರು - ಕೆಟ್ಟವರು, ಸ್ವಾರ್ಥಸಾಧಕರು - ಪರೋಪಕಾರಿಗಳು - ಹೀಗೆ ಎಲ್ಲರೂ ಇರುವ - ಒಂದು ಜನಜಂಗುಳಿಯ ಪ್ಲೇನಾ? ನೋಡಿ ನಮ್ಮ ಪಕ್ಷಕ್ಕೆ 108 ವರ್ಷ ಎಂದು ಹೆಮ್ಮೆಯಿಂದ ಅವರು ಹೇಳಿಕೊಳ್ಳುತ್ತಾರೆ. ಆದರೆ ಇತಿಹಾಸದ ಈ ಘಟ್ಟದಲ್ಲಂತೂ ಅದು ಬುದ್ಧಿ ಮಂದವಾದ ಮಗುವಿನಂತಾಡುತ್ತಿದೆ.

ಇಡೀ ದೇಶವನ್ನು ಭಯಾನಕ ಹಾಗೂ ತೀವ್ರ ಕೋಮು ದಳ್ಳುರಿ ಆವರಿಸಿರುವಾಗ, ಈ ಪಕ್ಷಕ್ಕೆ ದೇರಿಯೇ ಬೆಂಕಿ ಹೊತ್ತಿಕೊಂಡು ಅದೂ ಉರಿಯುತ್ತಿದೆ. ದೇಶದ ಅತ್ಯಂತ ಹೆಚ್ಚು ಕೈಗಾರೀಕರಣ ಹೊಂದಿದ ರಾಜ್ಯ ಮಹಾರಾಷ್ಟ್ರ, ಅಲ್ಲಿ ನಡೆದ ಅತ್ಯಂತ ಕ್ರೂರ, ರಾಕ್ಷಸೀ ಕೋಮುದಂಗೆಗಳ ಹಿನ್ನೆಲೆಯಲ್ಲಿ ಅಂತರಿಕ ಕಚ್ಚಾಟದ ವಾಕರಿಕೆ ತರಿಸುವ ಚಿತ್ರ. ಶರದ್ ಪವಾರ್ ಮತ್ತು ಸುಧಾಕರ್‌ನಾಯಕ್ ನಡುವೆ ಪೈಪೋಟಿಯಂತೆ!

ಒರಿಸ್ಸಾದಲ್ಲಿ ಒಂದು ಸಣ್ಣ ಗೃಹಯುದ್ಧವೇ ಸಾಗಿದೆ. ಅಪ್ಪ ಸತ್ತು ಎಷ್ಟೋ ವರ್ಷಗಳ ನಂತರ ಆಸ್ತಿಯ ಮೇಲೆ ಜಗಳ ಆಡುವ ದಾಯಾದಿಗಳಂತೆ. ಎಂತಹ ದೃಶ್ಯ! ಪಟ್ನಾಯಕ್ ಮತ್ತು ಬಿಸ್ವಾಲ್ ನಾಯಕತ್ವದ ಪ್ರಶ್ನೆಯನ್ನು ತಮ್ಮ - ತಮ್ಮ ಬಾಡಿಗೆ ಗೂಂಡಾಪಡೆಗಳ ಪರಸ್ಪರ ಹೊಡೆದಾಟದ ಮೂಲಕ ಪರಿಹರಿಸಬಯಸುತ್ತಿದ್ದಾರೆ! ಬಿಸ್ವಾಲ್ ಹಿಂಬಾಲಕರು ತಮ್ಮ ಹರಿದ ಶರಟುಗಳನ್ನು, ಗಾಯಗಳನ್ನು ಪತ್ರಿಕಾ ವರದಿಗಾರರಿಗೆ ಅಳು ಮೋರೆ ಹಾಕಿ ತೋರಿಸುವ ಸ್ಥಿತಿ!

ತ್ರಿಪುರಾದಲ್ಲಿ, ಚುನಾವಣೆ ಮುಂದೂಡಿಕೆಯ ಸ್ವಲ್ಪ ಮೊದಲಷ್ಟೇ ಒಂದೆಡೆ ಸಮೀರ್ ಬರ್ಮನ್ - ಸಂತೋಷ್ ದೇಬ್ ಜೋಡಿ ಇನ್ನೊಂದೆಡೆ ಸುಧೀರ್ ಮಜುಂದಾರ್ - ವಿಭುದೇವಿ ಜೋಡಿ ನಡುವೆ ಗುಂಪು ಕಾದಾಟ. ಕೇರಳದಲ್ಲಿ ವಯಲಾರ್ ರವಿ ವಿರುದ್ಧ ಆಂಟನಿ, ಆಂಟನಿ ವಿರುದ್ಧ ಕರುಣಾಕರನ್! ಪಶ್ಚಿಮ ಬಂಗಾಳದಲ್ಲಿ ಸೋಮೇನ್ ಮಿತ್ರಾ ಮತ್ತು ಮಮತಾ ಬ್ಯಾನರ್ಜಿ ನಡುವೆ ಕಿತ್ತಾಟ. ತಮಿಳುನಾಡಿನಲ್ಲಿ ಜಯಲಲಿತಾ ಸರಕಾರದೊಡನೆ ಸರಸಕ್ಕೆ ಕೊನೆ. ಅಸ್ಸಾಂನಲ್ಲಿ ಸೈಕಿಯಾ ಹಚ್ಚಿದ ಬೆಂಕಿ ಧಗಧಗಿಸುವಂತೆ ಮಾಡಲು ಗಾಳಿ ಹಾಕಲಾಗುತ್ತಿದೆ. ಉತ್ತರಪ್ರದೇಶದಲ್ಲಂತೂ ಕಾಂಗ್ರೆಸ್(ಐ) ಎಂಬ ಸಂಘಟನೆಯೇ ಕಾಣುತ್ತಿಲ್ಲ.

ಇಡೀ ದೇಶವನ್ನು ಭಯಾನಕ, ತೀವ್ರ ಕೋಮು ದಳ್ಳುರಿ ಸುಡುತ್ತಿರುವಾಗಲೇ ಆಳುವ ಪಕ್ಷ ತನ್ನದೇ ಬೆಂಕಿಯಲ್ಲಿ ಹತ್ತಿ ಉರಿಯುತ್ತಿದೆ. ಆಂತರಿಕ ಕಚ್ಚಾಟದ ರಣರಂಗವಾಗಿ ಚೂರುಚೂರಾಗುತ್ತಾ ಸಾಗುತ್ತಿದೆ. ಇಂತಹ ಸಂದರ್ಭದಲ್ಲಿ ದೇಶವನ್ನು ಕಾಪಾಡುವ ಶಕ್ತಿಯೆಂದರೆ ಈ ದೇಶದ ಜನ. ಅವರ ಜತೆಗೂಡುವ ಎಡ ಮತ್ತು ಜಾತ್ಯಾತೀತ ದೇಶಪ್ರೇಮಿ ಶಕ್ತಿಗಳು.

ಅಂದರೆ ಕಾಂಗ್ರೆಸ್(ಐ) ಪಕ್ಷ ಚೂರಾಗುತ್ತಿದೆಯೇ?

ಆದರೆ ಎಂತಹ ಸಮಯದಲ್ಲಿ? ಕೋಮು ರಕ್ಕಸ ಸವಾಲೆಸೆದಿರುವ ಗಂಭೀರ ಸಮಯದಲ್ಲಿ! ಸ್ವಾತಂತ್ರ್ಯ ಸಿಕ್ಕಾಗಿನಿಂದ ಎಡ ಪಕ್ಷಗಳು ಕಾಂಗ್ರೆಸ್ಸಿನ ನಿರ್ದಯ ವರ್ಗಶೋಷಣೆಯ ವಿರುದ್ಧ ಪ್ರಜಾಪ್ರಭುತ್ವ ಹಕ್ಕುಗಳ ನಿರಾಕರಣೆಯ ವಿರುದ್ಧ ಹೋರಾಡುತ್ತಲೇ ಇವೆ. ಆದರೆ ನಾವು ದಂತಗೋಪುರದಲ್ಲಿ ಕೂತಿರದೆ ಈ ವಾಸ್ತವ ಜಗತ್ತಿನ ಜನರಾಗಿ ನಮಗೆ ಈ ವಿಶಾಲ ದೇಶದಲ್ಲಿ ನಾವೊಂದು ಸಣ್ಣ ಶಕ್ತಿ ಎಂಬುದರ ಪೂರ್ಣ ಅರಿವಿದೆ. ಆದರೆ ಎಲ್ಲೆಲ್ಲಾ ನಮ್ಮ ಅಸ್ತಿತ್ವವಿದೆಯೋ ಅಲ್ಲಿ ನಾವು ದುರ್ಬಲರಾಗಿರಲಿ, ಬಲಶಾಲಿಯಾಗಿರಲಿ ನಾವು ಕೋಮು ರಕ್ಕಸನ ವಿರುದ್ಧ ಹೋರಾಡುತ್ತಿದ್ದೇವೆ. ಹೋರಾಟ ಮುಂದುವರಿಸುತ್ತೇವೆ. ಆದರೆ ಇತರೆಡೆ ಕೋಮು ಶಕ್ತಿಗಳ ಸವಾಲು ಎದುರಿಸುವವರು ಯಾರು? ಕಾಂಗ್ರೆಸ್(ಐ) ಈಗಿನ ಸ್ಥಿತಿಯಲ್ಲಿಯೂ ಎಲ್ಲರೂ ಒಪ್ಪುವ ಅರ್ಥದಲ್ಲಿ ಜಾತ್ಯಾತೀತ ತತ್ವಕ್ಕೆ ಬದ್ಧವಾಗಿದೆಯೇ? ಹಾಗಿದ್ದರೆ ಅದು ಅಧಿಕಾರದ ಸರಕಾರದ ಸುಖಾಸನಗಳಿಂದ, ಏರ್‌ಕಂಡೀಶನ್ಡ್ ಕೋಣೆಗಳಿಂದ ಹೊರಬಂದು ಹಳ್ಳಿ-ಪಟ್ಟಣಗಳಿಗೆ, ತಾನೇ ಸೃಷ್ಟಿಸಿದ ಬಡವರ ಗುಡಿಸಲು, ಮೊಹಲ್ಲಾಗಳಲ್ಲಿ ಕೋಮುವಾದಿಗಳೆದುರು ಸಮರಕ್ಕೆ ನಿಂತಿಲ್ಲವೇಕೆ? ಪ್ರಧಾನಮಂತ್ರಿಗಳು ನಲ್ವತ್ತು ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಾರೆ ಎಂದು ಪತ್ರಿಕೆಗಳಲ್ಲಿ ದಪ್ಪಕ್ಷರಗಳಲ್ಲಿ ಡಂಗುರ ಸಾರಲಾಗಿದೆ. ಅದರಲ್ಲಿ ಒಂದು ಹತ್ತಾದರೂ ನಡೆಯಬಹುದೇ?

ಕಾಂಗ್ರೆಸ್(ಐ)ನ ವಿಘಟನೆಯನ್ನು ಮುಂದುವರೆಸಲು ಬಿಟ್ಟರೆ ಒಳಗಿನ ಕಿತ್ತಾಟವೂ ಇನ್ನಷ್ಟು ಹೊಲಸು ರೂಪ ಪಡೆಯುತ್ತದೆ. ತಾನು ಈ ವಿಶಾಲ ದೇಶವನ್ನು ಆಳುವ ಭಾರೀ ಜವಾಬ್ದಾರಿ ಹೊತ್ತಿರುವ ಪಕ್ಷ ಎಂದು ಅವರ ಹೆಗ್ಗಳಿಕೆ ದಿನಕಳೆದಂತೆ ಹೆಚ್ಚೆಚ್ಚು ಟೊಳ್ಳಾಗುತ್ತಿದೆ. ವಯಸ್ಸಾದ ಮಾಂಸ ಎಲುಬುಗಳು ಕಿರ್ರೆನ್ನುತ್ತಿವೆ. ತನ್ನ ಭಾರ ಹೊರಲು ಕೂಡಾ ಅದಕ್ಕಾಗುತ್ತಿಲ್ಲ.

ಹಾಗಿದ್ದರೆ ಈ ದೇಶ ಚೂರು-ಚೂರಾಗುವುದನ್ನು ತಡೆಯುವವರು ಯಾರು? ಏಕೈಕ ಆಶಾಕಿರಣವೆಂದರೆ ಈ ದೇಶದ ಜನ, ಅವರ ಜತೆಗೂಡುವ ಎಡ ಮತ್ತು ಇತರಜಾತ್ಯಾತೀತ ದೇಶಪ್ರೇಮಿ ಶಕ್ತಿಗಳು, ಎಂದೂ ಕೋಮುವಾದದೊಂದಿಗೆ ರಾಜಿ ಮಾಡಿಕೊಳ್ಳದ, ಅದಕ್ಕೆ ಶರಣಾಗದ ಶಕ್ತಿಗಳು. ಇವರೆಲ್ಲಾ ಸಿದ್ಧರಾಗಿದ್ದಾರೆಯೇ? ಹೌದು, ಸಿದ್ಧರಾಗಿದ್ದಾರೆ. ಕಾಂಗ್ರೆಸ್ಸಿನವರು ತಮ್ಮ ಜಾತ್ಯಾತೀತತೆಯನ್ನು ಧೈರ್ಯವಾಗಿ ಘೋಷಿಸಬಲ್ಲರೇ? ಕೋಮುವಾದದ ವಿರುದ್ಧ ಕೊನೆಯವರೆಗೂ ಹೋರಾಟದ ಒಂದು ಗಟ್ಟಿ ವೇದಿಕೆಯಲ್ಲಿ ಕೈಜೋಡಿಸಬಲ್ಲರೇ?

ನಾವೀಗ ಇತಿಹಾಸದ ತಿರುವಿನಲ್ಲಿ ಬಂದು ನಿಂತಿದ್ದೇವೆ. ಭಾರತ ಎತ್ತ ಹೋಗುತ್ತಿದೆ ಎಂಬುವನ್ನು 1993 ತೋರಲಿದೆ.

ಪಶ್ಚಿಮ ಬಂಗಾಳದಲ್ಲಿ ಬೆಂಕಿ ಹಚ್ಚಲು ಬಿಜೆಪಿಯ ವ್ಯಾಪಕ ಯೋಜನೆ

(ಐ.ಎನ್.ಎಸ್. ಸುದ್ದಿ)

ಯಾವ ಧಾಳಿಗೂ ಗಾಳಿಗೂ ಮಣಿಯದೇ ದೃಢವಾಗಿ ನಿಂತಿರು ಎಡರಂಗ ಸರಕಾರವನ್ನು ಉರುಳಿಸಲು ಬಂಗಾಲದ ಜನರ ಸೌಹಾರ್ದಕ್ಕೆ ಬೆಂಕಿ ಹಚ್ಚಲು ನಡೆಯುತ್ತಿರುವ ದುಷ್ಟ ಸಂಚಿನ ಒಳನೋಟ.

ಕೆಲವು ದಿನಗಳ ಹಿಂದೆ ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್‌ಸಿಂಗ್ ಹಾಗೂ ಕಲ್ಕತ್ತೆಯ ಕೆಲವು ಪ್ರಮುಖ ಉದ್ಯಮಿಗಳ ನಡುವೆ ಚರ್ಚೆ ನಡೆದ ಬಗ್ಗೆ ಬಹಳ ಮಾತು ಕೇಳಬಂದಿದೆ. ಇದು ನಗರದಲ್ಲಿ ಕೋಮು ಹಿಂಸಾಚಾರ ಸಂಘಟಿಸುವ ವಿವರವಾದ ಯೋಜನೆಗಳನ್ನು ತಯಾರಿಸಲಿಕ್ಕಾಗಿ ಎಂದು ತಿಳಿದು ಬಂದಿದೆ. ಬಾಬ್ರಿ ಮಸೀದಿಯ ಭಯಾನಕ ಧ್ವಂಸದಿಂದಲೂ ತೃಪ್ತಿಗೊಳ್ಳದ ಬಿಜೆಪಿ ದೇಶಾದ್ಯಂತ ಕೋಮುಗಳನ್ನು, ಹಿಂದೂ ಮುಸಲ್ಮಾನರನ್ನು ಒಡೆಯಲು ಕಾತುರವಾಗಿದೆ. ಇದರಲ್ಲಿ ಕಲ್ಕತ್ತಾ ನಗರ ಅದರ ಮುಖ್ಯ ಗುರಿಗಳಲ್ಲಿ ಒಂದು.

ಕಲ್ಯಾಣ್‌ಸಿಂಗ್ ಈ ತಿಂಗಳ ಆರಂಭದಲ್ಲಿ ಕಲ್ಕತ್ತೆಗೆ ಭೇಟಿ ನೀಡಿದ್ದರು. ಫೆಬ್ರವರಿ 2ರಂದು ಕಲ್ಕತ್ತಾ ಕ್ಲಬ್‌ನಲ್ಲಿ ಒಂದು 'ಅಭಿನಂದನಾ ಸಮಾರಂಭ'ಕ್ಕೆ ಆಹ್ವಾನಿತರಾಗಿದ್ದ 219 ಕೈಗಾರಿಕೋದ್ಯಮಿಗಳು ಹಾಗೂ ವ್ಯಾಪಾರಸ್ಥರಲ್ಲಿ 59 ಮಂದಿಯನ್ನು ಪ್ರತ್ಯೇಕವಾಗಿ ಅವರು ಭೇಟಿ ಮಾಡಿದ್ದರು. ಪಶ್ಚಿಮ ಬಂಗಾಳದಲ್ಲಿ ಕೋಮುಗಲಭೆ ಆರಂಭಿಸುವ ಬೃಹತ್ ಯೋಜನೆ ತಯಾರಿಸುವುದು ಈ 'ಅಭಿನಂದನಾ ಸಮಾರಂಭ'ದ ಗುರಿಯಾಗಿತ್ತು. ಇದಕ್ಕೆ ಆಹ್ವಾನಿತರಾಗಿದ್ದ ಕೆಲವು ಕೈಗಾರಿಕೋದ್ಯಮಿಗಳು ಬಂದಿರಲಿಲ್ಲ. ಪ್ರತಿಯೊಬ್ಬ ಉದ್ಯಮಿ ಎಷ್ಟು ಹಣ ಈ ಯೋಜನೆಯಲ್ಲಿ ಹಾಕಬೇಕು ಎಂಬ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

ಕಲ್ಯಾಣ್‌ಸಿಂಗ್‌ರವರ ಕಲ್ಕತ್ತಾ ಭೇಟಿಯನ್ನು ಏರ್ಪಡಿಸಿ ಅದರ ಖರ್ಚು-ವೆಚ್ಚವನ್ನು ಕೆಲವು ಉದ್ಯಮಿಗಳು ಜಂಟಿಯಾಗಿ ನೋಡಿಕೊಂಡರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅವರಲ್ಲೊಬ್ಬರಾದ ಪಿ.ಡಿ.ಟಿ. ಲಿಂಗ ಎಂಬಾತ ಈ 'ಅಭಿನಂದನಾ ಸಮಾರಂಭ' ಹಾಗೂ ಕಲ್ಯಾಣ್‌ಸಿಂಗ್‌ರ ಪತ್ರಿಕಾ ಸಮ್ಮೇಳನವನ್ನು ಏರ್ಪಡಿಸಿದ್ದ. ಈ ಸಮಾರಂಭದಲ್ಲಿ ಕಲ್ಯಾಣ್‌ಸಿಂಗ್ ಕೆಲವು ಇತರ ಉದ್ಯಮಿಗಳನ್ನು, ವ್ಯಾಪಾರಸ್ಥರನ್ನು ಭೇಟಿ ಮಾಡಲು ಹೊರಟರು. ಸಂಜೆ ಪಶ್ಚಿಮ ಬಂಗಾಳದ ಮಾಜಿ ಪೋಲೀಸ್ ಮಹಾನಿರ್ದೇಶಕರೊಬ್ಬರನ್ನು ಅವರು ಭೇಟಿಯಾದರು.

ಈ ಮಾಜಿ ಮುಖ್ಯಮಂತ್ರಿ ಕಲ್ಕತ್ತಾದಿಂದ ತೆರಳಿದ ನಂತರ ಬಿಜೆಪಿಯ ಇನ್ನೊಬ್ಬ ನಾಯಕಮಣಿ ಮುರಳಿ ಮನೋಹರ ಜೋಶಿ ಈ ಕೆಲಸವನ್ನು ಮುಂದುವರಿಸಲು ಬಂದರು. ಬಿಜೆಪಿಯ ರಾಜ್ಯಮಟ್ಟದ, ಜಿಲ್ಲಾ ಮಟ್ಟದ ಮುಖಂಡರುಗಳನ್ನು ಭೇಟಿಯಾಗಿ ಅವರಿಗೆ ಇನ್ನಷ್ಟು 'ಆದೇಶ' ನೀಡಿದರು. 'ವರದಿ'ಗಳನ್ನು ಸ್ವೀಕರಿಸಿದರು. ಕೋಮು ದಳ್ಳುರಿಯನ್ನು ಪಶ್ಚಿಮ ಬಂಗಾಳದಲ್ಲಿ ವ್ಯಾಪಕವಾಗಿ ಮುಂದುವರಿಸುವ ಬಗ್ಗೆ ಈ 'ಆದೇಶ'ಗಳಲ್ಲಿ ತಿಳಿಸಲಾಗಿದೆ ಎಂದು ತಿಳಿದುಬಂದಿದೆ.



“ಮಸೀದಿ ಧ್ವಂಸದ ಮಾಹಿತಿ ಸಿಗಬಾರದು” ಪರ್ತಕರ್ತರ ಮೇಲೆ ಹಲ್ಲೆ ಮಾಡಿದ ಒಳಸಂಚು

ಅದ್ವಾನಿ-ಜೋಷಿಯವರ ನೇತೃತ್ವದಲ್ಲಿ ಬಾಬರಿ ಮಸೀದಿಯ ಗುಮ್ಮಟಗಳಿಗೆ ಕೊಡಲಿ ಏಟು ಬೀಳುತ್ತಿದ್ದಂತೆಯೇ ಭಾರತವೆಂಬ ದೇಶದ, ಅದರ ಪ್ರಜಾಪ್ರಭುತ್ವದ ಮೈ ಮೇಲೆಲ್ಲಾ ಏಟುಗಳು ಬೀಳತೊಡಗಿದವು. ರಾಷ್ಟ್ರ ಪುರುಷನ ಮೈಯಿಂದ ನೆತ್ತರಧಾರೆ ಹರಿಯತೊಡಗಿತು. ಏಕ ಕಾಲದಲ್ಲಿ - ನ್ಯಾಯಾಂಗ, ಕಾರ್ಯಾಂಗಗಳ ಮೇಲೆ ಜಾತ್ಯಾತೀತ ಸ್ವರೂಪದ ಮೇಲೆ ಹಲ್ಲೆಯಾಯಿತು. ಅದೇ ಸಮಯದಲ್ಲಿ ಭಾರತದ ಜನ ಸತ್ಯ ತಿಳಿಯುವ ಹಕ್ಕಿನ ಮೇಲೆ, ಸತ್ಯವನ್ನು ತಿಳಿದು ಯಾರು ಎಂತಹವರು ಎಂದು ತಿಳಿದುಕೊಳ್ಳುವ ಹಕ್ಕಿನ ಮೇಲೆ - ಪತ್ರಿಕಾ ಸ್ವಾತಂತ್ರ್ಯದ ಮೇಲೆ ಹಲ್ಲೆಯಾಯಿತು. ಭಾರತದ - ವಿಶ್ವದ - ಕಣ್ಣಾಗಿ ಅಲ್ಲಿದ್ದ ಕ್ಯಾಮೆರಾಗಳ ಮೇಲೆ ಪತ್ರಕರ್ತರ ಮೇಲೆ ಹಲ್ಲೆಯಾಯಿತು. ಹಿಂದೂ ರಾಷ್ಟ್ರದ ಮಾತನ್ನಾಡುತ್ತಿರುವ ರಾವಣ-ಕಂಸರುಗಳು ಭಾರತದ ಎಲ್ಲಾ ಕಣ್ಣುಗಳನ್ನು, ಮನಸ್ಸುಗಳನ್ನು ಕುರುಡು ಮಾಡಲು ಪ್ರಯತ್ನಿಸಿದರು. ತಮ್ಮ ಪೈಶಾಚಿಕ ಫ್ಯಾಸಿಸ್ಟ್ ಸ್ವರೂಪವನ್ನು ತೋರಿಸಿದರು. ಆ ಘಟನೆಯ ಬಗ್ಗೆ ಪತ್ರಿಕಾ ಮಂಡಳಿ ನೇಮಿಸಿದ ಆಯೋಗದ ವರದಿ ಹಾಗೂ ತನಿಖೆಯಲ್ಲಿ ಕೇಳಿ ಬಂದ ಧ್ವನಿಗಳು.

ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಪತ್ರಕರ್ತರೊಡನೆ 'ಕರಸೇವಕ'ರ ವರ್ತನೆಗಳ ಬಗ್ಗೆ ತನಿಖೆ ನಡೆಸಿದ ನ್ಯಾಯಮೂರ್ತಿ ಸರ್ಕಾರಿಯಾ ಸಮಿತಿ ಈ ಹಲ್ಲೆಗಳು ಪೂರ್ವ ಯೋಜಿತವಾಗಿದ್ದವು. ಮಸೀದಿ ಧ್ವಂಸದ ವಿವರವಾದ ಮಾಹಿತಿ ಜನಗಳಿಗೆ ಸಿಗಬಾರದು ಎಂಬುದೇ ಇದರ ಮುಖ್ಯ ಉದ್ದೇಶವಾಗಿತ್ತು ಎಂಬ ತೀರ್ಮಾನಕ್ಕೆ ಬಂದಿದೆ.

ಆ ದಿನ 'ಹಿಂದೂ ರಾಷ್ಟ್ರ'ದ ವಿಚಾರದ ಫ್ಯಾಸಿಸ್ಟ್ ಸ್ವರೂಪವನ್ನು ಪತ್ರಕರ್ತರ ಮುಂದೆ ತೆರೆದಿಟ್ಟ ಘಟನೆಗಳ ಬಗ್ಗೆ ಪತ್ರಕರ್ತರು, ಫೋಟೋಗ್ರಾಫರ್‌ಗಳ ದೂರಿನ ಮೇಲೆ ಭಾರತದ ಪತ್ರಿಕಾ ಮಂಡಳಿ ನ್ಯಾಯಮೂರ್ತಿ ಆರ್.ಎಸ್. ಸರ್ಕಾರಿಯಾರವರ ನೇತೃತ್ವದಲ್ಲಿ ಏಳು ಸದಸ್ಯರ ಸಮಿತಿ ನೇಮಿಸಿತು. 33 ದಿನಗಳಲ್ಲಿ 81 ಸಾಕ್ಷಿಗಳ ಹೇಳಿಕೆಗಳನ್ನು ಕಲೆಹಾಕಿದ ಸಮಿತಿಯ 200 ಪುಟಗಳ ವರದಿ ಡಿಸೆಂಬರ್ 6ರಂದು ಆರೂವರೆ ಗಂಟೆ ನಡೆದ ಗೂಂಡಾವೃತ್ತಿಯ ಬಗ್ಗೆ ಈ ತೀರ್ಮಾನಕ್ಕೆ ಬಂದಿದೆ.

ಡಿಸೆಂಬರ್ 6ರ ಮೊದಲೇ ಕರಸೇವಕರಿಗೆ ಅಂದು ಏನಾಗಲಿದೆ ಎಂದು ತಿಳಿದಿತ್ತು, ಅದು ನ್ಯಾಯಾಲಯಗಳ ಉಲ್ಲಂಘನೆ ಮಾತ್ರವೇ ಅಲ್ಲ, ಭಾರತೀಯ ಸಮಾಜದ ಒಂದು ದೊಡ್ಡ ವಿಭಾಗವೂ ಇದು ಅನ್ಯಾಯ ಎಂದು ಪರಿಗಣಿಸುತ್ತದೆ ಎಂಬುದರ ಅರಿವೂ ಇತ್ತು. ಆದ್ದರಿಂದಲೇ ಈ ಅನ್ಯಾಯದ ಪ್ರಮಾಣಗಳನ್ನು ನಾಶ ಮಾಡಲು ಅವರು ಕಾತುರರಾಗಿದ್ದರು ಎಂದು ಪತ್ರಿಕಾ ಮಂಡಳಿಯೆದುರು ಬಂದ ಸಾಕ್ಷಿಗಳಿಂದ ತಿಳಿದು ಬರುತ್ತದೆ. ತಮ್ಮ ಕೃತ್ಯಗಳಿಗೆ ಕೆಲವರ(ಬಿಜೆಪಿ ಮುಖಂಡರ?) ಬೆಂಬಲ ಇದೆ, ತಾನು ಮಾಡುವುದು ಪುಣ್ಯದ ಕೆಲಸ, ಅದನ್ನು ವಿರೋಧಿಸುವ 'ಪಾಪಿ'ಗಳಿಗೆ ಶಿಕ್ಷೆ ನೀಡುವುದು ತಪ್ಪೇನಿಲ್ಲ ಎಂಬ ಭಾವನೆಯೂ ಅವರಲ್ಲಿದ್ದಂತಿತ್ತು ಎಂದು ಪತ್ರಿಕಾಮಂಡಳಿಯ ವರದಿ ತಿಳಿಸುತ್ತದೆ. ಸಾಕ್ಷಿಗಳ ಹೇಳಿಕೆಗಳಲ್ಲಿ ಮತ್ತೆ-ಮತ್ತೆ ವಿಜಯರಾಜೇಸಿಂಧ್ಯಾ, ವಿನಯ್‌ಕಟಿಯಾರ್ ಹಾಗೂ ಅಡ್ವಾಣಿಯವರ ಹೆಸರು ಕೇಳಿ ಬಂದಿತ್ತು.(ಬಾಕ್ಸ್ ನೋಡಿ) ಡಿಸೆಂಬರ್ 6ರಂದು ಏನಾಗುತ್ತಿತ್ತು, ಅದರ ಪರಿಣಾಮವೇನು ಎಂದು ಈ ಮುಖಂಡರಿಗೆಲ್ಲಾ ಗೊತ್ತಿತ್ತು, ಅದರಿಂದ ತಪ್ಪಿಸಿಕೊಳ್ಳುವ ದಾರಿ ಹುಡುಕುತ್ತಿದ್ದರೆಂಬುದೂ ಸಾಕ್ಷಿಗಳ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಕರಸೇವಕರು ತಮ್ಮ ಹತೋಟಿ ಮೀರಿದ್ದರೆಂಬ ಅವರ ವಾದಕ್ಕೆ ಈಗ ಅರ್ಥವೇ ಉಳಿದಿಲ್ಲ.

ಪೋಲೀಸರು, ಕರಸೇವಕರು ಪತ್ರಕರ್ತರ ಮೇಲೆ ಅಮಾನುಷ ಧಾಳಿ ನಡೆಸುತ್ತಿದ್ದಾಗ ಮೂಕಪ್ರೇಕ್ಷಕರಾಗಿದ್ದರು ಎನ್ನುವುದು ಪತ್ರಿಕಾಮಂಡಳಿಯ ಇನ್ನೊಂದು ತೀರ್ಪು. ಈ ಧಾಳಿ ಕಾನೂನಿನ ಪ್ರಕಾರ ಒಂದು ಶಿಕ್ಷಾರ್ಹ ಅಪರಾಧ. ಇದನ್ನು ತಡೆಯುವುದು ಪೋಲೀಸರ ಕರ್ತವ್ಯವಾಗಿತ್ತು ಎಂದು ಮಂಡಳಿಯ ವರದಿ ಹೇಳಿದೆ.

ಪತ್ರಿಕಾ ಮಂಡಳಿಯ ತನಿಖೆಯ ಸಮಯದಲ್ಲಿ ಬಂದ ಸಾಕ್ಷಿಗಳಿಂದ ತಿಳಿದು ಬರುವ ಆದರೆ ಮಂಡಳಿಯ ವರದಿಯಲ್ಲಿ ಕಾಣದ ಅಂಶಗಳೂ ಕೆಲವಿವೆ-ಉದಾಹರಣೆಗೆ, ಬಿಜೆಪಿ ಮತ್ತು ವಿಹೆಚ್‌ಪಿ ಮುಖಂಡರ ಮಾನವೀಯತೆಯ ಬಗ್ಗೆಯೇ ಸಂಶಯ ಮೂಡಿಸುವ ಹಲವು ಸಾಕ್ಷಿಗಳು ಈ ತನಿಖೆಯ ಸಮಯದಲ್ಲಿ ದೊರೆತವು. ಪಕ್ಕದ ಮೈದಾನದಲ್ಲಿ ಮಹಿಳಾ ಪತ್ರಕರ್ತರೂ ಸೇರಿದಂತೆ ಪತ್ರಕರ್ತರನ್ನು ಹೊಡೆಯುತ್ತಿದ್ದಾಗ, ಅವರ ಶರಟುಗಳನ್ನು ಹರಿದು, ಅವರ ಕ್ಯಾಮರಾ, ಟೇಪ್, ದುಡ್ಡುಗಳನ್ನು ಕಸಿದುಕೊಳ್ಳುತ್ತಿದ್ದಾಗ ಅವರು ನೀರಿಗಾಗಿ ಬಾಯಿ ಬಿಡುತ್ತಿದ್ದಾಗ ಅವರನ್ನು ಶಾಂತ ಮಾಡಲು ವೇದಿಕೆಯ ಮೇಲೆ ಹಾರ್ಮೋನಿಯಂ, ಮದ್ದಳೆಗಳೊಂದಿಗೆ ಕೀರ್ತನೆ ನಡೆಯುತ್ತಿತ್ತು! ತ್ರಿಶೂಲ, ಕಬ್ಬಿಣದ ಸಲಾಕೆಗಳು - ಯಾವ ಸಾಧನಗಳಿಂದ ಮಸೀದಿ ಧ್ವಂಸ ಮಾಡಿದರೋ ಅವೇ ಉಪಕರಣಗಳಿಂದ ಮೊದಲು ಪತ್ರಕರ್ತರ ಮೇಲೆ ಕರಸೇವಕರು ಧಾಳಿ ನಡೆಸಿದರು.

ಪತ್ರಿಕಾಮಂಡಳಿಯ ತನಿಖಾ ಸಮಿತಿಯ ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕು, ತಪ್ಪಿತಸ್ಥರನ್ನು ಹಾಗೂ ಕಾನೂನುಪಾಲನೆಯಲ್ಲಿ ವಿಫಲರಾದವರನ್ನು ಗುರುತಿಸಿ ಶಿಕ್ಷಿಸಬೇಕು ಎಂದು ಸರಕಾರವನ್ನು ಒತ್ತಾಯಿಸಲಾಗಿದೆ. ಆದರೆ ಈ ಹೇಡಿ ಸರಕಾರ ಎಂದಾದರೂ ಮಾಡಬಲ್ಲದೇ!

ಡಿಸೆಂಬರ್ 6ರಂದು ಬಾಬ್ರಿ ಮಸೀದಿ ಸಮೀಪ ಕೇಳಬಂದ ದನಿಗಳು. ಭಾರತೀಯ ಪತ್ರಿಕಾ ಮಂಡಳಿಯೆದುರು ನೀಡಿದ ಸಾಕ್ಷಿಗಳ 81 ಹೇಳಿಕೆಗಳಲ್ಲಿ ಕೆಲವು -

“ಮಸೀದಿ ಒಡೆಸಿದ್ದು ಯಾರು?” ಬಟಾಬಯಲಾದ ದುಷ್ಟ ಮನಸ್ಸುಗಳು ಪತ್ರಿಕಾ ಮಂಡಳಿಯೆದುರು ಬಂದ ಕೆಲವು ಸಾಕ್ಷಿಗಳು

* ಕಾರಸೇವಕರೇ, ದಯವಿಟ್ಟು ಕೆಳಗಿಳಿದು ಬನ್ನಿ. ನಮ್ಮ ಕಾರಸೇವಕರಿಗೆ ಗಾಯಗಳಾಗಬಾರದು ಎಂದು ನಮ್ಮ ಇಚ್ಛೆ. ಗುಮ್ಮಟ ಇನ್ನೇನು ಬೀಳಲಿದೆ. ಕೆಳಗಿಳಿದು ಬನ್ನಿ.

- ಅಡ್ವಾಣಿಯವರ ಕರೆ
ಸಾಕ್ಷಿ: ಪಯೋನಿಯರ್ ಪತ್ರಿಕೆಯ ಪ್ರವೀಣ್‌ಜೈನ್

* ನಿಮಗೆ(ಪತ್ರಕರ್ತರಿಗೆ) ಸರಿಯಾಗಿಯೇ ಮಾಡಿದ್ದಾರೆ.

- ವಿಜಯರಾಜೇಸಿಂಧ್ಯಾ
ಸಾಕ್ಷಿ: 'ಸ್ವತಂತ್ರ ಭಾರತ್' ಪತ್ರಿಕೆಯ ಜಯಪ್ರಕಾಶ್ ಶಾಹೀ ಹಾಗೂ ಪ್ರವೀಣ್ ಜೈನ್(ಪಯೋನಿಯರ್)

* ಪತ್ರಕರ್ತರೊಂದಿಗೆ ನನ್ನ ಲೆಕ್ಕ ಚುಕ್ತಾ ಮಾಡಬೇಕಾಗಿದೆ.

- ವಿನಯ್ ಕಟಿಯಾರ್, ಭಜರಂಗ ದಳದ ಮುಖಂಡ
ಸಾಕ್ಷಿ: ಉತ್ತರಪ್ರದೇಶದ ಪತ್ರಕರ್ತರ ಸಂಘ

* ನಾವು ನಿಮ್ಮನ್ನು ಹೊಡೆದರೆ ಶಹಾಬುದ್ದೀನ್ ಉಳಿಸಲು ಬರುತ್ತಾನೋ! ಶಹಾಬುದ್ದೀನ್‌ನನ್ನು ಕರೆ ಬೋಡೋಣ!

- ಕರಸೇವಕರ ದಳದ ಒಬ್ಬ ಮುಖಂಡ
ಸಾಕ್ಷಿ: 'ಮಾಯಾ' ಪತ್ರಿಕೆಯ ಮನೋಹರಶರ್ಮಾ

* ಸರಕಾರವಂತೂ ಇನ್ನೇನು ಬಿದ್ದೇ ಬಿಡುತ್ತದೆ, ಅದರಜ್ಜಿ - ಮಸೀದಿಯನ್ನು ಏಕೆ ಬಿಡಬೇಕು?

- ಸಾಧ್ವಿ ಋತಂಬರಾ

* ಹೌದು, ನೀನು ಹೇಳುತ್ತಿರುವುದು ಸರಿ.

- ವಿಜಯರಾಜೇಸಿಂಧ್ಯಾ
ಸಾಕ್ಷಿ: ಬಿಸಿನೆಸ್ ಇಂಡಿಯಾ ಪತ್ರಿಕೆಯ ರುಚಿರಾ ಗುಪ್ತ

* ಇನ್ನೊಂದು ಒದೆ ಕೊಡಿ - ಬಾಬ್ರಿ ಮಸೀದಿ ಒಡೆದು ಬಿಡಿ.(ಏಕ್ ಧಕ್ಕಾ ದೋ. ಬಾಬ್ರಿ ಮಸ್ಜಿದ್ ತೋಡ್ ದೋ)

- ಅಡ್ವಾಣಿ ಪಕ್ಕದಲ್ಲಿ ನಿಂತುಕೊಂಡ ಸಾಧ್ವಿ ಋತಂಬರಾ ಧ್ವನಿವರ್ಧಕದಲ್ಲಿ
ಸಾಕ್ಷಿ: ರುಚಿರಾ ಗುಪ್ತಾ

* ಬಾಬರ್ ಹೇಳಿದ ಜೈಶ್ರೀರಾಮ್, ವಿ.ಪಿ.ಸಿಂಗ್ ಹೇಳಿದ - ಜೈಶ್ರೀರಾಮ್ ಸುಪ್ರೀಂ ಕೋರ್ಟ್ ಹೇಳಿತು - ಜೈಶ್ರೀರಾಮ್.

- ಆಚಾರ್ಯ ಧರ್ಮೇಂದ್ರ, ವಿಹೆಚ್‌ಪಿ
ಸಾಕ್ಷಿ: ಹಲವಾರು ಪತ್ರಕರ್ತರು

* ನೀವು ಅಲ್ಲಿ ಪ್ರಸಾದ ತಗೊಳ್ತಿದ್ದಾರಲ್ಲಾ. ಅವರ ಫೋಟೋ ತೆಗೆಯಿರಿ. ಅವರ ಫೋಟೋ ನೀವೇಕೆ ತಗೊಳ್ತಿಲ್ಲ?

- ಅಡ್ವಾಣಿ
ಸಾಕ್ಷಿ: ಹಲವು ಫೋಟೋಗ್ರಾಫರ್‌ಗಳು

* ಈ ಕತ್ತೆಗಳು ಇಷ್ಟು ಬೇಗ ಏಕೆ ಓಡಿಹೋದರು. ಕಾರಸೇವೆಯ ಸಮಯದಲ್ಲಿ ಮಸೀದಿ ಒಡೆಯುವುದೆಂದು ಇವರಿಗೆ ಹೇಳಿತ್ತು.

ಕರಸೇವಕರ ಒಬ್ಬ ಮುಖಂಡ
ಸಾಕ್ಷಿ: ವಿವಾನ್ ಮೆಹ್ತಾ

* ನೀವು ಇದರ(ಧ್ವಂಸದ) ಸುದ್ದಿ ಕಳಿಸಿದರೆ ಗುಂಡು ಹಾಕಿ ಸಾಯಿಸುತ್ತೇವೆ.

- ಮಹಂತ ನಾರಾಯಣಾಚಾರಿ
ಸಾಕ್ಷಿ: ಭಾನುಪ್ರತಾಪ್(ಅಮರ್‌ಉಜಾಲಾ)

* ಅವರು(ಕರಸೇವಕರು) ನನ್ನ ಪರೀಕ್ಷೆ ನಡೆಸಿದರು - ನಾನು ಸಾಬಿಯೋ ಅಲ್ಲವೋ ಎಂದು.

- ಎಸ್.ಕೆ.ಯಾದವ್
(ನಾರ್ದರ್ನ್ ಇಂಡಿಯಾ ಪತ್ರಿಕೆ)

* ಫೋಟೋಗ್ರಾಫರ್‌ಗಳನ್ನು ಒಳಗೆ ಬಿಡಬಾರದೆಂದು ಅಶೋಕ್ ಸಿಂಘಾಲ್ ಹೇಳಿದ್ದಾರೆ.

- ಬಾಗಿಲಲ್ಲಿ ನಿಂತ ಒಬ್ಬ ಕರಸೇವಕ
ಸಾಕ್ಷಿ: ನಿತಿನ್‌ರಾಯ್(ಸಂಡೇ)

* ಇವನನ್ನು ಬಂಧಿಸಿ

- ಒಬ್ಬ ಫೋಟೋಗ್ರಾಫರ್‌ಗೆ ಹೊಡೆದು ಪೋಲೀಸರ ಕಡೆ ಅಟ್ಟುತ್ತಾ ಒಬ್ಬ ಕರಸೇವಕ
ಸಾಕ್ಷಿ: ಹರಿಕೃಷ್ಣ ಅರೋರಾ(ರಾಷ್ಟ್ರೀಯ ಸಹಾರಾ)

* ನಮ್ಮನ್ನೇಕೆ ನಿಮ್ಮ ಮಧ್ಯ ಎಳೆಯುತ್ತೀರಿ? ನೀವು ಪರಿಹರಿಸಿಕೊಳ್ಳಿ,

- ಪೋಲೀಸ್ ಅಧಿಕಾರಿ
ಸಾಕ್ಷಿ: ಹರಿಕೃಷ್ಣ ಅರೋರಾ

* ನೀವು ನಮ್ಮ ಜೀಪಿನಿಂದ ಇಳಿಯಿರಿ. ಅವರು(ಕರಸೇವಕರು) ಜೀಪನ್ನು ಸುಟ್ಟುಬಿಡ್ತಾರೆ.

- ಹೊಡೆತ ತಿಂದ ಪತ್ರಕರ್ತರಿಗೆ ಒಬ್ಬ ಪೋಲೀಸ್ ಅಧಿಕಾರಿ
ಸಾಕ್ಷಿ: ಮನೋಜ್ ಚಾವ್ಲಾ
(ಟೈಮ್ಸ್ ಆಫ್ ಇಂಡಿಯಾ)

“ನಿಮ್ಮ ಸಂಗ ಬೇಡಪ್ಪ ನಮಗೆ”

“ನಿಮ್ಮ ಸಂಗ ಸಾಕಾಯ್ತು, ಇನ್ನು ಬೇಡಪ್ಪ ನಮಗೆ, ನಮ್ಮನ್ನು ಕ್ಷಮಿಸಿ” ಈ ಮಾತು ಯಾರ ಬಾಯಿಂದ ಹೊರಬಿದ್ದಿರುವುದು ಗೊತ್ತೇ. ಬಿಜಾಪುರ ಜಿಲ್ಲೆಯ ಬಾಗಲಕೋಟೆ ನಗರದ ವ್ಯಾಪಾರಸ್ಥರಿಂದ. ಯಾವ ಸಂದರ್ಭ. ಜನವರಿ ತಿಂಗಳ ತಾ. 26ರಂದು ಈದ್‌ಗಾ ಮೈದಾನಿನಲ್ಲಿ ರಾಷ್ಟ್ರೀಯ ಧ್ವಜ ಹಾರಿಸಿಯೇ ತೀರುತ್ತೇವೆಂದು ಬಿಜೆಪಿಯವರು ಹಠ ಹಿಡಿದಾಗ ಬಿಜೆಪಿ ಅಧ್ಯಕ್ಷ ಯಡಯೂರಪ್ಪನವರ ಬಂಧನವಾಯಿತಲ್ಲ. ಅದನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಹರತಾಳ ಆಚರಿಸಬೇಕೆಂದು ಬಿಜೆಪಿ ಕರೆ ಕೊಟ್ಟಿತ್ತು. ಆ ಮುಂಚೆ ಎರಡು ಸಲ ಒತ್ತಾಯದಿಂದ ಅಂಗಡಿಗಳನ್ನು ಮುಚ್ಚಿಸಲಾಗಿತ್ತು. ಅನಂತರ 2--3 ಅಂಗಡಿಗಳಿಗೂ ಬೆಂಕಿ ಹಚ್ಚಲಾಯಿತು. ಅವರ ರಕ್ಷಣೆಗೆ ಯಾರೂ ಮುಂದಾಗಲಿಲ್ಲ. ಈ ಸಲ ಮತ್ತೆ ಯಡಯೂರಪ್ಪನವರ ಬಂಧನವನ್ನು ಪ್ರತಿಭಟಿಸಿ ಹರತಾಳ ಆಚರಿಸಬೇಕೆಂದು ಆರ್‌ಎಸ್‌ಎಸ್ ಕಾರ್ಯಕರ್ತರು ಬಜಾರಿನಲ್ಲಿ ವ್ಯಾಪಾರಸ್ಥರನ್ನು ಒತ್ತಾಯಿಸಿದಾಗ ಹೊರಟ ಉದ್ಗಾರ. ಹೀಗೆಯೇ ಬಿಜಾಪುರ ಮಾತ್ರವಲ್ಲ, ಬಿಜೆಪಿಯ ಬಲಿಷ್ಟ ಕೇಂದ್ರವಾದ ಹುಬ್ಬಳ್ಳಿಯಲ್ಲಿ ಕೂಡ ಅವರ ಬೆಂಬಲಿಗರೇ ಅಂಗಡಿ ಮುಚ್ಚಲು ಹಿಂದೇಟು ಹಾಕಿದರು. ಕಾರಣ ವೇನು?

ಅಯೋಧ್ಯೆ ಘಟನೆಯ ನಂತರ ಒಂದು ಒಂದೂವರೆ ತಿಂಗಳು ದೇಶಾದ್ಯಂತ ನಡೆದ ಬೆಂಕಿ, ಲೂಟಿ, ಹಿಂಸೆಗಳಲ್ಲಿ ಜನಜೀವನವನ್ನು ಮಾತ್ರವಲ್ಲ ವ್ಯಾಪಾರವನ್ನೂ ಉತ್ಪಾದನೆಯ[illegible] ಸಂಪೂರ್ಣ ಸ್ಥಗಿತಗೊಳಿಸಿದಂತಾಗಿದೆ. ಕಾಮಿ[illegible] ಕರು ಹಾಜರಾಗದೆ ಕಾರ್ಖಾನೆಗಳು ನಡೆಯ[illegible] ಲಿಲ್ಲ. ಉತ್ಪಾದನೆ ಆಗಲಿಲ್ಲ, ವ್ಯಾಪಾರ ನಡೆಯ[illegible] ಲಿಲ್ಲ(ಕರ್ಫ್ಯೂ ಮತ್ತಿತರ ಪ್ರತಿಬಂಧಗಳ ಮೂಲಕ[illegible] ಮಾಲುಗಳ ರವಾನೆಯಲ್ಲಿ ಹೀಗಾಗಿ ಆರ್ಥಿ[illegible] ರಂಗದ ಎಲ್ಲಾ ಕ್ಷೇತ್ರ ಸ್ಥಗಿತಗೊಂಡು ಅಪಾರ[illegible] ಹಾನಿಗೊಳಗಾಗಿದೆ.

ಮುಂಬಯಿ ನಗರ ಒಂದರಲ್ಲೇ ರೂ[illegible] 2000 ಕೋಟಿ ಹಾನಿಯಾಗಿದೆಯಂತೆ. ಅಹ[illegible] ಮದಾಬಾದ್ ಸೂರತ್‌ಗಳಲ್ಲಿಯ ಹಾನಿ ರೂ[illegible] 3000 ಕೋಟಿ ಮೀರಿದೆಯಂತೆ. ಗುಜರಾತ್[illegible] ಮಹಾರಾಷ್ಟ್ರ, ಕರ್ನಾಟಕ ಮುಂತಾದ ರಾಜ್ಯಗಳಿ[illegible] ಜನರಿಗೆ ಬೇಕಾದ ಅವಶ್ಯಕ ವಸ್ತುಗಳ ಉತ್ಪಾ[illegible] ದನೆ ಆಗುತ್ತಿರುವುದು ಮುಂಬಯಿ. ಅಲ್ಲಿಯ[illegible] ಕಾರ್ಖಾನೆಗಳಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಒದಗಿಸುವವರು ಈ ಮೂರು ರಾಜ್ಯಗಳು[illegible] ಅಯೋಧ್ಯೆ ಘಟನೆಯಿಂದಾಗಿ ಲಾರಿ-ಟ್ರಕ್‌ಗಳ[illegible] ಸಂಚಾರವಿಲ್ಲ. ಕಚ್ಚಾ ಮಾಲುಗಳ -ತಯಾರಾದ[illegible] ವಸ್ತುಗಳ ರವಾನೆಯಿಲ್ಲ. ದೇಶದ ಹೆಚ್ಚಿನ ನಗರ[illegible] ಗಳಲ್ಲಿಯ ಪರಿಸ್ಥಿತಿಯ ಚಿತ್ರಣ ಇದಾಗಿದೆ.

ಸಾಧಾರಣ ದಿನಗಳಲ್ಲಿ ರಾಜಕೋಟ[illegible] ನಗರ ಸಭೆಗೆ ಆಕ್ಟ್ರಾಯಿ ಮೂಲಕ ಪ್ರತಿದಿನ ರೂ[illegible] 5 ಲಕ್ಷ ಸಂಗ್ರಹವಾಗುತ್ತದೆಯಂತೆ. ಅಯೋಧ್ಯೆ[illegible] ಘಟನೆಯ ಒಂದು ವಾರದ ನಂತರ ಅದು[illegible] ರೂ. 75,000ಕ್ಕೆ ಇಳಿಯಿತು. ಒಂದು[illegible]


ಕೋಮುವಾದಿಗಳ ಕೇಂದ್ರ ಸ್ಥಾನಕ್ಕೆ[illegible]

ಮಹಾರಾಷ್ಟ್ರದ ನಾಗಪುರದಲ್ಲಿ ಫೆಬ್ರವರಿ 13ರಂದು ಒಂದು ವಿಶಿಷ್ಟ ವಾತಾವರಣ. ಅದನ್ನು ಉತ್ಸಾಹದ ವಾತಾವರಣ ಅಂತಲೂ ಧಾರಾಳವಾಗಿ ಹೇಳಬಹುದು. ವಿವಿಧ ಭಾಗಗಳಿಂದ ಬಂದು ಸೇರಿದ ಸುಮಾರು 20 ಸಾವಿರ ಜನರ ಬೃಹತ್ ರ‍್ಯಾಲಿಯೊಂದು ಆ ದಿನ ಅಲ್ಲಿ ನಡೆಯಿತು. ಜಾತ್ಯತೀತತೆ ಮತ್ತು ಕೋಮು ಸೌಹಾರ್ದ ರಕ್ಷಣೆಗಾಗಿ, ರಾಷ್ಟ್ರವ್ಯಾಪಿಯಾಗಿ ನಡೆಯುತ್ತಿರುವ ಕಾರ್ಯಕ್ರಮದ ಅಂಗವಾಗಿ 'ರಾಷ್ಟ್ರೀಯ ಏಕತಾ' ಆಂದೋಲನ ಕೋಮುವಾದಿಗಳ ಕಾರಾಸ್ಥಾನದ ಕೇಂದ್ರ ಸ್ಥಳದಲ್ಲಿ ಈ ಪರಿಣಾಮಕಾರಿಯಾದ ಸಮಾವೇಶವನ್ನು ಆಯೋಜಿಸಿತ್ತು. ಕೋಮು ವಿಷ ಬೀಜ ಬಿತ್ತುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್[illegible] ಎಸ್.ಎಸ್.)ದ ಕೇಂದ್ರ ಕಾರ್ಯಾಲಯ[illegible] ನಾಗಪುರದಲ್ಲಿದೆ. ಈ ಹಿನ್ನೆಲೆಯಲ್ಲಿ ಗಮ[illegible] ನಿಸುವಾಗ ರ‍್ಯಾಲಿಗೆ ಸಿಕ್ಕ ಪ್ರತಿಕ್ರಿಯೆ ನಿಜಕೂ[illegible] ಅದ್ಭುತ ಹಾಗೂ ಮಹತ್ವಪೂರ್ಣವಾದದ್ದು.

ಸೈಫುದ್ದಿನ್ ಚೌಧರಿ (ಸಿಪಿಐ(ಎಂ[illegible] ರಾಮ್‌ವಿಲಾಸ್ ಪಾಸ್ವಾನ್ (ಜನತಾದಳ[illegible] ಎ.ಬಿ. ಬರ್ಧನ್ (ಸಿಪಿಐ), ಧಿರೇಂದ್ರ[illegible] ಪ್ರತಾಪ್ (ಜನತಾದಳ-ಅಜಿತ್) ಮತ್ತು[illegible] ಇತರ ಮುಖಂಡರು ರ‍್ಯಾಲಿಯನ್ನುದ್ದೇಶಿಸಿ[illegible] ಮಾತನಾಡಿದರು.

ಬಾಬರ್ ಬಿ.ಜೆ.ಪಿ. ಸದಸ್ಯನೆ?

ರಾಜಕೀಯದಿಂದ ಕೋಮುವಾದವನ[illegible]



ಈ ವಾರ

ಒಂದು ದೇವಸ್ಥಾನದಿಂದ 42 ಮಂದಿ ಬಿ.ಜೆ.ಪಿ.ಯವರನ್ನು ಪೂರ್ವದಿಲ್ಲಿಯಲ್ಲಿ ಬಂಧಿಸಲಾಯಿತು ಎಂದು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಎಂ.ಎಲ್. ಖುರಾನಾ ಹೇಳಿದ್ದಾರೆ. ಇದು ಫೆ. 21 ರ ಒಂದು ಸುದ್ದಿ. ನಂತರವೂ ಇಂತಹ ಸುದ್ದಿಗಳು ಬಂದಿವೆ. ಗುರುದ್ವಾರಗಳಿಂದ ಭಯೋತ್ಪಾದನೆ ನಡೆಸುತ್ತಿದ್ದ ಭಿಂದ್ರನ್‌ವಾಲೇ ಬೆಂಬಲಿಗರ ನೆನಪಾಗುತ್ತದೆಯಲ್ಲವೇ?

* * * * * * * * *

“ಇವೆಲ್ಲಾ ಘಟನೆಗಳು ಏನು ತೋರಿಸುತ್ತವೆ ? ಅಕಾಲಿಗಳು ಸಿಖ್ 'ಗ್ರಂಥಿಗಳು', ಪಾಂಥಿಕ್ ಸಮಿತಿಗಳ ಕೈದಿಗಳಾದುದಕ್ಕೂ ಇದಕ್ಕೂ ಇರುವ ಸಾಮ್ಯ ಹೆದರಿಕೆ ಹರಿಸುವಂತದ್ದು. ಮತೀಯ ರಾಜಕಾರಣದ ಮೇಲೆ ಭಿಂದ್ರನ್‌ವಾಲೇ ನೆರಳು ಸದಾ ದುರುಗುಟ್ಟಿತ್ತಿರುತ್ತದೆ” ಎಂದು 'ಇಂಡಿಯಾ ಟುಡೇ' (ಫೆ. 28) ಕೂಡಾ ಅಭಿಪ್ರಾಯ ಪಟ್ಟಿದೆ.

* * * * * * * * *

'ನಾನು ಇತ್ತೀಚೆಗೆ ಮುಂಬೈಗೆ ಹೋಗಿದ್ದಾಗ ಒಬ್ಬ ವಯಸ್ಸಾದ ಹೆಂಗಸು ಧಾವಿಸಿ ಬಂದಳು. ಇತ್ತೀಚಿನ ಗಲಭೆಗಳಲ್ಲಿ ಅವಳ ಮಗನನ್ನು ಕೊಚ್ಚಿಹಾಕಿದ್ದರಿಂದ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಳು. ಅವರು ನನ್ನ ಮಗನನ್ನು ಕೊಂದರು. ಆದರೆ ದೇಶವನ್ನು ಕೊಲ್ಲಲು ಅವರನ್ನು ಬಿಡಬೇಡಿ' ಎಂದಳು ಅವಳು. - ಹೀಗೆಂದವರು ಆಂತರಿಕ ಭದ್ರತೆಯ ಮಂತ್ರಿ ರಾಜೇಶ್ ಪೈಲೆಟ್- ಸಂಸತ್ತಿನ ಒಂದು ಚರ್ಚೆಯ ಸಂದರ್ಭದಲ್ಲಿ. ಆದರೂ ಅವರ ಮುಖಂಡರು ಹಾಗೂ ದೇಶದ ಪ್ರಧಾನ ಮಂತ್ರಿಗಳು ಮುಂಬೈಗೆ ಹೋದಾಗ ಈ ರೀತಿ ದೇಶವನ್ನು ಕೊಲ್ಲ ಹೊರಟವರ ಬಗ್ಗೆ ತುಟಿ ಪಿಟಿಕ್ಕೆನ್ನಲಿಲ್ಲವಲ್ಲ, ಏಕೆ?

* * * * * * * * *

ಮುಂಬೈಯಲ್ಲಿ ನಡೆದದ್ದು ಖೇದಕರ- ಆದರೆ ಅದಕ್ಕೂ ಅಯೋಧ್ಯೆಗೂ ಏನೂ ಸಂಬಂಧವಿಲ್ಲ ಎಂದು 'ವಿರೋಧ ಪಕ್ಷದ ಮುಖಂಡ' ಅಡ್ವಾಣಿಯವರೂ ಮತ್ತೊಮ್ಮೆ ಹೇಳಿದ್ದಾರಂತೆ- ಇದೂ ಕೂಡ ಸಂಸತ್ತಿನಲ್ಲೇ. ಹೊರಗೆ ಪತ್ರಕರ್ತರು ಮುಂಬೈ ಗಲಭೆ ಬಗ್ಗೆ ಕೆದಕಿ-ಕೆದಕಿ ಪ್ರಶ್ನೆ ಕೇಳಿದಾಗ 'ನಾವೇ ಅದನ್ನ ನಡೆಸಿದ್ದು' ಎಂದು ಸ್ವತಃ ಹೇಳಿಕೊಂಡ ಶಿವಸೇನಾ ಮುಖಂಡ ಬಾಳ ಠಾಕ್ರೆಯ ಹೆಸರು ಉಚ್ಚರಿಸಲು ಕೂಡ ಅವರು ಹಿಂದೇಟು ಹಾಕಿದರಂತೆ- “ಒಬ್ಬ ದಂಗೆಕೋರ ದಂಗೆಕೋರನೆ ಆವನ ಹೆಸರೇನು ಎಂದು ಹೇಳುವ ಅಗತ್ಯ ನನಗೆ ಕಾಣುವುದಿಲ್ಲ.” ಎಂದು 'ಭವಿಷ್ಯದ ಪ್ರಧಾನಿ' ಬಿರುದಾಂಕಿತ ಅಡ್ವಾಣಿಯವರು

ರಾಜಿನ ಪ್ರಕಾರ ಗುಜರಾತ್ ಒಂದರಲ್ಲಿಯೇ ಗಿರಣಿ, ಇಂಜಿನಿಯರಿಂಗ್, ಕೈಗಾರಿಕಾ ಕಚ್ಚಾ ...ಲು ಮೊದಲಾದ ಉತ್ಪಾದನೆ, ವ್ಯಾಪಾರ ...ದಾಗಿಯೇ ಹನ್ನೆರಡು ಸಾವಿರ ಕೋಟಿಗೂ ... ಹಾನಿಯಾಗಿದೆಂದು ಹೇಳಲಾಗುತ್ತಿದೆ.

ಮುಂಬಯಿ-ಗುಜರಾತುಗಳಲ್ಲದ ಪರಿ...ಪ ಮಧ್ಯಪ್ರದೇಶಕ್ಕೂ ಹಬ್ಬಿ ಅಪಾರ ಹಾನಿ ...ಟು ಮಾಡಿದೆ. ಕರ್ನಾಟಕದ ಮೇಲೆ ಪರಿ...ಣಾಮವಾಗದೆ ಉಳಿಯುತ್ತದೆಯೇ? ಚೇಂಬರ್ ... ಕಾಮರ್ಸಿನ ಅಧ್ಯಕ್ಷರ ಹೇಳಿಕೆಯಂತೆ ...ಬಯಿ ದಂಗೆಯಿಂದಾಗಿ ಟ್ರಕ್‌ಗಳು ಓಡಾ...ಲ್ಲ. ಕಚ್ಚಾ ನೂಲುಗಳೆಲ್ಲ ಕಾರ್ಖಾನೆಗಳಲ್ಲೇ ...ದವು, ಕಚ್ಚಾ ನೂಲುಗಳ ಅಭಾವವಾಯಿತು. ...ಕೈಗಾರಿಕೆ, ರೆಡಿಮೇಡ್ ಉಡುಪು ತಯಾ...ರಿ, ಕೆಮಿಕಲ್ಸ್, ಅಟೋಮೊಬೈಲ್ಸ್ ವ್ಯಾಪಾರಿ ... ಅಪಾರ ನಷ್ಟ ಅನುಭವಿಸಿದರು. ಎರಡೇ ...ಗಳಲ್ಲಿ ಇಷ್ಟು ಹಾನಿಯಾಗಿದೆ.

ರಾಜಸ್ಥಾನದ ವ್ಯಾಪಾರಿ ಸಂಘದ ಹೇಳಿ...ಕೆಯಂತೆ ರೂ. 200 ಕೋಟಿ ಹಾನಿ ತಟ್ಟಿ...ದೆಯಂತೆ. ದಂಗೆಯಿಂದಾಗಿ ಸಣ್ಣ ಪುಟ್ಟ ವ್ಯಾಪಾರ...ರು ಕಠಿಣ ಪರಿಸ್ಥಿತಿ ಎದುರಿಸಿದ್ದಾರಂತೆ.

ಒಂದು ಕಡೆ ಬಿಜೆಪಿ, ಆರ್‌ಎಸ್‌ಎಸ್ ವಿಹೆಚ್‌ಪಿಯವರ ಕುತಂತ್ರದಿಂದಾಗಿ ಎದ್ದು ವ್ಯಾಪಾರದಲ್ಲಿ ಅಪಾರ ಹಾನಿಯಾ... ಮತ್ತೊಂದು ಕಡೆ ಹರತಾಳ- ಬಂದ್‌ಗಳ ...ಲಕ ನಷ್ಟ, ಎದುರಿಸಬೇಕಾದ ಪರಿಸ್ಥಿತಿ. ...ಾರಸ್ಥರಲ್ಲಿ, ಕೈಗಾರಿಕೋದ್ಯಮಿಗಳಲ್ಲಿ ಬಿಜೆಪಿ ...ಎಸ್‌ಎಸ್ ಬೆಂಬಲಿಗರಿದ್ದರೂ ಕೂಡ ...ೋಧ್ಯೆ ಘಟನೆ ಮತ್ತು ಅನಂತರದ ಪರಿಸ್ಥಿತಿ...ವಾಗಿ ಲಾಭದ ಮೇಲೆಯೇ ಕೈಯಿಟ್ಟು ಕೂತಿರುವ ವ್ಯಾಪಾರಸ್ಥರ ಗುಂಪು ತಮ್ಮ ಜೇಬಿಗೆ ಹಾನಿ ತಟ್ಟಿದಾಗ ತಮ್ಮ ಜಾತಿ-ಧರ್ಮದ ದೃಷ್ಟಿಯಿಂದ, ವ್ಯಾಮೋಹದಿಂದ ಮತೀಯ ಶಕ್ತಿಗಳಿಗೆ ಬೆಂಬಲ ನೀಡುತ್ತಿದ್ದರೂ ಹರತಾಳ-ಬಂದ್‌ಗಳಲ್ಲಿ ಭಾಗವಹಿಸಲು ಹಿಂದೇಟು ಹಾಕುತ್ತಿರುವುದು ಕಂಡು ಬರುತ್ತಿದೆ. ಮಾತ್ರವಲ್ಲ ಕಾಂಗ್ರೆಸ್ ನಂತರ ಗೆಲ್ಲುವ ಕುದುರೆ ಬಿಜೆಪಿ ಎಂಬ ಭಾವನೆ ಹರಡಿದ್ದರೂ ಕೂಡಾ, ಬಿಜೆಪಿ ಅಧಿಕಾರಕ್ಕೆ ಬಂದರೆ, ಅಯೋಧ್ಯೆ ಸಮಸ್ಯೆ ಜೀವಂತವಾಗಿಯೇ ಉಳಿದರೆ ಅದರ ಪರಿಣಾಮವಾಗಿ ಹಿಂದೂ-ಮುಸ್ಲಿಂ ಗಲಭೆಗಳು, ಮತೀಯ ದ್ವೇಷ, ವ್ಯಾಪಾರ-ವ್ಯವಹಾರ ಸ್ಥಗಿತಗೊಂಡರೆ ಹೆಚ್ಚಿನ ಹಾನಿ ತಮಗಾಗುತ್ತದೆಂದು ಮನಗಂಡ ವ್ಯಾಪಾರಿ ವರ್ಗ ಇಷ್ಟು ದಿವಸದ ಬಿಜೆಪಿ ಬೆಂಬಲದ ತಮ್ಮ ನಿಲುಮೆಯಲ್ಲಿ ಸ್ವಲ್ಪ ಬದಲಾವಣೆ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಆದರೆ ಈ ನಿಲುಮೆ ಎಷ್ಟರಮಟ್ಟಿಗೆ ಹೀಗೆಯೇ ಇರುತ್ತದೆ. ಪರವಾಗಿ ಮತ್ತೆ ತಿರುಗುತ್ತದೋ ಅಥವಾ ವಿರೋಧದತ್ತ ವಾಲುತ್ತದೋ ಎಂಬುದು ಎಡ ಹಾಗೂ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಚಟುವಟಿಕೆ, ಅವುಗಳ ಬಲಸಂವರ್ಧನೆಯ ಮೇಲೆ ಅವಲಂಬಿಸಿರುತ್ತದೆ. ಉತ್ತರ ಪ್ರದೇಶದ ಬಿಜೆಪಿ ಮಾಜಿ ಮುಖ್ಯಮಂತ್ರಿ ಕಲ್ಯಾಣ್‌ಸಿಂಗ್ ಕಲ್ಕತ್ತೆಗೆ ಹೋದಾಗ ಅತಿ ದೊಡ್ಡ ಕೈಗಾರಿಕೋದ್ಯಮಿಗಳಲ್ಲೊಬ್ಬರು ಬೆಂಬಲ ತೋರಿದ್ದರೂ, ಬೇರೆ ಕೆಲವು ದೊಡ್ಡ ಕೈಗಾರಿಕೋದ್ಯಮಿ ಮತೀಯ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಬಹಿರಂಗವಾಗಿಯೇ ಭಾಗವಹಿಸುತ್ತಿರುವುದು ಸ್ವಾಗತಾರ್ಹ. ಭಾರತ ದೇಶದ ಇಂದಿನ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಒಂದು ಕಡೆ ನರಸಿಂಹರಾವ್ ಸರಕಾರದ ಧೋರಣೆಯ ಫಲವಾಗಿ, ಕಾಂಗ್ರೆ ಪಕ್ಷದಲ್ಲಿಯ ಅಂತರಿಕ ಜಗಳದಿಂದಾಗಿ ಕಾಂಗ್ರೆ ಆಡಳಿತ, ಕಾಂಗ್ರೆ ಪಕ್ಷದ ಪ್ರಭಾವ ಇಳಿಮುಖವಾಗುತ್ತಿರುವಾಗ, ಬಿಜೆಪಿ ರಾಮನ ಹೆಸರಿನಲ್ಲಿ ತನ್ನ ಪ್ರಭಾವ ಬೆಳೆಸುವ ಮಹಾ ತಂತ್ರ ನಡೆಸುತ್ತಿದ್ದರೂ ಅದರ ಧೋರಣೆ ಜನರ್ನು ಪುನರ್ವಿಚಾರದತ್ತ ಚಿಂತನೆಗೆ ದೂಡುತ್ತಿರುವಾಗ ದೇಶದ ಐಕ್ಯತೆ, ಸಮಗ್ರತೆಯನ್ನು ರಕ್ಷಿಸುವುದು ಮಾತ್ರವಲ್ಲ, ಮತೀಯ ಸೌಹಾರ್ದತೆಯನ್ನು ಕಾಪಾಡುವುದು, ದೇಶದಲ್ಲಿ ಶಾಂತಿ ಸೌಹಾರ್ದತೆಯನ್ನು ಉಳಿಸಿ, ಜನಜೀವನ ಸುಗಮವಾಗಿ ನಡೆಯುವಂತೆ ಮಾಡುವ ಕರ್ತವ್ಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಹಾಗೆಯೇ ಇತರ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ಜವಾಬ್ದಾರಿ ಬಿದ್ದಿದೆ. ಈ ಅಂಶ ಅಯೋಧ್ಯೆ ಘಟನೆಯ ಕುರಿತು ಈ ಪಕ್ಷ, ಶಕ್ತಿಗಳು ಅನುಸರಿಸಿಕೊಂಡು ಬಂದ ನಿಲುಮೆ ಧೋರಣೆಗಳು ತೋರಿಸಿಕೊಟ್ಟಿವೆ ಎಂದು ಬಹಳಷ್ಟು ಜನ ಬಹಿರಂಗವಾಗಿಯೇ ಅಭಿಪ್ರಾಯ ವ್ಯಕ್ತಮಾಡುತ್ತಿದ್ದಾರೆ. ಹಾಗಿರುವಾಗ ಇಂಥ ಪರಿಸ್ಥಿತಿಯಲ್ಲಿ ನೇರ ಮಧ್ಯ ಪ್ರವೇಶ ಮಾಡಿ ಬಿಜೆಪಿಯಂಥ ಮತೀಯ ಶಕ್ತಿಗಳನ್ನು ಜನರಿಂದ ದೂರ ಸರಿಸಿ, ಎಡ ಪ್ರಜಾಪ್ರಭುತ್ವ ಶಕ್ತಿಗಳ ಬಲಸಂವರ್ಧನೆಯಾಗುವಂತೆ ಮಾಡುವ ಚರಿತ್ರಾರ್ಹ ಜವಾಬ್ದಾರಿ ಸಿಪಿಐ(ಎಂ), ಸಿಪಿಐ, ಜನತಾದಳಗಳ ಮೇಲೆ ಬಿದ್ದಿದೆ. ಈ ಕರ್ತವ್ಯವನ್ನು ನಿಭಾಯಿಸಲು ನಾವೆಲ್ಲಾ ಮುನ್ನುಗ್ಗೋಣ. ಮತೀಯ ಶಕ್ತಿಗಳನ್ನು ಬಲಹೀನಗೊಳಿಸೋಣ. ಇದೇ ಇಂದಿನ ಕರ್ತವ್ಯ

-ಎನ್.ಕೆ. ಉಪಾಧ್ಯಾಯ



ಅಯೋಧ್ಯಾಕಾಂಡ
'ಜನರಂಗ' ವಾರಪತ್ರಿಕೆಯ ಪ್ರಕಟಣೆ

ದೆಹಲಿಯ ವಸತಿ ಪ್ರದೇಶವೊಂದರಲ್ಲಿ, ಕಳಪೆ ಸಿನಿಮಾ ಹಾಡುಗಳ ಶೈಲಿಯಲ್ಲಿ 'ಜಾಗರಣೆ'ಯನ್ನು ರಾತ್ರಿಯಿಡಿ, ಧ್ವನಿವರ್ಧಕಗಳ ಮೂಲಕ ನಡೆಸಿದ 'ಹಿಂದುತ್ವವಾದಿ'-ಗಳು, ಪ್ರದೇಶದ ಜನ ರಾತ್ರಿಯಿಡಿ ನರಕಯಾತನೆ ಅನುಭವಿಸುವಂತೆ ಮಾಡಿದರು. ಜಯಜಯತ್ಲೆ ಎಂಬುವವರು ಈ ರೀತಿಯ ಸಾರ್ವಜನಿಕ ಹಿಂಸೆಯನ್ನು ನಿಲ್ಲಿಸಬೇಕೆಂದು ಕೇಳಿಕೊಂಡಾಗ ಅವರನ್ನು 'ಹಿಂದು ವಿರೋಧಿ' ಎಂದು ದೂಷಿಸಲಾಯ್ತು; ಪೋಲಿಸರಿಗೆ ಮಾಡಿಕೊಂಡ ಎಲ್ಲ ಮನವಿಗಳು ನಿರರ್ಥಕವಾಗಿದ್ದವು. ಅಯೋಧ್ಯೆ, ಮುಂಬಯಿಯ ಅವಘಢಗಳಿಗೂ ಹಬ್ಬಿರುವ ಅಪಾಯಕಾರಿ ಸಾಮ್ಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿರುವ, ಜಯಜಯತ್ಲೆಯವರು, ದಿನಾಂಕ 14.12.1993 ರ 'ದಿ ಹಿಂದು' ಪತ್ರಿಕೆಯಲ್ಲಿ ಅದ್ವಾನಿಯವರಿಗೆ ಬಹಿರಂಗ ಪತ್ರವೊಂದನ್ನು ಬರೆದಿದ್ದಾರೆ. ಆ ಪತ್ರ ತುಂಬಿಕೊಂಡಿರುವ ಸಂವೇದನೆ, ರೋಷಗಳನ್ನು ನೇರ ಅನುವಾದಕ್ಕಿಂತ, ಗದ್ಯಕಾವ್ಯರೂಪದಲ್ಲಿ ಕೊಡುವುದು ಸೂಕ್ತ ಎಂದು ಅನಿಸಿ, ಈ ಗದ್ಯ ಕಾವ್ಯ ನೀಡುತ್ತಿದ್ದೇನೆ.

ಬೇಡ ಅದ್ವಾನಿ, ಬೇಡ ಸ್ವಲ್ಪವೂ ಅನುಮಾನ

(ಒಂದು ಗದ್ಯಕಾವ್ಯ)

ನಾವು ವಾಸಿಸುತ್ತೇವೆ. ಇಲ್ಲಿ
-ಮನೆಗಳು, ಆಸ್ಪತ್ರೆಗಳು, ಮೈದಾನ ಹೂದೋಟಗಳಿರುವ ತಾಣವೊಂದರಲ್ಲಿ.

ದಿನವಿಡೀ ಹಾಡುವೆವು, ಆಡುವೆವು, ದುಡಿವೆವು ಓಡಿ ಉರಿಬಿಸಿಲ ತೆಕ್ಕೆಯೊಳಗೆ,
ನಡೆವವರು ನಾವು ಬೀಳುವೆವು, ಕೈಕಾಲು ಕೆತ್ತಿ, ಒಂದಿಷ್ಟು ಮಣ್ಣು ನಮ್ಮ ಮೈಗೆ ಮೆತ್ತಿ.
ಹೊಟ್ಟೆ ತುಂಬುವುದಕ್ಕಿಮ್ಮ ದುಡಿಮೆ ;
ಮಕ್ಕಳ ಮೈಗೊಂದಿಷ್ಟು ಬಟ್ಟೆ ಹೊಂದಿಸುವುದರಲ್ಲೇ ನಮ್ಮ ಹಿರಿಮೆ,
ಮುಸ್ಸಂಜೆಯ ಹೊತ್ತಿಗೆ ಮುತ್ತುತ್ತದೆ ನಿದ್ದೆಯ ಕಾಡಿಗೆ, ರಾತ್ರಿಗೊಂದಿಷ್ಟು ಅಡುಗೆ,
ತಲೆ ದಿಂಬಿಗಿಟ್ಟುಕೊಂಡು ದಿನದ ಯಾತನೆ,
ಮಲಗುವುದೊಂದೇ ನಾವರಿತಿರುವ ಪ್ರಾರ್ಥನೆ.

ಇಂತಹ ಪ್ರಾರ್ಥನೆಗೆ, ಹಾಕಿದರು. ನೀನು ಸೃಷ್ಟಿಸಿದ ಪುಂಡರು ಮುತ್ತಿಗೆ (ಸೃಷ್ಟಿಸಿದ್ದು, ನೀನೆ, ಬೇರೆ ಪುರಾವೆ ಬೇಕಿಲ್ಲ).

ರಾತ್ರಿಯಿಡೀ ನಡೆಸಿದರು ಡಿಸ್ಕೋ ಸ್ಟೈಲುಗಳಲ್ಲಿ ದೇವರ 'ಜಾಗರಣೆ ಕೀರ್ತನೆ' ; ತಡೆಯುವುದೇ ಅಪರಾಧವೆಂಬಂತೆ, ಪಿಳಿ ಪಿಳಿ ಕಣ್ಣ ಪೋಲಿಸರು ನೋಡುತ್ತಲೇ ನಿಂತರು ಈ ಭಕ್ತರ ಸದ್ವರ್ತನೆ !

ಈ ನಿನ್ನ ವೃಂದದ ಕೀರ್ತನೆಗೆ ; ರೋಗಿಗಳು ನರಳಿದರು ಮೃತ್ಯುವಿನ ಮಡಿಲಲ್ಲಿ,
ಬೆಂಕಿಬಿತ್ತು ಎಳೆಮಕ್ಕಳ ಕನಸಿನ ಒಡಲಲ್ಲಿ
; ನಿದ್ದೆಯೆಂಬ ದಿನದ ಮರಣವಿಲ್ಲದೆ ನಾಳಿನ ದುಡಿಮೆ ಹೇಗೆಂದು ಮೂಡಿದರೆ ಮಗೆ ಚಿಂತೆ, ನಾಡ ಮಧ್ಯೆಯೇ ಕುಣಿದಾಡಿದರು ನಿನ್ನ ಭಕ್ತರು, ಹಚ್ಚಿ ಸುಡುಗಾಡ ಚಿತೆ.
ಕೈ ಜೋಡಿಸಿ ಮೊರೆಯಿಟ್ಟೆವು,
'ಸಾಕು ನಿಲ್ಲಿಸಿರಯ್ಯ, ಇದು ಅನಾಚಾರ ;
ಮತ್ತೇ ಅದೇ ನೀಚ ತುಂಬಿದ ಅಟ್ಟಹಾಸ,
ದೊಡ್ಡೆ ಇಕ್ಕಿದರವರು ;
'ಹಿಂದು ದ್ರೋಹಿಗಳೇ ನಮ್ಮ ತಡೆದಿರಾದರೇ ಎಚ್ಚರ!'

ಅಯ್ಯಾ ಅದ್ವಾನಿ : ಅಯೋಧ್ಯೆಯ ಘಟನೆ,
ಮುಂಬಯಿಯಲ್ಲಿ ಕಿಕ್ಕಿದ ಹೆಣದ ವಾಸನೆ,
ದಣಿದ ನಮ್ಮ ಮೈನೆವರುತ್ತಿದ್ದ ನಿದ್ದೆಯ ಮೇಲೆ ನಿನ್ನ ಸೈನಿಕರು ತೋರಿದ ಅಸಹನೆ,
ಎಲ್ಲಕ್ಕೂ ಇರುವುದು ಒಂದೇ ಸಾಮಾನ್ಯ ರೂಪ-ಸೊಕ್ಕು-ಆಟಾಟೋಪ,
ಮನಸೇಚ್ಛೆ ಭಾರತ ದರ್ಶನದ ವಿರೂಪ,
ಧರ್ಮಾಂಧತೆಯ ಪಾಪ ಕೂಪ ;
ಪೋಲೀಸರು ತೋರಿದ ಅದೇ ವರ್ತನೆ-
'ಅಯ್ಯೋ ಹೋಗಲಿಬಿಡಿ ಪಾಪ'!

ಅದ್ವಾನಿ !
ನಡೆಯುತ್ತಿದ್ದೀರಿ ನೀವು ಸಕಲವನ್ನು ಮಣ್ಣಲ್ಲಿ ಹೂತು ;
ಆದರೆ ಒಂದು ಮಾತು :
"ನೀವೇರಲು ಗದ್ದುಗೆ,
ಸಂಪೂರ್ಣ ಅನೈತಿಕ ಅಮಾನವೀಯ ಸಮಾಜವೊಂದರ ಬೆಂಬಲ ನಿಮಗೆ.
ವ್ಯಕ್ತಿತ್ವಗಳ- ಗುಣಗಳ ಆಳ ಬಿಕ್ಕಟ್ಟು ತಲೆ-ದೋರಿದೆ ಈಗ,
ನಿಸ್ಸಂದೇಹವಾಗಿಯೂ ನೀವದರ ಭಾಗ.
ಆದರೆ ನೆನಪಿಡಿ, ನಾಶ ಮಾಡಿದಿರಾದರೆ ನೀವು ಈ ದೇಶ,
ಅದನ್ನು ಗುಣಪಡಿಸುವ ಶಕ್ತಿ ಇರುವುದು ನಮಗೆ ಮಾತ್ರ,
ಬೇಡ ಅನುಮಾನ ಲವಲೇಶ."

- ಫರಾಜ್

...ಯರ ಲಗ್ಗೆ

...ಸಮೇತ ಕಿತ್ತು ಹಾಕಲು ಸಂಬಂಧಪಟ್ಟ ... ಪ್ರಯತ್ನಿಸುವುದೊಂದೇ ಕೋಮು ಶಕ್ತಿ ...ಸೃಷ್ಟಿಸಿರುವ ಹೊಲಸು ಪರಿಸ್ಥಿತಿಯಿಂದ ...ರಬರಲು ಉಳಿದಿರುವ ಏಕೈಕ ಪರಿಹಾರ ...ವೆ ಎಂದು ಸೈಫುದ್ದೀನ್ ಚೌಧರಿ ಹೇಳಿ...

'ಬಾಬರ್ ಮಂದಿರವನ್ನು ನಿಜ...ಯೂ ನಾಶಮಾಡಿದನೇ ಎಂಬುದು ... ಗೊತ್ತಿಲ್ಲ. ಒಂದು ವೇಳೆ ಆತ ... ಮಾಡಿದ್ದರೆ ಆತ ಬಿ.ಜೆ.ಪಿ.ಸದಸ್ಯ...ನೇ? ನನಗೆ ಹಾಗೇ ಅನಿಸುತ್ತಿದೆ. ...ಕೆಂದರೆ ನಾಶ ಮಾಡುವ ರಾಜಕೀಯ ...ಬಿ.ಜೆ.ಪಿ.ಗೆ ನಂಬಿಕೆಯಿದೆ ಎಂದು ಹೇಳಿ...ೂ ...ೋಮುವಾದಿಗಳನ್ನು ಚೌಧರಿ ...ಸಿದರು'.

ಅಯೋಧ್ಯಾಕಾಂಡಕ್ಕೆ 1940 ಬಲಿ

ಡಿಸೆಂಬರ್ 6ರ ಅಯೋಧ್ಯಾ ಘಟನೆಗಳ ನಂತರ ದೇಶದ 16 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ವ್ಯಾಪಿಸಿದ ಕೋಮು ಗಲಭೆಗಳಲ್ಲಿ ಒಟ್ಟು 1940 ಜನ ಸತ್ತರು ಎಂದು ರಾಜ್ಯ ಸಭೆಗೆ ತಿಳಿಸಲಾಇದೆ. ಇದರಲ್ಲಿ 1277 ಮಂದಿ ದಿಲ್ಲಿ, ಗುಜರಾತ್, ಮಹಾರಾಷ್ಟ್ರದಲ್ಲೇ ಸತ್ತರು. ಮುಂಬೈಯಲ್ಲಿ ಸತ್ತವರ ಸಂಖ್ಯೆ 781. ದಿಲ್ಲಿಯಲ್ಲಿ 17. ಇದು ಸರಕಾರೀ ಅಂಕಿ-ಸಂಖ್ಯೆಗಳು. ಬಿಜೆಪಿ ದಿಲ್ಲಿ ಗದ್ದುಗೆಗೇರಲು ಕಳೆದ ಎರಡು ತಿಂಗಳಲ್ಲೇ ನೀಡಿದ ಬಲಿಯ ನಿಜವಾದ ಸಂಖ್ಯೆ ಇನ್ನೂ ಹೆಚ್ಚಿರುತ್ತದೆ ಎಂದು ಬೇರೇ ಹೇಳಬೇಕಾಗಿಲ್ಲ.

ಕೆಳಗಿನ ಚಿತ್ರ ಮುಂಬೈ ಬೀದಿಯಲ್ಲಿ ಜನವರಿ 7ರ ನಂತರದ ಹತ್ಯಾಕಾಂಡದಲ್ಲಿ ಕಂಡು ಬಂದ ಒಂದು ಹೆಣದ್ದು. ಸರಕಾರದ 1940 ಮಂದಿಯಲ್ಲಿ ಈತನ ಲೆಕ್ಕ ಇದೆಯೇ ಗೊತ್ತಿಲ್ಲ. ಏಕೆಂದರೆ ನರಸಿಂಹರಾವ್ ಸರಕಾರದ ಪ್ರಕಾರ ಈ ಹತ್ಯಾಕಾಂಡಗಳಿಗೂ ಅಯೋಧ್ಯೆಗೂ ಸಂಬಂಧವಿಲ್ಲ.



ಬೆತ್ತಲಾಗುತ್ತಿರುವ ಕಾವಿ ಮನಸ್ಸುಗಳು

ನಿನ್ನೆ ಕಾಮತ, ಇಂದು ಕಾರಂತ, ನಾಳೆ ?

ಅಡ್ವಾಣಿಯವರು ಹೇಳಿದಾಗ ಪತ್ರಕರ್ತರು "ನಿಮಗೆ ಶಹಾಬುದ್ದೀನ್, ಶಾಹೀ ಇಮಾಮ್‌ರ ಹೆಸರು ಹೇಳಲು ನಾಚಿಕೆಯಾಗಲಿಲ್ಲವಲ್ಲ ? ನೀವೇ ರಾಜಕೀಯವನ್ನೂ ಕ್ರಿಮಿನಲ್‌ಮಯಗೊಳಿಸುವುದನ್ನು ವಿರೋಧಿಸಿದರಲ್ಲ?" ಎಂದು ಪ್ರಶ್ನಿಸಿದರಂತೆ. (ದಿ ಹಿಂದೂ, ಫೆ. 22).

* * * * * * * * *

ಅಡ್ವಾಣಿಯವರ ಗೋಸುಂಬೆತನ ನಮಗೆ ಅರ್ಥವಾಗುತ್ತದೆ. ಏಕೆಂದರೆ 'ರಾಮರಥ'ದಿಂದ ಹಿಡಿದು ಫೆ. 25 ರ ರ‍್ಯಾಲಿಯವರೆಗೆ ಅವರ ಎಲ್ಲಾ ಚಟುವಟಿಕೆಗಳು 'ಕರಸೇವೆ'ಯಂತೆ ಸಾಂಕೇತಿಕ! ಈ ಸಂಕೇತವೆಂದರೆ ದಿಲ್ಲಿಯ ಗದ್ದುಗೆ. ಆದರೆ ಬಿಚ್ಚು ಮನಸ್ಸಿನವರೆಂಬ ಹೆಗ್ಗಳಿಕೆಯ ಕೆಲವು ಬುದ್ಧಿಜೀವಿಗಳ ಗೋಸುಂಬೆತನ ಮಾತ್ರ ಅರ್ಥವಾಗುವುದು ಸ್ವಲ್ಪ ಕಷ್ಟ.

* * * * * * * * *

ಬಾಬರಿ ಮಸೀದಿಯನ್ನು ನೆಲಸಮಮಾಡಿದ್ದು ಸರಿಯೇ ಎಂದು 'ಪ್ರಜಾವಾಣಿ'ಯ ಜೆ.ಪಿ. ...ರವರು ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಶಿವರಾಮ ಕಾರಂತರನ್ನು ಪ್ರಶ್ನಿಸಿದಾಗ (ಪ್ರಜಾವಾಣಿ ಫೆ. 22) ಅವರು "ಹೌದು ಸರಿ, ಬೇರೆ ದಾರಿ ಇರಲಿಲ್ಲ. ನಿಮಗೆ ತಪರಾಕಿ ಕೊಡಲು ನಮಗೆ ಶಕ್ತಿ ಇದೆ ಎಂಬುದನ್ನು ತೋರಿಸಬೇಕಾಗಿತ್ತು. ತೋರಿಸಿದರು." ಎಂದರಂತೆ ಯಾರಿಗೆ ತೋರಿಸಬೇಕಾಗಿತ್ತು ? ಯಾರು ತೋರಿಸಿದರು ? ಇದರಲ್ಲಿ 'ನಾವು' ಯಾರು? 'ನೀವು' ಯಾರು ? ಕಾರಂತರು 'ನಾವು'ನಲ್ಲಿ ಬರುತ್ತಾರೋ 'ನೀವು'ನಲ್ಲಿ ಬರುತ್ತಾರೋ?

* * * * * * * * *

'ಈಗಿನ ಪರಿಸ್ಥಿತಿಗೆ ರಾಜಕಾರಣಿಗಳೇ ಕಾರಣ' - ಹೀಗೆನ್ನಲು ಕಾರಂತರೇ ಬೇಕಿರಲಿಲ್ಲ. ತನ್ನ ಮನೆಯಲ್ಲಿ ಬೆಚ್ಚಗೆ ಕೂತು ಈ 'ರಾಜಕಾರಣಿ'ಗಳು ಸ್ವತಂತ್ರಭಾರತದಲ್ಲಿ ತನಗೆ ಒದಗಿಸಿಕೊಟ್ಟ ಸೌಲಭ್ಯಗಳನ್ನು ಸವಿಯುತ್ತಾ ಇತರರಿಗೆ ಉಪದೇಶ ನೀಡುವ ಚಾಳಿ ಹಚ್ಚಿಕೊಂಡ ಯಾವುದೇ ನಗರದ ಮಧ್ಯಮವರ್ಗದ ಸಂಕುಚಿತ ದೃಷ್ಟಿಯ ಹಿಂದೂವಿನ ಬಾಯಿಂದ ಪ್ರತಿದಿನ ಕೇಳುವ ಮಾತಿದು.

* * * * * * * * *

ಅದು ಸರಿ, ರಾಜಕಾರಣಿಗಳೆಂದರೆ ಕಾರಂತರ ದೃಷ್ಟಿಯಲ್ಲಿ ಕೇವಲ ಕಾಂಗ್ರೆಸ್ಸಿನವರು ಮಾತ್ರವೇ? 1986 ರಲ್ಲಿ 'ಶಿಲಾನ್ಯಾಸ'ಕ್ಕೆ ಅನುಮತಿ ಕೊಟ್ಟು ಅವರು ಗರಿಷ್ಟ ತಪ್ಪು ಮಾಡಿದರು ನಿಜ. ಆದರೆ ಆ 'ಗರಿಷ್ಟ ತಪ್ಪ'ನ್ನೇ ತಮ್ಮ ಮಹಾಸಾಧನೆಯನ್ನಾಗಿ ಮಾಡಿ, ಬಂಡವಾಳವನ್ನಾಗಿ ಮಾಡಿಕೊಂಡು ಅಂದಿನಿಂದ ಇಂದಿನವರೆಗೆ ರಾಜಕೀಯ ನಡಸಿ ಲೋಕಸಭೆಯಲ್ಲಿ ತಮ್ಮ 2 ಸೀಟನ್ನು 89 ಕ್ಕೆ ಏರಿಸಿದರು. ನಂತರ 130 ರವರೆಗೂ ಏರಿಸಿದವರು ಕಾರಂತರ ದೃಷ್ಟಿಯಲ್ಲಿ 'ರಾಜಕಾರಣಿ'ಗಳು ಅಲ್ಲವೇ? "ತಪರಾಕಿ ಕೊಡಲು ನಮಗೆ ಶಕ್ತಿಯಿದೆ ಎಂದು ತೋರಿಸಿಕೊಟ್ಟವರು" ಕೂಡಾ ಅದೇ ಕಾಂಗ್ರೆಸ್ ಜಾತಿಗೆ ಸೇರಿದ 'ರಾಜಕಾರಣಿಗಳು ಅಲ್ಲ ಎಂದು ಕಾರಂತರು ನಿಜವಾಗಿಯೂ ನಂಬಿದ್ದಾರೆ ನಾವು ಎಂದು ನಂಬಬೇಕೇ?

* * * * * * * * *

'ಜಾತ್ಯಾತೀತರೆಂದರೆ ಕೇವಲ ಕಾಂಗ್ರೆಸ್ಸಿನವರು, 'ಜಾತ್ಯಾತೀತತೆ' ಯ ಹೆಸರಲ್ಲಿ ಕಾಂಗ್ರೆಸ್‌ನ ಗೋಸುಂಬೆ ವರ್ತನೆ ಮಾತ್ರವೇ ಜಾತ್ಯಾತೀತತೆ ಎಂದು ಬೇಕೆಂದೇ ಅರ್ಥಗೆಡಿಸುವ ಕಾವೀ ಜನಗಳ ಮಾತನ್ನು ಕಾರಂತರೂ ನಿಜವಾಗಿಯೂ ನಂಬಿದ್ದಾರೆಯೇ'.

* * * * * * * * *

'ಇಂಡಿಯಾ ಟುಡೇ' ಪತ್ರಿಕೆ ಕಾಶ್ಮೀರದ ದೇವಸ್ಥಾನಗಳ ಬಗ್ಗೆ ರಾಜಕಾರಣಿ ಅಡ್ವಾಣಿಯವರನ್ನು ಕೇಳಿದಾಗ "ಈ ಸಂಭಾಷಣೆ ಮುಂದುವರಿಸಲು ನನಗೆ ಸಾಧ್ಯವಿಲ್ಲ" ಎಂದ ಧಾಟಿಯಲ್ಲೇ ಲೇಖಕ ಕಾರಂತರು "ಮೂರೇ ಇರಲಿ, ನಾಲ್ಕೇ ಇರಲಿ ಹಿಂದೂ ದೇವಾಲಯಗಳನ್ನು ಅಲ್ಲಿ ನಾಶ ಮಾಡಿದ್ದಾರೆ. ಮಹಿಳೆಯರನ್ನು ಹಿಂಸಿಸಿದ್ದಾರೆ. ಸಿಂಧ್‌ನಲ್ಲಿ, ಕರಾಚಿಯಲ್ಲಿ, ಪೂರ್ವ ಬಂಗಾಳದಲ್ಲಿ ನಡೆದದ್ದೇನು?. ...." ಇತ್ಯಾದಿ ಇತ್ಯಾದಿ ಹೇಳಿದರೆಂದು ಓದುವಾಗ ಕಾರಂತರ ಹಲವು ಅಭಿಪ್ರಾಯಗಳನ್ನು ಒಪ್ಪದಿದ್ದರೂ ಅವರ ಬೌದ್ಧಿಕತೆಯ ಬಗ್ಗೆ ಇದುವರೆಗೆ ಗೌರವವಿದ್ದವರಿಗೂ ದಿಗಿಲೆನಿಸಿದೆ, ಸಂಶಯ ಮೂಡಿದೆ . ಯಾವ ಮನಸ್ಸಿನ ಎಂತಹ ಮುಖವಿದು? ಎಂದು.

* * * * * * * * *

'ಬಾಬ್ರಿ ಮಸೀದಿಯ ನಾಶ ನಮ್ಮೆಲ್ಲರಿಗೂ ನಾಚಿಕೆಗೇಡಿನ ವಿಷಯ' ಎಂದು ಹೇಳಿದರೂ ಇದನ್ನು ಬಹುಪಾಲು ಹಿಂದೂಗಳು ಖಂಡಿಸಿದ್ದರಿಂದ ಮುಸ್ಲಿಮರು ದೊಡ್ಡ ಮನಸ್ಸು ಮಾಡಿ ವಿವಾದಗ್ರಸ್ತ ಸ್ಥಳದಲ್ಲಿ ರಾಮ ದೇವಸ್ಥಾನ ಕಟ್ಟಲು ಬಿಡಬೇಕು ಎನ್ನುವ ಮಮ್ತಾಝ್ ಅಲೀ ಖಾನ್(ಟೈಮ್ಸ್ ಆಫ್ ಇಂಡಿಯಾ, ಫೆ. 5) ರವರೂ 'ನಾನು ಕಂಡದ್ದನ್ನಷ್ಟೇ ನಂಬುವವ, ದೇವರು ನಿಮಗೆ ಕಂಡಿದ್ದರೆ ನನಗೆ ಹೇಳಿ' ಎಂದು ಒಂದೆಡೆ ಹೇಳುತ್ತಾ ಇನ್ನೊಂದೆಡೆ 'ತಪರಾಕಿ ಕೊಡಲು ಶಕ್ತಿಯಿದೆ ಎಂದು ತೋರಿಸಿದರು' ಎನ್ನುವ ಶಿವರಾಮಕಾರಂತರೂ ಬಿಜೆಪಿಯ 'ಮಂದಿರ ಅಲ್ಲೇ ಕಟ್ಟುವೆವು' ಎಂಬ ಪ್ರತಿಜ್ಞೆಗೆ ಸಹಿ ಹಾಕಿದ್ದಾರೆ ಎಂದು ರಾಜ್ಯದ ಬಿ.ಜೆ.ಪಿ. ಮುಖಂಡರ ಹೆಗ್ಗಳಿಕೆ.

* * * * * * * * *

ಪರಸ್ಪರ ಏಕದಂ ವಿರುದ್ಧವಾದ ಕಾರಣಗಳಿಗಾಗಿ ಇಬ್ಬರು ಬೌದ್ಧಿಕರು ಒಂದೇ ಪ್ರತಿಜ್ಞೆಗೆ ಸಹಿ ಹಾಕಿದ್ದಾರಂತೆ! ಇದುವರೆಗೆ ನಮ್ಮ ದೇಶದ ಈಗಿನ ದುಸ್ಥಿತಿಗೆ ಸ್ವಾರ್ಥಿ ರಾಜಕಾರಣಿಗಳೇ ಏಕೈಕ ಕಾರಣವೆಂದು ನಂಬಿದ್ದವರಿಗೂ, ಇಂತಹ "ಹಿರಿಯ" ಬೌದ್ಧಿಕರಿರುವ ಸಮಾಜದಲ್ಲಿ ಇಂತಹ 'ಸ್ವಾರ್ಥಿ' ರಾಜಕಾರಣಿಗಳಿದ್ದರೆ ಆಶ್ಚರ್ಯವೇನು ಎಂದನಿಸುವಂತಾಗಿದೆ.

ಕೆ.ವಿ.



ಈ ಸದವಕಾಶ ಕಳೆದುಕೊಳ್ಳಬಾರದು

- ಸುರ್ಜಿತ್

ಇತ್ತೀಚೆಗೆ ಪಂಜಾಬಿನಲ್ಲಿ ನಡೆದ ಪಂಚಾಯತ್ ಚುನಾವಣೆಗಳಲ್ಲಿ ಆಯ್ಕೆಯಾದ ಪಂಚರು ಮತ್ತು ಸರಪಂಚರ ರಾಜ್ಯ ಮಟ್ಟದ ಸಮಾವೇಶವೊಂದು ಫೆಬ್ರವರಿ 11 ರಂದು ಜಲಂಧರ್‌ನಲ್ಲಿ ನಡೆಯಿತು. ಚುನಾವಣೆಗಳಲ್ಲಿ ಜನರು ಭಾರೀ ಪ್ರಮಾಣದಲ್ಲಿ ಪಾಲ್ಗೊಂಡ ಬಗ್ಗೆ ಸಮಾವೇಶ ತೃಪ್ತಿ ವ್ಯಕ್ತಪಡಿಸಿತು. ಪ್ರತ್ಯೇಕವಾದಿ ಉಗ್ರಗಾಮಿಗಳನ್ನು ತಿರಸ್ಕರಿಸಿರುವ ಜನರು ಶಾಂತಿ, ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಏಕತೆಗಾಗಿ ಕಟಿಬದ್ಧರಾಗಿರುವುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಅದು ಅಭಿಪ್ರಾಯಪಟ್ಟಿತು.

ಜನರ ಈ ನಿರ್ಧಾರದಿಂದಲೇ ಪಂಚಾಯತ್‌ಗಳಲ್ಲಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಪ್ರಾತಿನಿಧ್ಯ ಭಾರಿ ಪ್ರಮಾಣದಲ್ಲಿ ಹೆಚ್ಚಿತು ಎನ್ನುವುದು ವಾಸ್ತವಿಕ ಅಂಶವಾಗಿದೆ.

2000 ಕ್ಕೂ ಹೆಚ್ಚು ಚುನಾಯಿತ ಪಂಚರು ಮತ್ತು ಸರಪಂಚರು ಸಮಾವೇಶದಲ್ಲಿ ಭಾಗವಹಿಸಿದ್ದರು. ದೀರ್ಘಕಾಲ ಇತ್ಯರ್ಥವಾಗದೆ ಉಳಿದಿರುವ ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರವನ್ನು ಕಂಡುಕೊಳ್ಳಲು ಇದು ತುಂಬಾ ಪಕ್ವವಾದ ಕಾಲವಾಗಿದೆ ಎಂದು ಸಮಾವೇಶದಲ್ಲಿ ಮಾತನಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್ ಅಭಿಪ್ರಾಯಪಟ್ಟರು. ಕೇಂದ್ರ ಸರಕಾರ ಈ ಅವಕಾಶವನ್ನು ಕಳೆದುಕೊಳ್ಳಬಾರದು ಎಂದು ಹೇಳಿದರು.

ಪಶ್ಚಿಮಬಂಗಾಳದ ಎಡರಂಗ ಸರಕಾರದ ಪಂಚಾಯತ್ ಖಾತೆ ಸಚಿವ ಸೂರ್ಯಕಾಂತ್ ಮಿಶ್ರಾ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ತಮ್ಮ ರಾಜ್ಯದ ಗ್ರಾಮೀಣ ಜನ ಜೀವನವನ್ನೇ ಬದಲಾಯಿಸುವಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ವಹಿಸಿದ ಪಾತ್ರದ ಬಗ್ಗೆ ಅವರು ದೀರ್ಘ ವಿವರಣೆ ನೀಡಿದರು.

ಕಾಂಗ್ರೈ ತಂತ್ರ ಖಂಡನೆ

ಪಂಚಾಯತ್‌ಗಳ ಮೇಲೆ ಹಿಡಿತ ಸಾಧಿಸಲು ಪಂಜಾಬ್ ಕಾಂಗ್ರೆಸ್ (ಐ) ಪಕ್ಷದ ಅನುಸರಿಸಿದ ಮೋಸದ ತಂತ್ರಗಳನ್ನು ಮತ್ತು ಸರಕಾರಿ ಅಧಿಕಾರದ ದುರುಪಯೋಗ ನಡೆದ್ದನ್ನು ಸಮಾವೇಶ ಬಲವಾಗಿ ಖಂಡಿಸಿತು.

ಸುಧಾಕರ ರಾವ್ ನಾಯಕ್ ರಾಜೀನಾಮೆ

ಮಹಾರಾಷ್ಟ್ರ ಕಾಂಗ್ರೆಸ್ (ಐ) ನಲ್ಲಿನ ಭಿನ್ನಮತದ ಪ್ರಕರಣ ಸದ್ಯಕ್ಕೆ ಅಂತ್ಯವಾಗಿದೆ. ಮುಖ್ಯಮಂತ್ರಿ ಸುಧಾಕರ ರಾವ್ ನಾಯಕರ ರಾಜೀನಾಮೆ ನೀಡಿದ್ದಾರೆ. ಫೆಬ್ರವರಿ 22 ರಂದು ಅವರು ಪ್ರಧಾನಿಯವರಿಗೆ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದರು.

ನಾಯಕ್‌ರನ್ನು ಬದಲಾಯಿಸುವಂತೆ ರಕ್ಷಣಾ ಸಚಿವ ಶರದ್ ಪವಾರ್ ಬೆಂಬಲಿಗರ ಬಣ ಬಹಳ ದಿನಗಳಿಂದ ಒತ್ತಾಯಪಡಿಸುತ್ತಾ ಪಟ್ಟು ಹಿಡಿದಿತ್ತು. ಆದರೆ ತಾನು ಪದತ್ಯಾಗ ಮಾಡುವ ಪ್ರಶ್ನೆಯೇ ಇಲ್ಲ ಎಂದಿದ್ದ ನಾಯಕ್ ಭಿನ್ನಮತೀಯ ಬಣದ ಹಲವು ಸಚಿವರನ್ನು ವಜಾಗೊಳಿಸಿದ್ದರಿಂದ ಪರಿಸ್ಥಿತಿ ಬಿಗಡಾಯಿಸಿತ್ತು. ಈ ಮಧ್ಯೆ 'ಪಕ್ಷವಿರೋಧಿ ಚಟುವಟಿಕೆ'ಗಳಿಗಾಗಿ ಪವಾರನ್ನು ಕಾಂಗ್ರೆಸ್(ಐ) ಪಕ್ಷದಿಂದಲೇ ವಜಾ ಮಾಡಬೇಕು ಎಂದು ಅವರು ಒತ್ತಾಯಿಸಿದ್ದು ಪರಿಸ್ಥಿತಿ ವಿಕೋಪಕ್ಕೆ ಹೋಗಲು ಕಾರಣವಾಗಿತ್ತು. ನಾಯಕರ ದೇಡಿಕೆಗೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಆ ಹೇಳಿಕೆಯೇ ಅವರಿಗೆ ಮುಳುವಾದಂತಾಯಿತು. ಸುಮಾರು ಒಂದು ತಿಂಗಳಿಂದ ಮಹಾರಾಷ್ಟ್ರದಲ್ಲಿ ಉಂಟಾಗಿದ್ದ ರಾಜಕೀಯ ಬಿಕ್ಕಟ್ಟಿಗೆ ನಾಯಕ್ ರಾಜೀನಾಮೆಯಿಂದ ತೆರೆಬಿದ್ದಂತಾಗಿದೆ.

ಇದು ನಾಯಕರ ಮುಖ್ಯಮಂತ್ರಿತ್ವದ ಅಂತ್ಯ. ಅದರ ಜತೆಗೆ ಮುಂದೆ ಬರಲಿರುವ ಮುಖ್ಯಮಂತ್ರಿಯ ಪತನದ ಆರಂಭವೂ ಇಲ್ಲಿ ಅಡಕವಾಗಿದೆ ಯಾಕೆಂದರೆ ಇದು ಕಾಂಗ್ರೆಸ್(ಐ) ಸಂಸ್ಕೃತಿ. ಅಂಗಿ ಕಳಚಿದಷ್ಟು ಸಲೀಸು ಮುಖ್ಯಮಂತ್ರಿಗಳ ಬದಲಾವಣೆ ಇಲ್ಲಿ!

ನಕ್ಸಲೀಯರಿಂದ ಶಾಸಕನ ಬಿಡುಗಡೆ

ತಮ್ಮ ವಶದಲ್ಲಿದ್ದ ಕಾಂಗ್ರೆಸ್ (ಐ) ಶಾಸಕ ಪಿ. ಬಾಲರಾಜು ಮತ್ತು ಒಬ್ಬ ಅಧಿಕಾರಿಯನ್ನು ನಕ್ಸಲೀಯರು ಕೊನೆಗೂ ಫೆಬ್ರವರಿ 21 ರಂದು ಬಿಡುಗಡೆ ಮಾಡಿದರು. ಇದರಿಂದ 22 ದಿನಗಳ ಅಪಹರಣ ಪ್ರಕರಣ ಕೊನೆಗೊಂಡಿದೆ. ಜನವರಿ 31 ರಂದು ಶಾಸಕನ ಸಹಿತ ಒಂಬತ್ತು ಜನರನ್ನು ಪೀಪಲ್ಸ್ ವಾರ್ ಗ್ರೂಪ್ (ಪಿ.ಡಬ್ಲ್ಯುಜಿ.) ನ ನಕ್ಸಲೀಯರು ಅಪಹರಿಸಿದ್ದರು. ಅನಂತರ ಎರಡು ಕಂತುಗಳಲ್ಲಿ ಕೆಲವರನ್ನು ಬಿಟ್ಟು ಈ ಇಬ್ಬರನ್ನು ಮಾತ್ರ ತಮ್ಮ ವಶದಲ್ಲಿರಿಕೊಂಡಿದ್ದರು.

ತಮ್ಮ ನಾಯಕ ಕ್ರಾಂತಿ ರಣದಿವೆ ಮತ್ತಿತರನ್ನು ಬಿಡುಗಡೆ ಮಾಡಬೇಕೆಂಬುದು ಪಿ.ಡಬ್ಲ್ಯುಜಿ.ಯ ಮುಖ್ಯ ಬೇಡಿಕೆಯಾಗಿತ್ತು. ಬಹಳ ದೀರ್ಘ ಸಂಧಾನದ ನಂತರ ರಣದಿವೆಯವರನ್ನು ವಿಶಾಖಪಟ್ಟಣದ ಸೆರೆಮನೆಗೆ ಸ್ಥಳಾಂತರಿಸಲಾಗಿತ್ತು. ಆತನ ವಿರುದ್ಧ ಆಂಧ್ರ ಪ್ರದೇಶದಲ್ಲಿರುವ ಎಲ್ಲಾ ಮೊಕದ್ದಮೆಗಳಲ್ಲಿ ಜಾಮೀನು ನೀಡಲಾಗಿದ್ದು. ಮಹಾರಾಷ್ಟ್ರದ ಒಂದು ನ್ಯಾಯಾಲಯದಲ್ಲಿ ಮಾತ್ರ ಒಂದು 'ಟಾಡಾ' ಮೊಕದ್ದಮೆ ಬಾಕಿಯಿದೆ. ಅಲ್ಲಿಯೂ ಜಾಮೀನು ದೊರೆತಮೇಲೆ ಆತನನ್ನು ಬಿಡುಗಡೆ ಮಾಡುವ ನಿರೀಕ್ಷೆಯಿದೆ.

ತಮ್ಮ ದೇಡಿಕೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಸರಕಾರದ ಮೇಲೆ ಒತ್ತಡ ಹೇರುವ ಸಲುವಾಗಿ ನಕ್ಸಲೀಯರು ಆಂಧ್ರಪ್ರದೇಶದಲ್ಲಿ 1984 ರಿಂದಲೂ ಆಗಾಗ ಪ್ರಮುಖ ವ್ಯಕ್ತಿಗಳ ಅಪಹರಣ ನಡೆಸುತ್ತಿದ್ದಾರೆ.

ನಕ್ಸಲೀಯರಿಂದ ತಮ್ಮ ಬಿಡುಗಡೆಗೆ ರಾಜ್ಯ ಸರಕಾರ ಹೆಚ್ಚು ಆಸಕ್ತಿ ತೋರಿಸಲಿಲ್ಲ ಎಂದು ಬಾಲರಾಜು ಅತೃಪ್ತಿ ವ್ಯಕ್ತಪಡಿಸಿದ್ದು ಶಾಸಕತ್ವಕ್ಕೆ ರಾಜೀನಾಮೆ ನೀಡುವ ಸಂಭವವಿದೆ.

ಆಂಧ್ರಪ್ರದೇಶದಲ್ಲಿ ಅಬಕಾರಿ ಹಗರಣ

ಆಂಧ್ರಪ್ರದೇಶದಲ್ಲಿ ಸಾರಾಯಿ ಹಗರಣವೊಂದು ತಲೆಯೆತ್ತಿ ಭಾರೀ ಕೋಲಾಹಲ ಎಬ್ಬಿಸಿದೆ. ರಾಜ್ಯ ವಿಧಾನಸಭೆಯಲ್ಲಿ ಅದು ದೊಡ್ಡ ರೀತಿಯಲ್ಲಿ ಪ್ರತಿಧ್ವನಿಸಿದೆ. ಹನ್ನೆರಡು ಮಧ್ಯ ಕಾರ್ಖಾನೆಗಳು (ಬ್ರೂಯರಿ) ಮತ್ತು ಹನ್ನೆರಡು ಡಿಸ್ಟಿಲರಿ ಘಟಕಗಳಿಗೆ ನೀಡಿದ ಆರ್ಡರ್‌ಗಳನ್ನು ರದ್ದುಗೊಳಿಸಿದ ವಿಚಾರ ಕೋಲಾಹಲಕ್ಕೆ ಕಾರಣವಾಯಿತು. ಸರಕಾರೀ ಆರ್ಡರ್ ರದ್ದತಿಯಂಥ ನೀತಿ ನಿರ್ಣಯವೊಂದನ್ನು ಸದನ ಸಮಾವೇಶದಲ್ಲಿರುವಾಗಲೇ ಹೊರಗೆ ಪ್ರಕಟಿಸುವುದು ಸರಿಯೇ ಎಂದು ಪ್ರಮುಖ ವಿರೋಧ ಪಕ್ಷವಾದ ತೆಲುಗು ದೇಶಂ ನಾಯಕ ಎನ್.ಟಿ. ರಾಮರಾವ್ ಸರಕಾರದಿಂದಲೇ ಸ್ಪಷ್ಟೀಕರಣ ಬಯಸಿದರು. ಆಗ ಸದನದಲ್ಲಿ ಗದ್ದಲ ಆರಂಭವಾಯಿತು. ಫೆಬ್ರವರಿ 16 ರಂದು ಈ ಘಟನೆ ನಡೆಯಿತು. ಫೆ. 15 ರಂದು ಪ್ರಸ್ತಾವವಾದಗಲೂ ಗದ್ದಲವಾಗಿತ್ತು.

ಆಳುವ ಕಾಂಗ್ರೆ ಮತ್ತು ತೆಲುಗುದೇಶಂ ಸದಸ್ಯರು ಹೊಡೆದಾಡುವಷ್ಟರ ಮಟ್ಟಿಗೆ ಪರಿಸ್ಥಿತಿ ಬಿಗಡಾಯಿಸಿತ್ತು. ಅಬಕಾರಿ ಸಚಿವ ಕೆ. ಬಾಪಿರಾಜು ರಾಜೀನಾಮೆ ನೀಡಬೇಕೆಂದು ದೇಶಂ ಸದಸ್ಯರು ಪಟ್ಟು ಹಿಡಿದರು. ಆಗ ಅವರ ಪೈಕಿ 47 ಸದಸ್ಯರನ್ನು ಒಂದು ವಾರದ ಅವಧಿಗೆ ಸ್ಪೀಕರ್ ಅಮಾನತು ಮಾಡಿದರು. ಅನಂತರ ಮರುದಿನ ಇದೇ ಕಾರಣಕ್ಕಾಗಿ ಇನ್ನೂ 10 ಮಂದಿ ದೇಶಂ ಸದಸ್ಯರು ಅಮಾನತುಗೊಂಡರು.

ಸಿಪಿಐ, ಸಿಪಿಐ(ಎಂ), ಮತ್ತು ಜನತಾದಳ ಸದಸ್ಯರು ದೇಶಂ ಸದಸ್ಯರಿಗೆ ಬೆಂಬಲ ವ್ಯಕ್ತಪಡಿಸಿ ಸಭಾ ತ್ಯಾಗ ಮಾಡಿದರು. ತಮ್ಮ ಸಹೋದ್ಯೋಗಿಗಳ ಅಮಾನತು ಅವಧಿಯಲ್ಲಿ ತಾನೂ ಹಾಗೂ ದೇಶಂ ಉಳಿದ ಸದಸ್ಯರು ಕಲಾಪಗಳನ್ನು ಬಹಿಷ್ಕರಿಸುವುದಾಗಿ ರಾಮರಾವ್ ಹೇಳಿದ್ದರು.

ನಡೆದಿದೆ ಇಲ್ಲಿ ನಿಲ್ಲದ ಸಮರ

...... ಪುಟ 3ರಿಂದ

ನನ್ನ ಕೊನೆಯ ರಕ್ತದ ತೊಟ್ಟು ತೊಟ್ಟುವವರೆಗೂ ಹೋರಾಡುತ್ತೇನೆ ಎಂದು ಪ್ರತಿಜ್ಞೆಗೈದರು. ಬಿಜೆಪಿ ಮುಖಂಡತ್ವದ ಕೋಮುವಾದಿ ಶಕ್ತಿಗಳ ವಿಷಯದಲ್ಲಿ ನಿರಾಸಕ್ತರಾಗಿರುವ ಪಿ.ವಿ.ನರಸಿಂಹರಾವ್‌ರನ್ನು ಲಲ್ಲೂ ಪ್ರಸಾದ್ ಯಾದವ್ ತೀವ್ರವಾಗಿ ಖಂಡಿಸಿದರು. ದೇಶದ ಕೊನೆಯ ಕಾಂಗ್ರೆಸ್ ಪ್ರಧಾನಿ ನರಸಿಂಹರಾವ್ ಅವರೇ ಎಂದು ಅಣಕವಾಡಿದರು. ಭಾರತದ ಜನತೆ ಅವರನ್ನು ಎಂದೂ ಕ್ಷಮಿಸಲಾರರು ಎಂದರು. ನಿರುದ್ಯೋಗ, ಬಡತನ, ಹಣದುಬ್ಬರ ಮುಂತಾದ ತೀವ್ರತರ ಸಮಸ್ಯೆಗಳನ್ನು ಎದುರಿಸುತ್ತಿರುವಾಗ ಅಯೋಧ್ಯೆಯೆಡೆಗೆ ಗಮನ ಸೆಳೆಯುವ ರೀತಿ ಎಲ್ಲಾ ರಾಜಕೀಯ ಪಕ್ಷಗಳು ನಿರ್ಬಂದಕ್ಕೊಳಗಾಗಿರುವುದು ಒಂದು ಅವಮಾನ ಎಂದು ವಿಷಾದಿಸಿದರು. ಕೋಮುವಾದದ ಅಪಾಯದ ವಿರುದ್ಧ ಕೇಂದ್ರದ ಕಾಂಗ್ರೆ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಹೋರಾಡಲು ಪ್ರಯತ್ನಿಸುವುದು ಅಗತ್ಯವೆಂದು ಲಲ್ಲೂ ಹೇಳಿದರು.

ಸಿಪಿಐನ ಕೇಂದ್ರ ಕಾರ್ಯದರ್ಶಿಗಳಲ್ಲೊಬ್ಬರಾದ ಎ.ಬಿ. ಬರ್ದನ್‌ರವರೂ ಸೇರಿದಂತೆ ಹತ್ತಾರು ಎರಡ ಪಕ್ಷಗಳ ಮುಖಂಡರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಈ ಸಭೆಗೆ ಎಡರಂಗದ ಅಧ್ಯಕ್ಷರಾದ ಶೈಲೇನ್ ದಾಸ್ ಗುಪ್ತಾ ಅಧ್ಯಕ್ಷತೆ ವಹಿಸಿದ್ದರು.

ಲಕ್ಷಗಟ್ಟಲೆ ಸೇರಿದ್ದ ಜನರ ಈ ಬೃಹತ್ ಬಹಿರಂಗ ಸಭೆಯು ಎರಡು ನಿರ್ಣಯಗಳನ್ನು ಅಂಗೀಕರಿಸಿತು.

ಕೋಮುವಾದದ ವಿರುದ್ಧ ಹಾಗೂ ಕೇಂದ್ರ ಸರಕಾರದ ಕಲ್ಲಿದ್ದಲು, ಸಕ್ಕರೆ ಬೆಲೆಯೇರಿಸಿರುವುದರ ಜೊತೆಗೆ ಅಡುಗೆ ಅನಿಲ, ಸೀಮೆ ಎಣ್ಣೆ ಆಮದು ಮಾಡಿಕೊಳ್ಳಲು ಖಾಸಗಿಯವರಿಗೆ ನೀಡುವ ತೀರ್ಮಾನವನ್ನು ಖಂಡಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಅರಣ್ಯ ನೌಕರರ ಬೃಹತ್ ಮೆರವಣಿಗೆ

ತೀರ್ಥಹಳ್ಳಿ: ದಿನಾಂಕ 15-2-93ರಂದು ತೀರ್ಥಹಳ್ಳಿಯಲ್ಲಿ ಎಂಪಿಎಂ ಅರಣ್ಯ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಬೃಹತ್ ಮೆರವಣಿಗೆ ನಡೆಸಿದರು.

ತೀರ್ಥಹಳ್ಳಿ ಸೀಬನಕೆರೆ ವೃತ್ತದಿಂದ ಮೆರವಣಿಗೆ ಹೊರಟು ಟೌನಿನ ಪ್ರಮುಖ ರಸ್ತೆಗಳಲ್ಲಿ ಸಾಗಿತ್ತು. ಎಂಪಿಎಂ ಆಡಳಿತ ಮಂಡಳಿಯ ಮಿಣಮೇಷದ ವಿರುದ್ಧ ಘೋಷಣೆ ಕೂಗುತ್ತಿದ್ದರಲ್ಲದೆ ಕೋಮು ಸೌಹಾರ್ದತೆಗಾಗಿ ಘೋಷಣೆ ಕೂಗಲಾಗುತ್ತಿತ್ತು. ಕಾರ್ಯಕರ್ತರು ನೂರಾರು ಕೆಂಬಾವುಟಗಳನ್ನು ಹಿಡಿದಿದ್ದರು. ಸುಮಾರು 5000ಕ್ಕೂ ಹೆಚ್ಚು ಕಾರ್ಮಿಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ನಂತರ ಎಂಪಿಎಂ ಕಛೇರಿಯಲ್ಲಿ ಮನವಿ ಸಲ್ಲಿಸಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯಲ್ಲಿ ಮುಖಂಡರುಗಳಾದ ಕೆ.ಎಂ.ಶ್ರೀನಿವಾಸ್, ರಾಘವೇಂದ್ರರಾವ್, ಗಿರಿಯಪ್ಪ, ದುಗ್ಗಪ್ಪ ಮುಂತಾದವರು ಮಾತನಾಡಿದರು.

ದಿನಾಂಕ 16-2-93ರಂದು ಸಾಗರದಲ್ಲಿ ಕಾರ್ಮಿಕರು ಬೃಹತ್ ಮೆರವಣಿಗೆಯನ್ನು ನಡೆಸಿದರು. ಸಾಗರದ ಬಸ್‌ಸ್ಟಾಂಡಿನಲ್ಲಿ ಮತ್ತು ಎಂಪಿಎಂ ಕಛೇರಿಯ ಮುಂದೆ ಬಹಿರಂಗ ಸಭೆಗಳನ್ನು ನಡೆಸಲಾಯಿತು. ಈ ಸಭೆಗಳಲ್ಲಿ ಕೆ.ಎಂ.ಶ್ರೀನಿವಾಸ್, ಎಸ್. ಬಿ. ಶಿವಶಂಕರ್, ಗಿರಿಯಪ್ಪ, ರಾಘು, ದುಗ್ಗಪ್ಪ, ಗಜೇಂದ್ರ ಮುಂತಾದವರು ಮಾತನಾಡಿದರು. ನಂತರ ಪ್ರವಾಸಿ ಬಂಗಲೆ ಬಳಿ ಸೇರಿದ ಕಾರ್ಮಿಕರು, ಕೋಮು ಸೌಹಾರ್ದತೆಗಾಗಿ ಪ್ರತಿಜ್ಞೆ ಸ್ವೀಕರಿಸಿದರು.

ಪಡುಕೋಣೆ ಡಿವೈಎಫ್ಐ ವಾರ್ಷಿಕೋತ್ಸವ

ಪಡುಕೋಣೆ(ಕುಂದಾಪುರ) : ಭ್ರಷ್ಟಾಚಾರ, ಅನ್ಯಾಯ, ಮೋಸ, ಸುಲಿಗೆ ಮುಂತಾದವುಗಳಿಂದ ಕೂಡಿದ ಸಮಾಜ, ಇದರಿಂದ ದೇಶವು ಹಾಳಾಗುತ್ತಿರುವುದೇ ಸಾಲದೇ ಇತ್ತೀಚೆಗೆ ದೇವರು ಧರ್ಮದ ಹೆಸರಿನಲ್ಲಿ ಜನರನ್ನು ಬೇರ್ಪಡಿಸಿ ದೇಶವನ್ನು ಕೋಮುವಾದಿಗಳು ಒಡೆಯುತ್ತಿದ್ದಾರೆ. ಅಲ್ಲದೆ ಸರಕಾರ ಯುವಜನರಿಗೆ ಸರಿಯಾದ ಉದ್ಯೋಗ ನೀಡದೆ ಯುವಜನರರನ್ನು ಹಾದಿ ತಪ್ಪಿಸುತ್ತಿದ್ದಾರೆ. ಖಾಲಿ ಹುದ್ದೆಗಳ ಭರ್ತಿ ಮಾಡದೆ, ಘೋಷಿತ ಕೈಗಾರಿಕಾ ಯೋಜನೆಗಳ ಜಾರಿ ಮಾಡದೆ ಹೆಚ್ಚು ಹೆಚ್ಚು ನಿರುದ್ಯೋಗಗಳನ್ನು ಸೃಷ್ಟಿ ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಸುಂದರವಾದ ಭಾರತದ ಉಜ್ವಲ ಭವಿಷ್ಯಕ್ಕಾಗಿ ಜಾತಿ, ಮತ, ಧರ್ಮ ಬಿಟ್ಟು ಒಂದಾಗಿ ಹೋರಾಟ ಮಾಡಬೇಕೆಂದು ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ಕರೆ ನೀಡಿದರು. ಅವರು ಇತ್ತೀಚೆಗೆ ಡಿವೈಎಫ್ಐ ನಾಡ ಪಡುಕೋಣೆ ಇವರ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ನಾಡ ಮಂಡಲದ ಮಾಜಿ ಪ್ರಧಾನರಾದ ಬಿ. ಅರುಣಕುಮಾರ ಶೆಟ್ಟಿ ಮಾತನಾಡಿ ದೇಶಕ್ಕೆ ಅಪಾಯ ಬಂದಂತಹ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೋಮುವಾದಿಗಳ ಆಟ ನಡೆಯದಂತೆ ನಾವೆಲ್ಲಾ ಎಚ್ಚರ ವಹಿಸಿ ದೇಶವನ್ನು ಅಭಿವೃದ್ಧಿ ಪಥದತ್ತ ಚಲಿಸುವಂತೆ ಒಂದಾಗೋಣ ಎಂದರು.

ಅತಿಥಿಗಳಾಗಿ ತಾಲೂಕು ಡಿವೈಎಫ್ಐ ಕಾರ್ಯದರ್ಶಿ ಎಚ್.ನರಸಿಂಹ, ಕೆ.ಶಂಕರ, ದ.ಕ. ಜಿ.ಪ. ಮಾ. ಹಿ.ಪ್ರಾ. ಶಾಲೆ ಮುಖ್ಯೋಪಾಧ್ಯಾಯರಾದ ರಾಮಯ್ಯ ಹೆಬ್ಬಾರ, ವಾರ್ಷಿಕೋತ್ಸವದ ಧ್ವಜಾರೋಹಣ ಮಾಡಿದ ನಾರಾಯಣ ಗಾಣಿಗ ಉಪಸ್ಥಿತರಿದ್ದರು. ಬಹುಮಾನ ವಿತರಣೆಯನ್ನು ಸಿ.ಮಂಜುನಾಥ ಹೆಬ್ಬಾರ ನೆರವೇರಿಸಿದರು. ಘಟಕದ ಅಧ್ಯಕ್ಷ ರಾಜೀವ ಪಡುಕೋಣೆ ಪ್ರಸ್ತಾವಿಕ ಭಾಷಣ ಮಾಡಿ ಘಟಕದ ಕಾರ್ಯ ಚಟುವಟಿಕೆ ವರದಿ ಮತ್ತು ಮುಂದಿನ ಗುರಿಗಳನ್ನು ತಿಳಿಸಿದರು. ಉತ್ಸವ ಸಮಿತಿಯ ಅಧ್ಯಕ್ಷ ಮಹಾಬಲ ಕರೆಮನೆ ಸ್ವಾಗತಿಸಿದರು. ಸುಬ್ರಹ್ಮಣ್ಯ ಪಡುಕೋಣೆ ಕಾರ್ಯಕ್ರಮ ನಿರೂಪಿಸಿ ಸುಶೀಲಾ ಎಂ. ಧನ್ಯವಾದ ಅರ್ಪಿಸಿದರು.

ಡಿವೈಎಫ್ಐ ತೊಕ್ಕೊಟು ವಲಯ ಸಮ್ಮೇಳನ

ಮಂಗಳೂರು : ಭಾರತದಲ್ಲಿ ಆಳುವ ವರ್ಗವು ನಿರ್ಲಕ್ಷಿಸುತ್ತಾ ಬಂದಿರುವ ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿಯಲು ಯುವಜನರು ಮುಂದಾಗಬೇಕೆಂದು ಯುವಜನ ನೇತಾರ ಉಮೇಶ್ ಭಂಡಾರಿ ಕರೆ ನೀಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕೋಮುವಾದಿಗಳು ಧರ್ಮದ ನೆಲೆಯಲ್ಲಿ ಜನರನ್ನು ವಿಭಜಿಸಲು ನಡೆಸುತ್ತಿರುವ ಕುತಂತ್ರವನ್ನು ವಿಫಲಗೊಳಿಸಲು ಜನತೆಗೆ ನಮ್ಮ ಸಂವಿಧಾನ, ಜಾತ್ಯಾತೀತತೆ, ಕೋಮು ಸೌಹಾರ್ದತೆಯ ಕುರಿತು ಹೆಚ್ಚಿನ ತಿಳುವಳಿಕೆ ಮೂಡಿಸಬೇಕಾಗಿದೆ ಎಂದು ಹೇಳಿದರು.

ಅವರು ಫೆಬ್ರವರಿ 14ರಂದು ತೊಕ್ಕೊಟಿನಲ್ಲಿ ನಡೆದ ಡಿವೈಎಫ್ಐನ ಉಳ್ಳಾಲ ವಲಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಭೆಯ ಕಾರ್ಯಕಲಾಪಗಳನ್ನು ಕೃಷ್ಣಪ್ಪ ಸಾಲಿಯಾನ್, ಸುಕುಮಾರ್ ಮತ್ತು ವಿಶ್ವನಾಥ್‌ರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ನಿರ್ವಹಿಸಿತು. ಸಮ್ಮೇಳನಕ್ಕೆ ಶುಭ ಕೋರಿ ಕಾರ್ಮಿಕ ಮುಂದಾಳು ಯು.ಜನಾರ್ಧನನಾಯಕ್ ಮತ್ತು ಎಂ.ವೆಂಕಪ್ಪ ಶೆಟ್ಟಿ ಮೋರ್ಲರವರು ಮಾತನಾಡಿದರು.

ಕೆ.ಕೃಷ್ಣಪ್ಪ ಸಾಲಿಯಾನ್ ಅಧ್ಯಕ್ಷರು, ಸುಕುಮಾರ್,ವಿಶ್ವನಾಥ್ ಉಪಾಧ್ಯಕ್ಷರು, ಬಾಬು ಪಿಲಾರ್ ಕಾರ್ಯದರ್ಶಿ, ಅಜಿತ್‌ಕುಮಾರ್, ರಾಮಚಂದ್ರ ಸಹ ಕಾಯದರ್ಶಿ, ಹರೀಶ್ ಉಳ್ಳಾಲ್ ಕ್ರೀಡಾ ಕಾರ್ಯದರ್ಶಿ ಹಾಗೂ ಹುಸೈನ್ ಪಾವೂರು ಕೋಶಾಧಿಕಾರಿಯಾಗಿರುವ ಇಪ್ಪತ್ತೆರಡು ಜನರ ಹೊಸ ಸಮಿತಿಯನ್ನು ಸಮ್ಮೇಳನವು ಆಯ್ಕೆ ಮಾಡಿತು. ಬಾಬು ಪಿಲಾರ್, ಸ್ವಾಗತಿಸಿ, ಹರೀಶ್‌ಕೆ.ಉಳ್ಳಾಲ್ ವಂದಿಸಿದರು.

ಕೋಮುವಾದಿಗಳಿಂದ ಸಂವಿಧಾನಕ್ಕೆ ಧಕ್ಕೆ

ಭಟ್ಕಳ : ಭಾರತ ದೇಶದ ದುಡಿಯುವ ಜನ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ತೀವ್ರ ಜೀವನ್ಮರಣ ಹೋರಾಟ ನಡೆಸುತ್ತಿದ್ದಾಗ ಖಾಸಗೀಕರಣ, ಉದಾರೀಕರಣ ಮೂಲಕ ಉದ್ಯೋಗಾವಕಾಶಗಳ ಮೇಲೆ ಜನಗಳ ಜೀವನದ ಮಟ್ಟದ ಮೇಲೆ ಸರಕಾರ ಹಲ್ಲೆ ಮಾಡುತ್ತಿದ್ದಾಗ, ಸರಕಾರದೊಂದಿಗೆ ನಿಂತಿದ್ದ ಶಕ್ತಿಗಳೇ, ಇನ್ನೊಂದೆಡೆ ನಂಬಿಕೆಯ ಹೆಸರಿನಲ್ಲಿ ಹೊಲಸು ರಾಜಕೀಯ ನಡೆಸುತ್ತಿದ್ದುದು. ಇದೇ ಗಂಡಾಂತರಕಾರಿ ಶಕ್ತಿಗಳು ದೇಶದ ಕಾನೂನು, ನ್ಯಾಯಾಲಯವನ್ನು ಕೊನೆಗೆ ಸಂವಿಧಾನವನ್ನೇ ಉಲ್ಲಂಘಿಸುತ್ತಿರುವುದು ಆತಂಕಕಾರಿಯಾಗಿದೆ. ಈ ಕೋಮು ಶಕ್ತಿಗಳ ಮತ್ತು ಕೇಂದ್ರ ಸರಕಾರದ ಅಷ್ಟೇ ಬೇಜವಾಬ್ದಾರಿಯುತವಾದ ನಿಷ್ಕ್ರಿಯತೆ ಇಡೀ ದೇಶ, ಮುಖ್ಯವಾಗಿ ಬಡಜನರು, ದುಡಿಯುವ ವರ್ಗ, ಸಂವಿಧಾನ ಆಳ್ವಿಕೆ, ಆಧುನಿಕ ಭಾರತದ ಪರಂಪರೆಗೆ ಧಕ್ಕೆ ತಂದಿರುತ್ತದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ಮುಖಂಡರಾದ ಕೆ.ಶಂಕರ ನುಡಿದರು.

ಅವರು ಎಸ್ಎಫ್ಐ, ಸಿಪಿಐ(ಎಂ), ಸಿಐಟಿಯು ಮತ್ತು ಡಿವೈಎಫ್ಐ ಜಂಟಿಯಾಗಿ ಭಟ್ಕಳ ನಗರದಲ್ಲಿ ನಡೆಸಿದ ಭಟ್ಕಳ ತಾಲೂಕು ಮಟ್ಟದ ಕೋಮು ಸೌಹಾರ್ದತಾ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಇನ್ನೊರ್ವ ಮುಖ್ಯ ಅತಿಥಿ ಬಂಡಾಯ ಸಾಹಿತ್ಯ ಸಂಘಟನೆ ರಾಜ್ಯ ಸಂಚಾಲಕರಾದ ಆರ್.ವಿ.ಭಂಡಾರಿ ಮಾತನಾಡಿ, ನಮಗೆ ಇಂದು ದೇಶದ ಚಿತ್ತಸ್ವಾಸ್ಥ್ಯವನ್ನು ಕಾಪಾಡುವ ಹೊಣೆಗಾರಿಕೆ ಬೇಕು. ಚಾರಿತ್ರಿಕ ಮತ್ತು ಸಮಕಾಲೀನ ಸಂಗತಿಗಳನ್ನು ಆರೋಗ್ಯಕರ ನೆಲೆಯಲ್ಲಿ ವಿವರಿಸಿಕೊಳ್ಳುವ ಮನಸ್ಥಿತಿಯೊಂದು ಇಲ್ಲದಿದ್ದರೆ, ಚರಿತ್ರೆಯ ಪುಟಗಳ ತುಂಬಾ ಚಿತ್ರ ಮೂಡುತ್ತದೆ. ಸಮಕಾಲೀನ ಸತ್ಯಗಳನ್ನು ಸುಂದರ ಸ[illegible]ಯಲ್ಲಿ ಹೂತು ಬಿಡುತ್ತೇವೆ. ಈ ಸಂದರ್ಭದಲ್ಲಿ ಕೇವಲ ಕೋಮು ಸೌಹಾರ್ದವನ್ನಷ್ಟೇ ಅಲ್ಲ ಕೋಮುವಾದಿಗಳಿಗೆ ಕೆಲಸವಿಲ್ಲದಂತೆ ಮಾಡಬೇಕಾಗಿದೆ ಎಂದರಲ್ಲದೇ, ಅನೇಕ ಚಾರಿತ್ರಿಕ ಅಂಶವನ್ನು ಉದಾಹರಣೆ ಸಹಿತವಾಗಿ ತಮ್ಮ ಸುದೀರ್ಘವಾದ ಭಾಷಣದಲ್ಲಿ ವಿವರಿಸಿದರು.

ಸ್ಥಳೀಯ ಅಂಜುಮಾನ್ ಕಾಲೇಜಿನ ಉಪನ್ಯಾಸಕರಾದ ಎನ್.ಸಿ.ಸಿಯ ಮೇಜರ್ ಅಬ್ದುಲ್ ರೆಹಮಾನ್ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಎಸ್ಎಫ್ಐ ರಾಜ್ಯ ಸಮಿತಿ ಸದಸ್ಯ ಸುಭಾಷ್ ಕೊಪ್ಪಿಕರ್ ವಹಿಸಿದ್ದರು. ಭಾಗವಹಿಸಿದ ಸಭಿಕರಿಗೆ ಕೋಮು ಸೌಹಾರ್ದತಾ ಬಗ್ಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಡಿವೈಎಫ್ಐನ ಮಾಜಿ ರಾಜ್ಯ ಸಮಿತಿ ಸದಸ್ಯ ಮಹಾಬಲ ವಡೇರಹೋಬಳಿ, ಉ.ಕ. ಜಿಲ್ಲಾ ಯುವಜನತಾದಳ ಅಧ್ಯಕ್ಷ ದಾಮೋದರ ಗರ್ಡೀಕರ ಸಹ ವೇದಿಕೆಯಲ್ಲಿ ಉಪಸ್ಥಿತರಿದ್ದರು. "ಚುಟುಕ ಕವಿ" ವಿಡಂಬಾರಿಯವರು ತಮ್ಮ ಕವನಗಳ ವಾಚನ ಮೂಲಕ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದರು.

ಎಫ್ಎಫ್ಐ ಅಧ್ಯಕ್ಷರಾದ ಆನಂದ ಶೆಟ್ಟಿ ಸ್ವಾಗತಿಸಿದರು ಕಾರ್ಯದರ್ಶಿ ಗುರುದತ್ತಾ ಶಿರಾಲಿ ವಂದಿಸಿದರು.

ಹೃದಯಹೀನ ಅಮೇರಿಕಾದ ಆರೋಗ್ಯ ವ್ಯವಸ್ಥೆ

* ಒಬ್ಬ ತನ್ನ ಪ್ರಾಣ ಸ್ನೇಹಿತನ ಜೀವ ಉಳಿಸಲು ಏನು ಮಾಡಲೂ ತಯಾರು. ಸ್ನೇಹಿತ ಅಘಘಾತದಲ್ಲಿ ಪ್ರಾಣಾಂತಿಕವಾಗಿ ಗಾಯಗೊಂಡಿದ್ದಾನೆ. ಆತನನ್ನು ಆಸ್ಪತ್ರೆಗೆ ಸಾಗಿಸಲಾಗುತ್ತಿದೆ. ಆದರೆ ಆತನ ಬಳಿ ವೈದ್ಯಕೀಯ ಇನ್ಸೂರೆನ್ಸ್ ಇಲ್ಲ. ಆದ್ದರಿಂದ ಆಸ್ಪತ್ರೆ ಅವನನ್ನು ದಾಖಲು ಮಾಡಿಕೊಳ್ಳಲಿಕ್ಕಿಲ್ಲ ಎಂಬ ಭಯದಿಂದ ಸ್ನೇಹಿತ ಗಾಯಗೊಂಡವನ ಹೆಸರಿಗೆ ತನ್ನ ಇನ್ಸೂರೆನ್ಸ್ ಬದಲಾಯಿಸಿಕೊಳ್ಳುತ್ತಿದ್ದಾನೆ. ಗಾಯಗೊಂಡ ವ್ಯಕ್ತಿ ಬದುಕಿಕೊಳ್ಳುತ್ತಾನೆ.

ಹಿಂದಿ ಫಿಲಂನಂತಹ ಶುಭ ಅಂತ್ಯ ಅಂತೀರಾ! ಇಲ್ಲ! ಇನ್ಸೂರೆನ್ಸ್ ಬದಲಾಯಿಸಿಕೊಂಡ ತಪ್ಪಿಗೆ ಇಬ್ಬರೂ ತಮ್ಮ ಉದ್ಯೋಗ ಕಳೆದುಕೊಳ್ಳುತ್ತಾರೆ. ಅವರು ಮಾಡಿದ ಈ 'ಮೋಸ'ಕ್ಕಾಗಿ ಜೈಲುವಾಸ ಅನುಭವಿಸುತ್ತಾರೆ!

* ಆಪರೇಶನ್ ಆದ ರೋಗಿಗಳು ಗುಣವಾಗುವ ಮೊದಲೇ ಅವರನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗುತ್ತದೆ. ಯಾಕೆಂದರೆ ಪೂರ್ಣ ಖರ್ಚಿಗೆ ಅವರ ಇನ್ಸೂರೆನ್ಸ್ ಸಾಲದು!

* ಒಬ್ಬ ಮನುಷ್ಯನಿಗೆ ಏಡ್ಸ್ ರೋಗಗಳಿವೆ ಎಂದು ಗೊತ್ತಾದಾಗ ಇನ್ಸೂರೆನ್ಸ್ ಕಂಪೆನಿ ವೈದ್ಯಕೀಯ ಇನ್ಸೂರೆನ್ಸ್ ಅನ್ನು ವಾಪಸು ತೆಗೆದುಕೊಳ್ಳುತ್ತದೆ. ತನ್ನ ಲಾಭವೆಲ್ಲ ಪೂರ್ತಿ ಇವರಲ್ಲೇ ಕರಗಿ ಹೋದೀತು ಅಂತ, ಇನ್ಸೂರೆನ್ಸ್ ಕಂಪೆನಿ ವಾದ. ಅವರ ವಿರುದ್ಧ ಕೋರ್ಟಿಗೆ ಹೋದರೆ, ಕೋರ್ಟು ಕಂಪೆನಿಯ ವಾದ ಸರಿ ಅಂತ ತೀರ್ಪು ಕೊಡುತ್ತದೆ. ಕಂಪೆನಿಯ ಆರ್ಥಿಕ ಸ್ಥಿತಿ, ಲಾಭ ಬುಡಮೇಲು ಮಾಡಿ ಅದು ತನ್ನ ಸೇವೆ ಕೊಡಬೇಕಾಗಿಲ್ಲ ಎಂಬುದು ಕೋರ್ಟಿನ ತೀರ್ಪು!

* ಇದು ಯಾವುದೋ ಬಾರತದಂತಹ ಮೂರನೇ ಜಗತ್ತಿನ ದೇಶದ ಕಥೆಯಲ್ಲ. 'ಮಾನವ ಹಕ್ಕು'ಗಳ ಮತ್ತು 'ಉತ್ತಮ ಜೀವನಮಟ್ಟ'ದ 'ಕಾಶಿ' ಎನಿಸಿರುವ ಅಮೇರಿಕಾದ ಆರೋಗ್ಯಸೇವಾ ವ್ಯವಸ್ಥೆಗೆ ಹಿಡಿದ ಕನ್ನಡಿ. ವೈದ್ಯಕೀಯ ಕೊಳೆತು ನಾರುತ್ತಿರುವ ಅಮೇರಿಕಾದ ಆರೋಗ್ಯ ಸೇವಾ ವ್ಯವಸ್ಥೆಯ ಕರುಳು ಹಿಂಡುವ ಚಿತ್ರ.

ಜಗತ್ತಿನ ಅತ್ಯಂತ ಶ್ರೀಮಂತ ದೇಶದಲ್ಲಿ ಪ್ರಾಣವುಳಿಸುವ ಆರೋಗ್ಯಸೇವಾ ವ್ಯವಸ್ಥೆ ಎಷ್ಟು ದುಬಾರಿ, ಎಷ್ಟು ಕ್ರೂರ ಮತ್ತು ಅಮಾನವೀಯ ಎಂಬುದು ಬಹಿರಂಗಗುಟ್ಟು. ಈಗ ನಿಧಾನವಾಗಿ ಬೆಳಕಿಗೆ ಬರುತ್ತಿದೆ. ಶ್ರೀಮಂತ ದೇಶಗಳಲ್ಲೇ ಅತ್ಯಂತ ಕೆಟ್ಟ ಹಾಗೂ ದುಬಾರಿ ಆರೋಗ್ಯಸೇವಾ ವ್ಯವಸ್ಥೆ ಹೊಂದಿರುವ ಅಮೇರಿಕಾದಲ್ಲಿ ಅದು ಎಷ್ಟು ಕೊಳೆತು ನಾರುತ್ತಿದೆಯೆಂದರೆ ಇತ್ತೀಚಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಅದು ಒಂದು ಪ್ರಮುಖ ವಿಷಯವಾಗಿತ್ತು. ಅಧ್ಯಕ್ಷ ಕ್ಲಿಂಟನ್‌ರ ಮಡದಿ ಹಿಲರಿಗೆ ಸ್ವತಃ ಆರೋಗ್ಯ ವ್ಯವಸ್ಥೆಯ ಆರೋಗ್ಯ ಮರಳಿಸುವ ಜವಾಬ್ದಾರಿ ಕೊಡಲಾಗಿದೆ. 'ಆರೋಗ್ಯ ಸೇವೆ ಒಂದು ಹಕ್ಕಾಗಿರಬೇಕು. ಒಂದು ಸವಲತ್ತಲ್ಲ' ಎಂಬ ಕ್ಲಿಂಟನ್‌ರ ಚುನಾವಣಾ ಪ್ರಚಾರದ ಘೋಷಣೆ ನನಸಾಗಿಸುವುದು ಅಮೇರಿಕಾದ ಮಾರುಕಟ್ಟೆ ಆರ್ಥಿಕದಲ್ಲಿ ಅಷ್ಟೇನೂ ಸುಲಭವಲ್ಲ ಎಂಬುದು ಅವರಿಗೂ ಅರಿವಾಗುತ್ತಿದೆ.

ಅಮೇರಿಕಾದ ಆರೋಗ್ಯ ಸೇವಾ ವ್ಯವಸ್ಥೆ ವೈದ್ಯಕೀಯ ಇನ್ಸೂರೆನ್ಸ್ ಮೇಲೆ ಆಧರಿಸಿದ್ದು. ವೈದ್ಯಕೀಯ ಇನ್ಸೂರೆನ್ಸ್‌ಗೆ ಪ್ರತಿವ್ಯಕ್ತಿ ಪ್ರತಿ ತಿಂಗಳೂ ಪ್ರೀಮಿಯಂ ತೆರಬೇಕಾಗುತ್ತದೆ. ವ್ಯಕ್ತಿ ಅನಾರೋಗ್ಯಕ್ಕೆ ತುತ್ತಾದಾಗ ಆತನ ವೈದ್ಯಕೀಯ ವೆಚ್ಚವನ್ನು ಭರಿಸುತ್ತದೆ. ಸಾಮಾನ್ಯವಾಗಿ ಇಂತಹ ಇನ್ಸೂರೆನ್ಸ್ ಕಂಪೆನಿಗಳು ಮಧ್ಯಮ ಅಥವಾ ದೊಡ್ಡ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಮಾತ್ರ ವೈದ್ಯಕೀಯ ಇನ್ಸೂರೆನ್ಸ್ ಕೊಡುತ್ತವೆ. ಅಂದರೆ ಅಲ್ಪಾವಧಿಯ ಉದ್ಯೋಗ ಹೊಂದಿರುವ ನಿರುದ್ಯೋಗಿಗಳು, ತಾತ್ಕಾಲಿಕವಾಗಿ ಕೆಲಸ ಕಳೆದುಕೊಂಡವರಿಗೆ, ಇನ್ಸೂರೆನ್ಸ್ ದೊರೆಯುವುದಿಲ್ಲ ವೈದ್ಯಕೀಯ ಸೌಲಭ್ಯವೂ ದೊರೆಯುವುದಿಲ್ಲ.

ಈ ಕೆಳಗಿನ ಸಂಗತಿಗಳು ಅಮೇರಿಕನ್ ಆರೋಗ್ಯ ವ್ಯವಸ್ಥೆಯ ರೋಗದ ಚಿತ್ರಣ ನೀಡುತ್ತವೆ:

- ಕಳೆದ 10 ವರ್ಷಗಳಲ್ಲಿ ವೈದ್ಯಕೀಯ ಇನ್ಸೂರೆನ್ಸ್ ಪಡೆದಿರುವ ಕುಟುಂಬಗಳ ಸಂಖ್ಯೆ ಶೇಕಡಾ 50ರಿಂದ, ಶೇಕಡಾ 31ಕ್ಕೆ ಇಳಿದಿದೆ.
- ಕಾರ್ಮಿಕರಲ್ಲಿ ಪೂರ್ಣ ವೈದ್ಯಕೀಯ ಇನ್ಸೂರೆನ್ಸ್ ಸೌಲಭ್ಯ ಹೊಂದಿರುವವರ ಸಂಖ್ಯೆ ಕಳೆದ 10 ವರ್ಷದಲ್ಲಿ ಶೇಕಡಾ 75ರಿಂದ ಶೇಕಡಾ 48 ಕ್ಕಿಳಿದಿದೆ.
- ನಾಲ್ಕು ಕೋಟಿ ಅಮೇರಿಕನ್ನರಿಗೆ ಯಾವುದೇ ರೀತಿಯ ವೈದ್ಯಕೀಯ ಇನ್ಸೂರೆನ್ಸ್ ಇಲ್ಲ. ಇನ್ನೂ ಲಕ್ಷಾಂತರ ಜನರ ವೈದ್ಯಕೀಯ ಇನ್ಸೂರೆನ್ಸ್ ಅಪೂರ್ಣವಾದುದು.
- ವೈದ್ಯಕೀಯ ಇನ್ಸೂರೆನ್ಸ್ ಪ್ರೀಮಿಯಂ ವಿಪರೀತವಾಗಿ ಏರಿದೆ. ಹೆಚ್ಚು ಕಡಿಮೆ ಎರಡು ಪಟ್ಟಾಗಿದೆ.
- ದುಬಾರಿಯಾಗುತ್ತಿರುವ ವೈದ್ಯಕೀಯ ಇನ್ಸೂರೆನ್ಸ್‌ನಿಂದಾಗಿ, ಪ್ರತಿ ತಿಂಗಳು ಒಂದು ಲಕ್ಷ ಅಮೇರಿಕನ್ನರು ಇನ್ಸೂರೆನ್ಸ್ ಕಳೆದುಕೊಳ್ಳುತ್ತಿದ್ದಾರೆ.
- ಕಳೆದ 10 ವರ್ಷಗಳಲ್ಲಿ ಮಗುವಿಗೆ ಹಾಕುವ ಲಸಿಕೆಗಳ ದೆಲೆ 12 ಪಟ್ಟಿಗಿಂತಲೂ ಹೆಚ್ಚಿದೆ.
- ಎಲ್ಲಾ ಅಗತ್ಯ ಲಸಿಕೆ ಹಾಕಿಸಿಕೊಂಡಿರುವ ಮಕ್ಕಳು ಸಂಖ್ಯೆ ಶೇಕಡಾ 50ಕ್ಕಿಂತಲೂ ಕಡಿಮೆ. ಕೆಲವು ಅಭಿವೃದ್ಧಿ ಮಾಡುತ್ತಿರುವ ಬಡ ದೇಶಗಳಿಗಿಂತಲೂ ಅಮೇರಿಕ ಇದರಲ್ಲಿ ಹಿಂದೆ ಬಿದ್ದಿದೆ.

ಈ ಅವಸ್ಥೆಗೆ ಮುಖ್ಯ ಕಾರಣ, ಆರೋಗ್ಯ ಸೇವೆಯನ್ನು ಒಂದು ಅವಶ್ಯಕ ಸಾರ್ವಜನಿಕ ಸೇವೆಯಾಗಿ ಪರಿಗಣಿಸದೆ, ವ್ಯಾಪಾರವಾಗಿಸಿರುವುದು. ಆರೋಗ್ಯ ಸೇವೆಯ ಈ ವ್ಯಾಪಾರದಿಂದ ಸೂಪರ್ ಲಾಭ ಗಳಿಸುತ್ತಿರುವ ಪ್ರಬಲ ಇನ್ಸೂರೆನ್ಸ್ ಕಂಪೆನಿಗಳು, ಔಷಧಿ ಕಂಪೆನಿಗಳು, ಆಸ್ಪತ್ರೆಯ ಒಡೆತನ ಹೊಂದಿರುವ ಕಂಪೆನಿಗಳು, ಲಕ್ಷಾಧಿಪತಿ ಡಾಕ್ಟರುಗಳು - ಯಾವುದೇ ಬದಲಾವಣೆಗೆ ತೀವ್ರ ಪ್ರತಿರೋಧ ಒಡ್ಡಲಿವೆ. ಅಮೇರಿಕಾದ ಆರೋಗ್ಯ ವ್ಯವಸ್ಥೆಯ ರೋಗ ಹೋಗಲಾಡಿಸದಿದ್ದರೆ ಅಮೇರಿಕನ್ ಸಮಾಜ ತೀವ್ರ ಸಾಮಾಜಿಕ ಅಸಂತೋಷದ ಸ್ಫೋಟ ಎದುರಿಸಬೇಕಾದೀತು.

ಕೋಮು ಸೌಹಾರ್ದ ಭಾಷಣ-ಚಿತ್ರಕಲೆ ಸ್ಪರ್ಧೆ

ಕುಷ್ಟಗಿ : ರಾಷ್ಟ್ರೀಯ ಭಾವೈಕ್ಯತೆಯಲ್ಲಿ ವಿದ್ಯಾರ್ಥಿಗಳ ಪಾತ್ರ ವಿಷಯವಾಗಿ ಕುಷ್ಟಗಿ ತಾಲೂಕಾ ಎಸ್‌ಎಫ್‌ಐ ಸಮಿತಿಯು ಈ ಕೆಳಕಂಡ ಶಾಲೆ-ಕಾಲೇಜುಗಳಲ್ಲಿ ಭಾಷಣ ಮತ್ತು ಚಿತ್ರ ಕಲಾ ಸ್ಪರ್ಧೆಯನ್ನು ಏರ್ಪಡಿಸುತ್ತು. ಈ ಕಾರ್ಯಕ್ರಮವು ದಿನಾಂಕ 25-1-93ರಿಂದ 30-1-93ರ ತನಕ ನಡೆಯಿತು.

ಸ್ಪರ್ಧೆ ನಡೆದ ಶಾಲಾ ಕಾಲೇಜುಗಳು ಈ ರೀತಿ ಇವೆ : ಸರಕಾರಿ ಬಾಲಕಿಯರ ಪ್ರೌಢ ಶಾಲೆ(ಕುಷ್ಟಗಿ), ಸರಕಾರಿ ಉರ್ದು ಪ್ರೌಢಶಾಲೆ(ಕುಷ್ಟಗಿ), ಸರಕಾರಿ ಬಾಲಕರ ಪ್ರೌಢಶಾಲೆ(ಕುಷ್ಟಗಿ), ಶ್ರೀ ಗವಿಸಿದ್ದೇಶ್ವರ ಪ್ರೌಢಶಾಲೆ(ಕುಷ್ಟಗಿ), ಸರಕಾರಿ ಪದವಿ-ಪೂರ್ವ ಕಾಲೇಜ್(ಕುಷ್ಟಗಿ), ಸರಕಾರಿ ಪದವಿ ಕಾಲೇಜ್(ಕುಷ್ಟಗಿ)

ಈ ಎಲ್ಲಾ ಶಾಲಾ ಮತ್ತು ಕಾಲೇಜುಗಳ ಪ್ರಾಚಾರ್ಯರರು ಮತ್ತು ಸಿಬ್ಬಂದಿ ವರ್ಗದವರು ತುಂಬಾ ಸಹಾಯ ಸಹಕಾರ ನೀಡಿದರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಎಸ್‌ಎಫ್‌ಐ ಕುಷ್ಟಗಿ ತಾಲೂಕಾ ತಹಸಿಲ್ದಾರರ ಸಹಯೋಗದಲ್ಲಿ ಪ್ರೋತ್ಸಾಹ ಬಹುಮಾನಗಳನ್ನು ವಿತರಿಸಲಾಯಿತು.

ಮಾನವ ಸರಪಳಿ

ಗುಲ್ಬರ್ಗಾ : ಎಂ.ಎಸ್.ಕೆ. ಮಿಲ್‌ನ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಎನ್‌ಟಿಯುಸಿ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ 600ಕ್ಕೂ ಹೆಚ್ಚು ಕಾರ್ಮಿಕರು ಮಿಲ್ ಆವರಣದ ಒಳಗಡೆ ಕೋಮು ಸೌಹಾರ್ದತೆಗಾಗಿ ಜನವರಿ 30ರಂದು ಬೃಹತ್ ಮಾನವ ಸರಪಳಿ ನಿರ್ಮಿಸಿದರು.

ಭಾರತದ ಪ್ರಜೆಯಾಗಿ ರಾಜಕೀಯ ಲಾಭಕ್ಕಾಗಿ ಧಾರ್ಮಿಕ ಭಾವನೆ ಕೆಂಳಿಸುವ ಎಲ್ಲಾ ಕ್ರಮಗಳನ್ನು ವಿರೋಧಿಸುತ್ತೇನೆ ಹಾಗೂ ಕೋಮುವಾದವನ್ನು ಬುಡಸಮೇತ ನಿರ್ಮೂಲನ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತೇನೆ. ಭಾರತದ ಏಕತೆ ಮತ್ತು ಕೋಮು ಸಾಮರಸ್ಯ ಕಾಪಾಡಿ ಬಲಪಡಿಸಲು ಬದ್ಧನಾಗಿರುತ್ತೇನೆ ಎನ್ನುವ ಪ್ರತಿಜ್ಞೆಯನ್ನು ಎಲ್ಲಾ ಕಾರ್ಮಿಕರು ಸಾಮೂಹಿಕವಾಗಿ ಸ್ವೀಕರಿಸಿದರು.

ಮಾನವ ಸರಪಳಿಯಲ್ಲಿ ಮಿಲ್‌ನ ಆಡಳಿತ ವರ್ಗದ ಅಧಿಕಾರಿಗಳು ಸೇರಿದಂತೆ ಎಲ್ಲಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಪ್ರಯಾಣದರ ಏರಿಕೆಗೆ ವ್ಯಾಪಕ ವಿರೋಧ

ಉತ್ತಮ ಆಡಳಿತವನ್ನು ಕೊಡುವ ಆಶ್ವಾಸನೆಯೊಂದಿಗೆ ಅಧಿಕಾರಕ್ಕೆ ಬಂದ ವೀರಪ್ಪ ಮೊಯಿಲಿ ಸರಕಾರ ತನ್ನ ಆಡಳಿತದ 100 ದಿನಗಳೊಳಗೇ ಕರ್ನಾಟಕ ಜನರಿಗೆ ಕೊಟ್ಟ 'ಕಾಣಿಕೆ' ಸರಕಾರಿ ಬಸ್‌ಗಳ ಪ್ರಯಾಣ ದರಗಳ ಏರಿಕೆ. ಪ್ರಯಾಣವನ್ನು 'ದುಬಾರಿ'ಗೊಳಿಸಿದ ಕಾಂಗ್ರೆಸ್ ಸರಕಾರದ ಈ ಕ್ರಮಕ್ಕೆ ರಾಜ್ಯದೆಲ್ಲೆಡೆ ಪ್ರತಿಭಟನೆ ವ್ಯಕ್ತವಾಗುತ್ತಿದೆ. ಕೆಲ ವರದಿಗಳು ಇಲ್ಲಿವೆ.



ಪ್ರತಿಭಟನೆ, ಬಂಧನ

ಬಿಜಾಪುರ : ಸರಕಾರದ ಜನವಿರೋಧಿ ನೀತಿ ಹಾಗೂ ಬಸ್ ಪ್ರಯಾಣ ದರ ಏರಿಕೆಯನ್ನು ಇಲ್ಲಿ ಪ್ರತಿಭಟಿಸುತ್ತಿದ್ದ ಒಬ್ಬ ಮಹಿಳೆಯನ್ನೊಳಗೊಂಡು 25 ಸದಸ್ಯರನ್ನು ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು. ಇತ್ತೀಚೆಗೆ ದಿಢೀರನೆ ಬಸ್ ದರಗಳನ್ನು ಏರಿಸಿದ ಸರಕಾರದ ನೀತಿಯನ್ನು ಪ್ರತಿಭಟಿಸಿ ನಗರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್‌ಐ) ವಿಜಾಪುರ ಜಿಲ್ಲಾ ಸಮಿತಿ ಯುವಜನರ ಮೆರವಣಿಗೆಯನ್ನು ಹಮ್ಮಿಕೊಂಡಿತ್ತು. ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಬಂದ ಕಾರ್ಯಕರ್ತರು ಬಸ್‌ದರಗಳನ್ನು ಏರಿಸಿದ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ಮುಖ್ಯಮಂತ್ರಿಯು ಜನರಿಗೆ ಸುಳ್ಳು ಆಶ್ವಾಸನೆಗಳನ್ನು ಕೊಡುತ್ತಿದ್ದು ಪ್ರಯಾಣ ದರ ಏರಿಕೆಯಿಂದ ಜನತೆಗೆ ಅದರ ಅರಿವುಂಟಾಗಿದೆ ಎಂದು ಡಿವೈಎಫ್‌ಐ ಅಭಿಪ್ರಾಯಪಟ್ಟಿದೆ.

ಈ ಮೆರವಣಿಗೆಯಲ್ಲಿ ಬಂದವರು ಬಸ್ ನಿಲ್ದಾಣಕ್ಕೆ ತೆರಳಿ ಅರ್ಧಗಂಟೆಗೂ ಹೆಚ್ಚು ಸಮಯ ಬಸ್ಸುಗಳನ್ನು ತಡೆದು ಬಸ್ ದರ ಏರಿಕೆಯನ್ನು ಪ್ರತಿಭಟಿಸಿದರು. ಪೋಲೀಸರು ಬಂದು ನ್ಯಾಯಯುತವಾದ ಬೇಡಿಕೆಗಳಿಗೋಸ್ಕರ ಪ್ರತಿಭಟಿಸಿದಾಗ, ಸುಮಾರು 25 ಜನ ಕಾರ್ಯಕರ್ತರನ್ನು ಬಂಧಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಡಿ.ವೈ.ಎಫ್.ಐ. ಜಿಲ್ಲಾ ಅಧ್ಯಕ್ಷ ಮನ್ಸೂಸಾಬ ಕಲಾದಗಿ, ಕಾರ್ಯದರ್ಶಿ ಸದಾನಂದ ಮೋದಿ, ಮಹಿಳಾ ಸಂಘಟನೆಯ ಸಂಚಾಲಕಿ ಅನಸೂಯಾ ಕಾಶೆ, ಹಣಮಂತ ಹಡಪದ, ಹುಸೇನಿ ಕಾತಿನಕುಂಟಿ, ರಫೀಕ ಹಂಚಿನಾಳ, ಇರಕಲ್, ಮಹಿಬೂಬ, ಗುಡಗಂಟಿ, ಹುಸೇನಿ ಹೆಬ್ಬಾಳ, ಎಂ.ಬಿ. ಮೋಕಾಶಿ, ಭಿಮಸಿ ಕಲಾದಗಿ ಮುಂತಾದವರು ವಹಿಸಿ ಪೋಲೀಸರಿಂದ ಬಂಧನಕ್ಕೊಳಗಾದವರಲ್ಲಿ ಪ್ರಮುಖರು.

ಬಂಧನದಿಂದ ಬಿಡುಗಡೆಗೊಂಡ ಬಳಿಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದ ಡಿವೈಎಫ್‌ಐ ಕಾರ್ಯಕರ್ತರು ಜನವಿರೋಧಿ ನೀತಿಯನ್ನು ಪ್ರತಿಭಟಿಸಿ, ಮನವಿಯೊಂದನ್ನು ಉಪವಿಭಾಗಾಧಿಕಾರಿಗಳಾದ ಹಾಗೂ ಸ್ಥಳದಲ್ಲಿ ಇದ್ದ ಬುಳ್ಳೂಳ್ಳಿ ಮತ ಕ್ಷೇತ್ರದ ಶಾಸಕರಾದ ಮನೋಹರ ಐನಾಪೂರ ಇವರಿಗೆ ಮನವಿ ಸಲ್ಲಿಸಿದರು.


ಸಂಯುಕ್ತ ಪ್ರತಿಭಟನೆ

ದಾಂಡೇಲಿ : 11-2-93ರಂದು ಸಂಜೆ ಆರು ಗಂಟೆಗೆ ಸಿಪಿಐ(ಎಂ) ಹಾಗೂ ಜನತಾ ದಳ ಪಕ್ಷಗಳು ಜಂಟಿಯಾಗಿ ಬಸ್ ದರ ಏರಿಸಿದ್ದರ ವಿರುದ್ಧ ರಸ್ತಾರೋಕೋ ಕಾರ್ಯಕ್ರಮ ನಡೆಸಿದವು.

ಇದರ ಅಂಗವಾಗಿ ಎರಡೂ ಪಕ್ಷಗಳ ಸುಮಾರು 200 ಕಾರ್ಯಕರ್ತರು ದಾಂಡೇಲಿಯ ಪ್ರಮುಖ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯನ್ನು ತೆಗೆದು ನಂತರ ಬಸ್‌ನಿಲ್ದಾಣದ ಎದುರುಗಡೆ ಧರಣಿ ನಡೆಸಿದರು. ಧರಣಿಯ ನೇತೃತ್ವವನ್ನು ಸಿಪಿಐ(ಎಂ) ಪಕ್ಷದ ಟಿ.ಎಸ್.ನಾಯ್ಕ, ಹರೀಶ್‌ನಾಯ್ಕ, ಮಂಜುನಾಥ ಪುಲಕರ್, ಜನತಾದಳದ ಆರ್.ಎಸ್.ನಾಯ್ಕ, ವಿ.ಎ.ಕೋನಾಪುರಿ, ಗಂಗಣ್ಣ, ಬಾಬಾ ಮುಲ್ಲಾ ಹಾಗೂ ದುಸಗಿ ಎಸ್.ವಿಯವರು ವಹಿಸಿದ್ದರು. ಸುಮಾರು ಅರ್ಧ ಗಂಟೆ ದಾಂಡೇಲಿಯಲ್ಲಿ ಪರ ಊರಿಗೆ ಹೋಗುವ ಬಸ್ಸುಗಳನ್ನು ಶಾಂತಯುತವಾಗಿ ತಡೆಹಿಡಿದಿದ್ದರು. ನಂತರ ಚಳುವಳಿಗಾರರನ್ನುದ್ದೇಶಿಸಿ ಮಾತನಾಡಿದ ಮಾಜಿ ರಾಜ್ಯಸಭಾ ಸದಸ್ಯರಾದ ಆರ್.ಎಸ್.ನಾಯ್ಕ ಹಾಗೂ ಹರೀಶ್‌ನಾಯ್ಕ ಎಸ್.ವಿ. ದುಸಗಿ ಇವರೆಲ್ಲಾ ಕಾಂಗ್ರೆಸ್ ಸರಕಾರದ ಜನವಿರೋಧಿ ಹಾಗೂ ಮೊಯಿಲಿಯವರ ಸರ್ವಾಧಿಕಾರಿ ಪ್ರವೃತ್ತಿಯನ್ನು ಖಂಡಿಸಿದರು. ನಂತರ ಪ್ರತಿಭಟನಕಾರರನ್ನು ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು.

ಸಿಂಧನೂರಿನಲ್ಲಿ

ಸಿಂಧನೂರು : ರಾಜ್ಯ ಸರಕಾರವು ಪ್ರಯಾಣ ದರಗಳಲ್ಲಿ ಶೇಕಡಾ 22 ರಿಂದ 25ರಷ್ಟು ಏರಿಕೆ ಮಾಡಿರುವುದನ್ನು ಖಂಡಿಸಿ 9-2-93ರಂದು ಸಿಂಧನೂರಿನಲ್ಲಿ ಡಿವೈಎಫ್‌ಐ 'ರಸ್ತಾರೋಕೋ' ಕಾರ್ಯಕ್ರಮವನ್ನು ಮಹಾತ್ಮಾ ಗಾಂಧಿ ಚೌಕಿನಲ್ಲಿ ಬೆಳಿಗ್ಗೆ 10-30ರಿಂದ 12 ಗಂಟೆಯವರೆಗೆ ನಡೆಸಿತು. ನಂತರ ತಹಶೀಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಮಿತಿ ಸಹಕಾರ್ಯದರ್ಶಿ ಹೆಚ್.ಶರೀಫುದ್ದೀನ್, ಎಸ್. ದೇವೇಂದ್ರಗೌಡ ಮತ್ತು ರಮೇಶ ತಾಲೂಕಾ ಸಮಿತಿ ಸದಸ್ಯರು ಮಾತನಾಡಿ ಬಸ್ ದರ ಇಳಿಸದೇ ಇದ್ದಲ್ಲಿ ಮುಂದಿನ ಹಂತದ ಕಾರ್ಯಕ್ರಮ ರೂಪಿಸುವುದಾಗಿ ಎಚ್ಚರಿಸಿದರು. ಸುಬಾನ್, ಶರಣ್ಣ ನಾಗಲಾಪುರ, ಬಿ. ಲಿಂಗಪ್ಪ ಮತ್ತು ಮಹಬೂಬಿಯ ಕಾಲನಿ ಘಟಕದ ಡಿವೈಎಫ್‌ಐ ಸದಸ್ಯರು ರಸ್ತಾರೋಕೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಬಂಗಾರಪೇಟೆಯಲ್ಲಿ ರಸ್ತೆ ತಡೆ

ಬಂಗಾರಪೇಟೆ : ಸರಕಾರಿ ಬಸ್ ಪ್ರಯಾಣದರ ಏರಿಕೆಯನ್ನು ಪ್ರತಿಭಟಿಸಿ ಫೆ. 12ರಂದು ಶುಕ್ರವಾರ ಬೆಳಿಗ್ಗೆ 11-05ರಿಂದ 11-35ರ ತನಕ ಬಂಗಾರಪೇಟೆ ಬಸ್ ಸ್ಟಾಂಡ್ ಬಳಿ ಸ್ಥಳೀಯ ಡಿವೈಎಫ್‌ಐ ಘಟಕದ ವತಿಯಿಂದ ಅತ್ಯಂತ ಯಶಸ್ವಿಯಾದ ರಸ್ತೆ ತಡೆ ಚಳುವಳಿ ನಡೆಸಲಾಯಿತು. 25 ಮಹಿಳೆಯರೂ ಸೇರಿ ಸುಮಾರು 80 ಯುವಜನರು, ವಿದ್ಯಾರ್ಥಿಗಳು ಈ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಸೈಕಲ್‌ಗಳು ಸೇರಿ ಎಲ್ಲಾ ವಾಹನಗಳ ಸಂಚಾರ ಅರ್ಧ ಗಂಟೆಯ ಕಾಲ ಸ್ಥಗಿತಗೊಂಡಿತ್ತು. ಸರಕಾರದ ಜನವಿರೋಧಿ ಕ್ರಮದ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು. ನೂರಾರು ಸಾರ್ವಜನಿಕರು ರೈತರು ಪ್ರತಿಭಟನೆಗೆ ಬೆಂಬಲವಾಗಿ ಘೋಷಣೆಗಳನ್ನು ಕೂಗಿದರು.

ನೆರೆದಿದ್ದ ಕಾರ್ಯಕರ್ತರನ್ನು, ಸಾರ್ವಜನಿಕರನ್ನು ಉದ್ದೇಶಿಸಿ ಡಿವೈಎಫ್‌ಐನ ಕೋಲಾರ ಜಿಲ್ಲಾ ಮಾಜಿ ಅಧ್ಯಕ್ಷ ಪಿ.ಶ್ರೀನಿವಾಸ್ ಮಾತನಾಡಿ ಸರಕಾರದ ಜನವಿರೋಧಿ ಕ್ರಮವನ್ನು ಖಂಡಿಸಿ ಏರಿಸಿರುವ ಬಸ್ ದರಗಳನ್ನು ವಾಪಸ್ ಪಡೆಯಲು ಒತ್ತಾಯಿಸಿದರು. ಡಿವೈಎಫ್‌ಐ ಬಂಗಾರಪೇಟೆ ಘಟಕದ ಮನ್ಸೂರ್ ಅಹ್ಮದ್ ವಂದನೆ ಸಲ್ಲಿಸಿದರು.

KRNM/BGS - 405 MAG[S] PRB DECR 319 - 78/79

ತ್ರಿಪುರಾದಲ್ಲಿ ಚುನಾವಣೆ ಮುಂದೂಡಿದ್ದೇಕೆ?

- ಪ್ರಕಾಶ್ ಕಾರಾತ್

ತ್ರಿಪುರಾದಲ್ಲಿ ಚುನಾವಣೆ ಮುಂದೂಡಿದ್ದೇಕೆ ಎಂಬ ಬಗ್ಗೆ ಹಲವು ಗೊಂದಲಗಳಿವೆ. ಆದರೆ ಈ ಕೆಳಗಿನ ವಿವರಗಳು ನಿಮ್ಮ ಎಲ್ಲಾ ಗೊಂದಲವನ್ನು ಪರಿಹರಿಸುತ್ತವೆ.

ಸಮೀರ್ ರಂಜನ್ ಬರ್ಮನ್ ಸರಕಾರದ ಬೆಂಬಲವಿದ್ದ ಕಾಂಗ್ರೆಸ್ (ಐ) ದುಷ್ಕರ್ಮಿಗಳ ಕೃತ್ಯಗಳಿಂದಾಗಿ ಫೆಬ್ರುವರಿ 13-15 ರ ನಡುವೆ ತ್ರಿಪುರಾದಲ್ಲಿ ರಕ್ತಪಾತವೇ ನಡೆಯುವ ಸಂಭವವಿತ್ತು. ಫೆ. 14 ಮತ್ತು 15 ರಂದು ನಾನು ರಾಜ್ಯಕ್ಕೆ ಭೇಟಿ ನೀಡಿ ಸಂಗ್ರಹಿಸಿದ ವರದಿಗಳು ಹಾಗೂ ಮಾಹಿತಿಗಳು ಈ ಭೀತಿಗೆ ಪುಷ್ಟಿ ಕೊಡುತ್ತವೆ. ಚುನಾವಣೆ ಮುಂದೂಡಿಕೆಯಿಂದ ರಾಜ್ಯದಲ್ಲಿ ರಕ್ತಪಾತವನ್ನು ತಪ್ಪಿಸದಂತಾಗಿದೆ.

ರಾಜ್ಯದಲ್ಲಿ ಚುನಾವಣಾ ಪ್ರಕ್ರಿಯೆ ಆರಂಭವಾದ ಜತೆಜತೆಗೆ ಕಾಂಗ್ರೆಸ್ (ಐ) - ಟಿ.ಯು.ಜೆ.ಎಸ್. ನೇತೃತ್ವದ ಸಮ್ಮಿಶ್ರ ಸರಕಾರದ ಕೃಪಾಶ್ರಾಯದಲ್ಲಿ ಭಯವನ್ನು ಹುಟ್ಟಿಸುವ ಹಾಗೂ ಮತದಾರರ ಮೇಲೆ ಒತ್ತಡ ಹೇರುವ ತಂತ್ರವೂ ಶುರುವಾಗಿತ್ತು. ಮತದಾನ ಮಾಡುವ ಜನರ ಹಕ್ಕಿಗೆ ಅಡ್ಡಿ ತರುವುದು ಇವರ ಉದ್ದೇಶವಾಗಿತ್ತು. ಎಡರಂಗದ ಪರವಾಗಿ ಎಲ್ಲಾ ವಿಭಾಗಗಳಲ್ಲಿ ಜನರ ಒಲವು ವ್ಯಕ್ತವಾಗುತ್ತಿದ್ದುದರಿಂದ ಈ ದುಷ್ಟ ಸಂಚನ್ನು ರೂಪಿಸಲಾಯಿತು.

ಅಗರ್ತಲಾದಲ್ಲಿರುವ ಸಿಪಿಐ(ಎಂ) ರಾಜ್ಯ ಸಮಿತಿ ಕಚೇರಿಯನ್ನು ನಾನು ಫೆಬ್ರುವರಿ 14 ರಂದು ಬೆಳಿಗ್ಗೆ ತಲುಪಿದಾಗ ಈ ಅಪಾಯಕಾರಿ ಸಂಚಿನ ತೀಕ್ಷ್ಣತೆಯ ಅರಿವಾಯಿತು. 70 ವರ್ಷ ಪ್ರಾಯದ ಮಣೀಂದರ್ ಮಲ್ಲಿಕ್ ಅವರ ಪಾರ್ಥಿವ ಶರೀರವನ್ನು ಅಲ್ಲಿ ಇರಿಸಲಾಗಿತ್ತು. ಕಾರ್ಯಕರ್ತರು ಹಾಗೂ ನಾಯಕರು ಅವರಿಗೆ ಅಂತಿಮ ನಮನ ಸಲ್ಲಿಸುತ್ತಿದ್ದರು. ಫೆ. 10 ರಂದು ಕೃಷ್ಣಮುಖದಲ್ಲಿ ಕಾಂಗ್ರೆ ಕಾರ್ಯಕರ್ತರು ನಡೆಸಿದ ದಾಳಿಯಲ್ಲಿ ಗಾಯಗೊಂಡಿದ್ದ ಅವರು 13 ರಂದು ಮೃತಪಟ್ಟರು. ಅದೇ ದಾಳಿಯಲ್ಲಿ ಜನವಾದಿ ಮಹಿಳಾ ಸಮಿತಿ ನಾಯಕಿ ಶೆಫಾಲಿ ಲೋಧ್ ಗಾಯಗೊಂಡಿದ್ದರು. ಸ್ವಲ್ಪದರಲ್ಲಿ ಅವರು ಪ್ರಾಣಾಪಾಯದಿಂದ ಪಾರಾಗಿದ್ದರು.

ಬೆಲೊನಿಯಾ ಉಪವಿಭಾಗದಲ್ಲಿ ನಡೆದ ಈ ಘಟನೆ ಫೆ. 15ರ ಚುನಾವಣೆಯಲ್ಲಿ ಅಕ್ರಮವನ್ನೆಸಗಲು (ರಿಗ್‌ಮಾಡಲು) ಕಾಂಗ್ರೆ-ಟಿ.ಯು.ಜೆ.ಎಸ್. ಕೂಟ ಯೋಜಿಸಿದ್ದ ರಕ್ತಪಾತಕ್ಕೆ ಉದಾಹರಣೆಯಾಗಿತ್ತು.

ಫೆಬ್ರವರಿ 15 ಸಮೀಪಿಸುತ್ತಿದ್ದಂತೆ ಹಿಂಸಾಕೃತ್ಯಗಳನ್ನು ಹಠಾತ್ತನೆ ಹೆಚ್ಚಿಸಲಾಯಿತು. 15 ರಂದು ಅದನ್ನು ಪರಾಕಾಷ್ಠೆಗೇರಿಸಿ ರಿಗ್ ಮಾಡುವುದು ಅವರ ಗುರಿಯಾಗಿತ್ತು. ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಅಭ್ಯರ್ಥಿಗಳು ಗೆಲ್ಲುವ ನಿರೀಕ್ಷೆಯಿದ್ದ ಕ್ಷೇತ್ರಗಳಲ್ಲಿ ಎರಡು ರೀತಿಯ ದಾಳಿಗಳನ್ನು ಯೋಜಿಸಲಾಗಿತ್ತು. ಮೊದಲನೆದಾಗಿ, ಅಭ್ಯರ್ಥಿಗಳು ಮತ್ತು ಕಾರ್ಯಕರ್ತರು ಮಾತ್ರವಲ್ಲದೆ ಎಡಪಕ್ಷಗಳಿಗೆ ಮತ ನೀಡುವ ಸಂಭವವಿರುವ ಮತದಾರರ ಮೇಲೆ ಕೂಡ ಆಕ್ರಮಣ ಮಾಡುವುದು. ಎರಡನೆಯದಾಗಿ ಪೋಲೀಸರು ಹಾಗೂ ಸ್ಥಳೀಯ ಅಧಿಕಾರಿಗಳನ್ನು ನಿಷ್ಕ್ರೀಯಗೊಳಿಸುವುದು.

ಇದಕ್ಕೆ ಒಂದು ಉತ್ತಮ ಉದಾಹರಣೆ ಬಾದಲ್ ಚೌಧರಿ ಪ್ರಕರಣ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುವ ಅವರ ಮೇಲೆ ಮೂರು ಬಾರಿ ಆಕ್ರಮಣ ನಡೆಯಿತು. ಫೆ 12 ರಂದು ಮೂರನೇ ಬಾರಿ ಕೊಲೆ ಯತ್ನ ನಡೆಯಿತು.

ದೂರು ದೂರು ದೂರು

ಇದು ರಾಜ್ಯದಲ್ಲಿನ ಭಯಗ್ರಸ್ತ ಪರಿಸ್ಥಿತಿಗೆ ಒಂದೆರಡು ಉದಾಹರಣೆಗಳು ಅಷ್ಟೇ. ಪ್ರಚಾರ ಮಾಡಲು ಅಸಮರ್ಥತೆ, ಅಭ್ಯರ್ಥಿಗಳು ಹಾಗೂ ಬೆಂಬಲಿಗರಿಗೆ ಬೆದರಿಕೆಗಳ ಬಗ್ಗೆ ಎಡರಂಗ ಹಾಗೂ ಜನತಾದಳ ಮಾತ್ರವಲ್ಲದೆ ಕಾಂಗ್ರೆಸ್(ಐ) ನ ಬಂಡುಕೋರ ಅಭ್ಯರ್ಥಿಗಳು ಕೂಡ ಹಲವಾರು ದೂರುಗಳನ್ನು ಸಲ್ಲಿಸಿದ್ದಾರೆ. ಸಚಿವ ಸಂಪುಟದಲ್ಲಿ ಎರಡನೇ ಸ್ಥಾನದಲ್ಲಿರುವ ಟಿ.ಯು.ಜೆ.ಎಸ್.ಗೆ ಸೇರಿದವರಾದ ನಾಗೇಂದ್ರ ಜಮಾತಿಯಾ ಕೂಡಾ ಚುನಾವಣಾ ಆಯೋಗಕ್ಕೆ ಈ ರೀತಿಯ ದೂರನ್ನು ಸಲ್ಲಿಸಿದ್ದಾರೆ ಎಂದು ಹೇಳಲಾಗಿದೆ. ಇದು ಹದಗೆಟ್ಟ ಪರಿಸ್ಥಿತಿಗೆ ಇನ್ನೊಂದು ಉದಾಹರಣೆ.

ಚುನಾವಣಾ ಆಯೋಗದ ಆಜ್ಞೆಯನ್ನು ಈ ಎಲ್ಲವುಗಳ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗಿದೆ. ಆಯೋಗದ ಆದೇಶ ಸಮೀರರಂಜನ್ ಬರ್ಮನ್ ಸರಕಾರ ಮತ್ತು ಅದು ಆಯೋಗದ ನಿರ್ದೇಶನಗಳನ್ನು ಉಲ್ಲಂಘಿಸಿದ್ದಕ್ಕೆ ಛೀಮಾರಿ ಎನ್ನುವುದು ಸ್ಪಷ್ಟವಾಗಿದೆ.

ರಾಷ್ಟ್ರಪತಿ ಆಡಳಿತ ಅನಿವಾರ್ಯ

ಹಾಲಿ ವಿಧಾನ ಸಭೆಯ ಅವಧಿ ಮುಕ್ತಾಯವಾದ ನಂತರವೂ ಹೊಸ ಸದನ ರಚನೆಯಾಗದೆ ಸಂವಿಧಾನ ಬಿಕ್ಕಟ್ಟು ಉಂಟಾಗುವಂಥ ಅಹಿತಕರ ಬೆಳವಣಿಗೆಯಲ್ಲಿ ಏನಾದರೂ ಸಂಭವಿಸಿದರೆ ಅದನ್ನು ಎದುರಿಸಲು ಕೇಂದ್ರ ಸರಕಾರ ತುರ್ತು ಯೋಜನೆಯೊಂದಿಗೆ ಸಿದ್ಧವಾಗಿರಬೇಕು ಎಂದು *464/93* (ಎಲ್ ಅಂಡ್ ಜ) ತಾನು ದಿನಾಂಕ 4 ನೇ ಫೆಬ್ರವರಿ 1993 ಸುತ್ತೋಲೆ ಮೂಲಕ ಕೇಂದ್ರವನ್ನು ವಿನಂತಿಕೊಂಡಿದ್ದಾಗಿ ಚುನಾವಣಾ ಆಯೋಗ ತನ್ನ ಮಹತ್ವದ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಏಪ್ರಿಲ್ ಮೂರರಂದು ನ್ಯಾಯಸಮ್ಮತ ಹಾಗೂ ಮುಕ್ತ ಮತದಾನ ನಡೆಯಬೇಕಾದರೆ ತ್ರಿಪುರಾದಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆಯಲ್ಲದೆ ಕೇಂದ್ರಕ್ಕೆ ಬೇರೆ ಮಾರ್ಗವಿಲ್ಲ ಎನ್ನುವುದು ಮೇಲೆ ಉಲ್ಲೇಖಿಸಿದ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಏಪ್ರಿಲ್ ಮೂರರವರೆಗೆ ಬರ್ಮನ್ ಸರಕಾರ ಮುಂದುವರಿಯಲು ಅವಕಾಶ ಕೊಟ್ಟರೆ ರಾಜ್ಯದ ಜನರನ್ನು ಮತದಾನ ಮಾಡುವ ಮೂಲಭೂತ ಹಕ್ಕಿನಿಂದ ವಂಚಿಸಿದಂತೆ ಆಗುತ್ತದೆ. ಅಲ್ಲದೆ ವ್ಯಾಪಕ ಹಿಂಸೆ-ಜೀವ ಹಾನಿಗೂ ಅವಕಾಶ ನೀಡಿದಂತಾಗುತ್ತದೆ. ಅಂಥದ್ದನ್ನು ತಡೆಯುವ ನೈತಿಕ ಹಾಗೂ ಸಂವಿಧಾನಿಕ ಹೊಣೆಗಾರಿಕೆ ನರಸಿಂಹರಾವ್ ಸರಕಾರದ ಮೇಲೆ ಇದೆ. ಸದ್ಯದ ಪರಿಸ್ಥಿತಿಯಲ್ಲಿ ತ್ರಿಪುರಾದಲ್ಲಿ ರಾಷ್ಟ್ರಪತಿ ಆಡಳಿತ ಅನಿವಾರ್ಯವಾಗಿದೆ.

ಐದು ವರ್ಷಗಳ ಹಿಂದೆ ಮಾಡಿದಂತೆ ದುಷ್ಟಮಾರ್ಗದಿಂದ ಅಧಿಕಾರವನ್ನು ಕಬಳಿಸುವ ಕಾಂಗ್ರೆ-ಟಿ.ಯು.ಜೆ.ಎಸ್. ಕೂಟದ ಸಂಚನ್ನು ವಿಫಲಗೊಳಿಸಲು ತ್ರಿಪುರಾದ ಜನತೆ ಸಂಕಲ್ಪ ಬದ್ಧರಾಗಿದ್ದಾರೆ.

'ನಮಕ್ ಹರಾಮಿ' ಸರಕಾರದ ದುಷ್ಟ ಸಂಚು

ಜೀವವಿಮೆ ವಿದೇಶಿಯರಿಗೆ ಮಾರಾಟ

(ಐ.ಎನ್.ಎಸ್.)

ಡಂಕೆಲ್ ಪ್ರಸ್ತಾವಗಳನ್ನು ಒಪ್ಪಿಕೊಳ್ಳಬಾರದು ಭಾರತವನ್ನು ಮಾರಬಾರದು ಎಂದು ತೀವ್ರ ವಿರೋಧ ಎದ್ದಿರುವ ನೆರಳಿನಲ್ಲೇ ಭಾರತದ ಜೀವವಿಮೆಯನ್ನು ವಿದೇಶೀ ಕಂಪೆನಿಗಳ ವಶಪಡಿಸಲು ನಡೆಯುತ್ತಿರುವ 'ನಮಕ್ ಹರಾಮಿ' ಕೆಲಸದ ಬಗ್ಗೆ ಒಂದು ವರದಿ.

ಜೀವ ವಿಮಾ ಕ್ಷೇತ್ರವನ್ನು ಕೇಂದ್ರ ಸರಕಾರ ಖಾಸಗಿಯವರ ಮಡಿಲಿಗೆ, ಅದರಲ್ಲೂ ವಿದೇಶಿಯರ ಉಡಿಗೆ ಹಾಕಲಿದೆಯೇ: ಸರಕಾರದ ಗುಪ್ತ ಕಾರ್ಯಾಚರಣೆಯೊಂದು ಇದಕ್ಕೆ ಹೌದೆಂಬ ಉತ್ತರ ನೀಡುವಂತಿದೆ ಇದುವರೆಗೆ ಭಾರತ ಜೀವ ವಿಮಾ ನಿಗಮ(ಎಲ್‌ಐಸಿ)ದ ಗುತ್ತಿಗೆಯಾಗಿದ್ದ ಭಾರತದಲ್ಲಿ ಜೀವ ವಿಮೆ ಕಾರ್ಯವನ್ನು ಇನ್ನು ಮುಂದೆ ವಿದೇಶೀ ಕಂಪೆನಿಗಳು ಕೈಗೆತ್ತಿಕೊಳ್ಳುವ ಸಂಭವವಿದೆ ಎಂದು ಐ.ಎನ್.ಎಸ್. ವರದಿ ಮಾಡಿದೆ.

ಭಾರತದಲ್ಲಿ ಜೀವ ವಿಮೆ ವ್ಯವಹಾರವನ್ನು ಮಾಡಲಿಕ್ಕಾಗಿ ಎಲ್‌ಐಸಿ ಮತ್ತು ಬ್ರಿಟನ್‌ನ ಸನ್‌ಲೈಫ್ ಇನ್ಸೂರೆನ್ಸ್ ಕಂಪೆನಿಗಳ ಉಪ ಸಂಸ್ಥೆಯೊಂದನ್ನು ಆರಂಭಿಸುವ ಬಗ್ಗೆ ಈ ಎರಡರ ಮಧ್ಯೆ ಒಪ್ಪಂದವೊಂದು ಏರ್ಪಟ್ಟಿದೆ. ಭಾರತ ಸರಕಾರ ಅದಕ್ಕೆ ಅನುಮತಿ ನೀಡಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಈ ತಾತ್ಕಾಲಿಕ ಒಪ್ಪಂದದ ಪ್ರಕಾರ, ಹೆಚ್ಚುವರಿಯ(ಲಾಭ) 70 ಶೇಕಡವನ್ನು ಎಲ್‌ಐಸಿ ಹಾಗೂ ಉಳಿದ ಶೇ. 30ವನ್ನು ಸನ್‌ಲೈಫ್ ಪಡೆಯಲಿದೆ. ಜಗತ್ತಿನ ವಿಮಾ ವ್ಯವಹಾರದಲ್ಲಿ ಸನ್‌ಲೈಫ್ ಅತ್ಯಂತ ದೊಡ್ಡ ವಿಮಾ ಕಂಪೆನಿಗಳಲ್ಲಿ ಒಂದಾಗಿದೆ.

ಗಂಭೀರ ಪರಿಣಾಮ

ಭಾರತದಲ್ಲಿ ಬೆಳವಣಿಗೆ ಮತ್ತು ಲಾಭಕ್ಕೆ ವಿಪುಲ ಅವಕಾಶವನ್ನು ಹೊಂದಿರುವ ವಿಮಾ ಕ್ಷೇತ್ರದಲ್ಲಿ ವಿದೇಶೀ ಕಂಪೆನಿಯೊಂದು ಪ್ರವೇಶಿಸಿ ಹಿಡಿತ ಸಾಧಿಸಲು ಅವಕಾಶ ಲಭ್ಯವಾಗಿದೆ. ಇದು ಈ ಒಪ್ಪಂದದ ಅತ್ಯಂತ ಗಂಭೀರ ಪರಿಣಾಮವಾಗಲಿದೆ.

ಸರಕಾರ ಇದುವರೆಗೆ ಸೇವಾ ಕ್ಷೇತ್ರದಲ್ಲಿ ವಿದೇಶಿಯರ ಪ್ರವೇಶಕ್ಕೆ ಅನುಮತಿಯನ್ನು ನಿರಾಕರಿಸಿತ್ತು. ಸೇವಾ ಕ್ಷೇತ್ರವನ್ನು ತಮಗೆ ಮುಕ್ತವಾಗಿಸುವಂತೆ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ವಿಶ್ವಬ್ಯಾಂಕ್-ಐಎಂಎಫ್ ಸರಕಾರದ ಮೇಲೆ ಒತ್ತಡ ಹೇರುತ್ತಲೇ ಬಂದಿದ್ದವು. ಈ ಒತ್ತಡಕ್ಕೆ ಮಣಿದಿರುವ ಸರಕಾರ ವಿದೇಶೀ ಕಂಪೆನಿಗೆ ಮಣೆ ಹಾಕಲು ಸಿದ್ಧವಾಗಿರುವಂತೆ ಕಾಣುತ್ತದೆ.

ಸೇವಾ ಕ್ಷೇತ್ರದ ಪೈಕಿ ವಿಮಾ ಕ್ಷೇತ್ರ ಭಾರೀ ಲಾಭದಾಯಕವಾಗಿದೆ ಯಾಕೆಂದರೆ ಅದರ ಆರಂಭಕ್ಕೆ ಬಂಡವಾಳವೇನೂ ಬೇಕಿಲ್ಲ. ಆದರೆ ಲಾಭ ಮಾತ್ರ ಹೇರಳ. ಭಾರತದಲ್ಲಿ ಹೊಸ ಮಧ್ಯಮ ವರ್ಗವೊಂದು ತೀವ್ರ ಗತಿಯಲ್ಲಿ ಬೆಳವಣಿಗೆ ಹೊಂದುತ್ತಿರುವುದರಿಂದ ವಿದೇಶೀ ಕಂಪೆನಿಗಳಿಗೆ ಬ್ಯಾಂಕಿಂಗ್ ಮತ್ತು ವಿಮೆಯಂಥ ಸೇವಾ ಕ್ಷೇತ್ರಗಳ ಆಕರ್ಷಣೆ ಹೆಚ್ಚುತ್ತಿದೆ. ಬಂಡವಾಳ ಅಥವಾ ತಂತ್ರಜ್ಞಾನ ವರ್ಗಾವಣೆ ಇಲ್ಲದೆ ಬೇಗನೇ ತುಂಬಾ ಹಣ ಮಾಡಲು ಸಾಧ್ಯವಾಗುವುದು ಈ ಆಕರ್ಷಣೆಗೆ ಕಾರಣ.

ಈ ಅಪಾಯಕಾರಿ ಒಪ್ಪಂದದ ಬಗ್ಗೆ ಸರಕಾರ ಇನ್ನೂ ಏನನ್ನೂ ಬಹಿರಂಗ ಪಡಿಸಿಲ್ಲ. ವಿಮೆಯ ವಿವಿಧ ಯೋಜನೆಗಳ ಪ್ರೀಮಿಯಂ ದರ ನಿಗದಿ, ಪಾಲಿಸಿದಾರರಿಗೆ ಬೋನಸ್ ದರ, ಏಜೆಂಟ್‌ಗಳ ಕಮಿಷನ್ ದರ, ಡೆವಲಪ್‌ಮೆಂಟ್ ಅಧಿಕಾರಿಗಳಿಗೆ ವೇತನ, ಹೂಡಿಕೆ ಮತ್ತು ಹೆಚ್ಚಳದ ಪಾಲು ಮೊದಲಾದವುಗಳನ್ನು ನಿರ್ಧರಿಸಲು ಉಪಸಂಸ್ಥೆಗೇ ಮುಕ್ತ ಅವಕಾಶ ನೀಡಲಾಗುವುದೇ ಎನ್ನುವುದು ಇನ್ನು ಉತ್ತರ ಸಿಗದ ಪ್ರಶ್ನೆಗಳಾಗಿವೆ.

ಕೈ ಮಗ್ಗ ಉಳಿವಿಗಾಗಿ ಮಾರ್ಚ್ 15 ರಂದು ನೇಕಾರರ ಮುಷ್ಕರ

ಲಕ್ಷಾಂತರ ಜನಗಳಿಗೆ ಉದ್ಯೋಗವನ್ನು ಒದಗಿಸಬಲ್ಲ ಕೈಮಗ್ಗ ಕ್ಷೇತ್ರದ ಉಳಿವಿಗಾಗಿ ನೇಕಾರರು ಹೋರಾಡಬೇಕು ಎಂದು ಅಖಿಲ ಭಾರತ ಜವಳಿ ಕಾರ್ಮಿಕರ ಸಮನ್ವಯ ಸಮಿತಿಯ ಸಂಚಾಲಕರು ಸಿ.ಐ.ಟಿ.ಯು ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕಾಮ್ರೆಡ್ ಪಿ.ಕೆ. ಗಂಗುಲಿಯವರು ರಾಜ್ಯದ ಕೈಮಗ್ಗ ನೇಕಾರರಿಗೆ ಕರೆ ನೀಡಿದ್ದಾರೆ. ಅವರು ಫೆಬ್ರುವರಿ 17,1993 ರಂದು ಹುಬ್ಬಳಿಯಲ್ಲಿ ಕೈಮಗ್ಗ ನೇಕಾರರ 2 ನೇ ರಾಜ್ಯ ಮಟ್ಟದ ಸಮ್ಮೇಳವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಸ್ವಾತಂತ್ರ್ಯ ನಂತರ ಕೇಂದ್ರದಲ್ಲಿ ಅಧಿಕಾರ ಘಡೆಸುತ್ತಾ ಬಂದಿರುವ ಸರ್ಕಾರಗಳು ದೇಶದ ಹಿರಿಯ ಜವಳಿ ಮಾಲೀಕರ ಒತ್ತಡಗಳಿಗೆ ಮಣಿದು ಕೈಮಗ್ಗ ಕ್ಷೇತ್ರವನ್ನು ಕಡೆಗಣಿಸುತ್ತಾ ಬಂದಿವೆ ಎಂದು ಹೇಳಿದ ಅವರು ಈಗ ಪಿ.ವಿ. ನರಸಿಂಹರಾವ್ ಅವರು ಅನುಸರಿಸಲಾರಂಭಿಸಿರುವ ಐ. ಎಂ.ಎಫ್. ಒತ್ತಡದ ಹೊಸ ಆರ್ಥಿಕ ನೀತಿಯಿಂದ ಕೈಮಗ್ಗದ ನೇಕಾರರು ಹೊಟ್ಟೆಗಿಲ್ಲದೆ ಸಾಯುವ, ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ಹೇಳಿದರು. ಅಂತರಿಕ ಬೇಡಿಕೆಯನ್ನು ಕಡೆಗಣಿಸಿ ನೂಲನ್ನು ರಫ್ತುಮಾಡುವ, ಕೈಮಗ್ಗಕ್ಕೆ ಸಬ್ಸಿಡಿಗಳನ್ನು ಕಡಿತ ಮಾಡುವ, ಕೈಮಗ್ಗದ ಬಟ್ಟೆಯ ಮೇಲೆ ಅಬಕಾರಿ ಸುಂಕ ಹೇರುವ ಕ್ರಮಗಳಿಂದ ಕೈಮಗ್ಗ ಕ್ಷೇತ್ರ ನಾಶವಾಗಲಿದೆ ಎಂದು ಎಚ್ಚರಿಸಿದರು. 1985ರ ಕೈಮಗ್ಗ ಉತ್ಪನ್ನಗಳ ಸಂರಕ್ಷಣಾ ಕಾಯ್ದೆಯನ್ನು ಸುಪ್ರೀಂಕೋರ್ಟ್ ಇತ್ತೀಚೆಗೆ ಎತ್ತಿಹಿಡಿದಿರುವುದನ್ನು ಪ್ರಸ್ತಾಪಿಸಿದ ಅವರು ಈ ಬೇಡಿಕೆಗೆ ಸಿ.ಐ.ಟಿ.ಯು ಹೋರಾಟ ನಡೆಸಿದ್ದನ್ನು ಸ್ಮರಿಸಿದರು. ಈಗಲಾದರೂ ಈ ಕಾಯ್ದೆಯನ್ನು ತಕ್ಷಣದಿಂದ ಜಾರಿಗೊಳಿಸಿ 22 ಬಗೆಯ ಬಟ್ಟೆಗಳ ಉತ್ಪಾದನೆಯನ್ನು ಕೈಮಗ್ಗ ಕ್ಷೇತ್ರಕ್ಕೆ ಮೀಸಲಿಟ್ಟು ಗಿರಣಿ ಮತ್ತು ವಿದ್ಯುತ್ ಚಾಲಿತ ಮಗ್ಗಗಳ ಪೈಪೋಟಿಯಿಂದ ಕೈಮಗ್ಗವನ್ನು ರಕ್ಷಿಸಲು ಮುಂದಾಗಬೇಕೆಂದು ಅವರು ಕೇಂದ್ರ ಸರಕಾರವನ್ನು ಒತ್ತಾಯಿಸಿದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಜ್ಯ ಸಿ.ಐ.ಟಿ.ಯು ಅಧ್ಯಕ್ಷರಾದ ಕಾಮ್ರೆಡ್ ಎಸ್. ಸೂರ್ಯನಾರಾಯಣರಾವ್ ಅವರು ಮಾತನಾಡುತ್ತಾ ಎಲ್ಲರ ಮಾನ ಕಾಪಾಡಲು ಬಟ್ಟೆ ನೇಯ್ದು ಕೊಡುವ ನೇಕಾರರು ಇಂದು ಸರ್ಕಾರದ, ಧೋರಣೆಯಿಂದ ಸ್ವತಃ ಅವಮಾನಿತರಾಗಿದ್ದಾರೆ ಎಂದು ಹೇಳಿದರು.

ಕಳೆದ ವರ್ಷ ನವೆಂಬರ್ 25 ರಂದು ನವದೆಹಲಿಯಲ್ಲಿ ನಡೆದ ಅಭೂತಪೂರ್ವ ಪ್ರದರ್ಶನದಲ್ಲಿ ರಾಜ್ಯದ ನೇಕಾರರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಕೇಂದ್ರ ಸರಕಾರದ ಪ್ರತಿಗಾಮಿ ನೀತಿಗಳ ವಿರುದ್ಧ ದೇಶದ ಕಾರ್ಮಿಕ ವರ್ಗ ಆರಂಭಿಸಿದ ಸಮರಕ್ಕೆ ಡಿಸೆಂಬರ್ 6ರ ಮತ್ತು ನಂತರದ ಘಟನೆಗಳಿಂದ ಹಿನ್ನಡೆ ಉಂಟಾಗಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು ನೇಕಾರರಲ್ಲಿ ಹಿಂದುಗಳು ಇದ್ದಾರೆ, ಮುಸಲ್ಮಾನರೂ ಇದ್ದಾರೆ, ಇತರರು ಇದ್ದಾರೆ ಎಂದು ನೆನಪುಮಾಡಿ ಎಲ್ಲರೂ ಒಂದಾಗಿ ಹೋರಾಡಿ ಈ ದೇಶ ಮತ್ತೊಮ್ಮೆ ಒಡೆದು ಛಿದ್ರವಾಗುವುದನ್ನು ತಪ್ಪಿಸಬೇಕು ಎಂದು ಕರೆ ನೀಡಿದರು.

ಜನತಾದಳದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರೂ, ಮಾಜಿ ಖಾದಿ ಬೋರ್ಡ್ ಅಧ್ಯಕ್ಷರೂ ಆಗಿದ್ದ ಶ್ರೀ ವಿ.ಬಿ. ಹೊಂಬಳ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಎಂ. ಬಿ. ಕಟ್ಟಿಯವರು ಸ್ವಾಗತಿಸಿದರು.

ಸಮ್ಮೇಳನ ಆರಂಭಕ್ಕೆ ಮುನ್ನ, ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಸಹಸ್ರಾರು ಕೈಮಗ್ಗದ ನೌಕರರು ಸ್ತ್ರೀ ಪುರುಷರು ಹುಬ್ಬಳ್ಳಿ ರೈಲು ನಿಲ್ದಾಣದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ನಂತರ ಮುನ್ಸಿಪಲ್ ನೌಕರರ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಕೈ ಮಗ್ಗ ನೇಕಾರ ಕಾರ್ಮಿಕರ ಸಮನ್ವಯ ಸಮಿತಿಯ ಅಧ್ಯಕ್ಷರಾದ ಕಾಂ.ನಿತ್ಯಾನಂದ ಸ್ವಾಮಿ ಅವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನ ಆರಂಭಗೊಂಡಿತು.

ಕೋಮುವಾದಿಗಳ-ಜಾತಿವಾದಿಗಳ ವಿರುದ್ಧದ ಹೋರಾಟದಲ್ಲಿ ರಾಜ್ಯದ ನೇಕಾರರು ಪರಿಣಾಮಕಾರಿಯಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಸಮ್ಮೇಳನವು ಗೊತ್ತುವಳಿಯೊಂದನ್ನು ಸ್ವೀಕರಿಸುವ ಮೂಲಕ ಕರೆ ನೀಡಿತು. ಓಟಿಗಾಗಿ ರೈತರ ಬಗ್ಗೆ ನೇಕಾರರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವ ಬಿಜೆಪಿಯ ಯಡಿಯೂರಪ್ಪನ ತಂತ್ರಗಳ ಬಗ್ಗೆ ನೇಕಾರರನ್ನು ಎಚ್ಚರಿಸಿದ ಸಮ್ಮೇಳನವು ಹುಬ್ಬಳ್ಳಿ ಈದ್‌ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸುವ ಹೆಸರಿನಲ್ಲಿ ಇಲ್ಲೊಂದು ಅಯೋಧ್ಯೆಯನ್ನುಂಟು ಮಾಡಲು ಪ್ರಯತ್ನಿಸುತ್ತಿರುವ ಈ ಶಕ್ತಿಗಳಿಗೆ ಹುಬ್ಬಳ್ಳಿಯ ಶಾಂತಿಪ್ರಿಯ ಜನತೆ ಬೆಂಬಲ ನೀಡಬಾರದೆಂದು ಮನವಿ ಮಾಡಿದೆ.

ಸಮುದಾಯ ಸಂಘಟನೆಯ ಮುಖಂಡರಾದ ಕಾಂ.ಸಿಆರ್.ಭಟ್ ಅವರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು. ಕೊನೆಯಲ್ಲಿ ನೇಕಾರ ಸಮನ್ವಯ ಸಮಿತಿಯ ಉಪಾಧ್ಯಕ್ಷರಲ್ಲಿ ಒಬ್ಬರಾದ ಕಾಂ.ವಿ.ಜಿ.ಮಾಗಿನಹಳ್ಳಿ ಅವರು ವಂದಿಸಿದರು.

ಮರುದಿನ ನಡೆದ ಪ್ರತಿನಿಧಿಗಳ ಅಧಿವೇಶನದಲ್ಲಿ ಗುಲ್ಬರ್ಗಾ, ಬಿಜಾಪುರ, ಬೆಳಗಾಂವ್, ಧಾರವಾಡ, ಚಿತ್ರದುರ್ಗ, ಬಳ್ಳಾರಿ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಸುಮಾರು ಒಂದು ನೂರು ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾಂ.ವಿ.ಜಿ.ಮಾಗಿನಹಳ್ಳಿ, ಕಾಂ.ಡಿ.ಎಂ.ಕಲಾಸಿ, ಕಾಂ.ವಿ.ಪಿ.ಕುಲಕರ್ಣಿ ಮತ್ತು ಕಾಂ.ಪ್ರಸನ್ನಕುಮಾರ್ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯು ಅಧಿವೇಶನದ ಕಲಾಪಗಳನ್ನು ನಡೆಸಿತು. ಕಾಂ.ನಿತ್ಯಾನಂದಸ್ವಾಮಿಯವರು ಮಂಡಿಸಿದ ಕರಡು ಗೊತ್ತುವಳಿಗಳ ಮೇಲೆ 25 ಜನ ಪ್ರತಿನಿಧಿಗಳು ಸುಮಾರು 4 ಗಂಟೆಗಳ ಕಾಲ ಚರ್ಚೆ ನಡೆಸಿದರು. ಪ್ರತಿನಿಧಿಗಳು ಸೂಚಿಸಿದ ಕೆಲವು ತಿದ್ದುಪಡಿಗಳೊಂದಿಗೆ ಈ ಕೆಳಗಿನ ಗೊತ್ತುವಳಿಗಳು ಸರ್ವಾನುಮತದಿಂದ ಅನುಮೋದಿಸಲ್ಪಟ್ಟವು.

1. ಕೈ ಮಗ್ಗದ ನೇಕಾರರನ್ನು ಒಳಗೊಂಡಂತೆ ದೇಶದ ಇಡೀ ದುಡಿಯುವ ಜನತೆಯ ಹಿತಕ್ಕೆ ಮಾರಕವಾಗಿರುವ ಕೇಂದ್ರ ಸರಕಾರದ ನೂತನ ಆರ್ಥಿಕ ಮತ್ತು ಕೈಗಾರಿಕೆಯ ನೀತಿಯ ವಿರುದ್ಧ ಹೋರಾಡುವುದು.
2. ರಾಜ್ಯದ ಕೈಮಗ್ಗ ನೇಕಾರರಿಗೆ ತಿಂಗಳಲ್ಲಿ 26 ದಿನಗಳ ಕೆಲಸಕ್ಕೆ ಬೇಕಾಗುವಷ್ಟು ನೂಲನ್ನು ತಪ್ಪದೆ ಪೂರೈಸಿ ಒಬ್ಬ ನೇಕಾರನಿಗೆ ತಿಂಗಳಿಗೆ ರೂ. 1250 ಕೂಲಿ ಸಿಗುವಂತೆ ಕನಿಷ್ಟ ವೇತನವನ್ನು ನಿಗದಿಪಡಿಸಲು ಒತ್ತಾಯಿಸಿ ಇದೇ ಮಾರ್ಚ್ 15ರಂದು ರಾಜ್ಯಾದ್ಯಂತ ಮುಷ್ಕರ ನಡೆಸುವುದು.
3. ಗಿರಣಿ ಬಟ್ಟೆಯ ಮೇಲೆ ಹಾಕಲಾಗುವ ಅಬಕಾರಿ ಸುಂಕದಿಂದ ಸರಕಾರ ಸಂಗ್ರಹಿಸುತ್ತಿರುವ ಕೋಟಿಗಟ್ಟಲೆ ಹಣದಲ್ಲಿ ಒಂದು ಪಾಲನ್ನು ಬಳಸಿ ನೇಕಾರರ ಕಲ್ಯಾಣನಿಧಿ ರಚಿಸಬೇಕೆಂದು, ನೇಕಾರರ ವಸತಿ, ಆರೋಗ್ಯ ಶಿಕ್ಷಣ, ಸಾಂಸ್ಕೃತಿಕ ಅಭಿವೃದ್ಧಿ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಈ ನಿಧಿಯನ್ನು ಬಳಸುವಂತೆ ಸರಕಾರವನ್ನು ಒತ್ತಾಯಿಸುವುದು.
4. ರಾಜ್ಯದಲ್ಲಿ ಸ್ಥಗಿತಗೊಂಡಿರುವ ನೇಕಾರರ ಸಹಕಾರಿ ಸಂಘಗಳನ್ನು ಪುನಶ್ಚೇತನಗೊಳಿಸಲು ಕ್ರಮ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸುವುದು.
5. ಖಾದಿ ಗ್ರಾಮೋದ್ಯೋಗದ ನೇಕಾರರಿಗೂ ಸರಿಯಾದ ವೇತನ ಸೌಲಭ್ಯ ನೀಡಬೇಕು, ಶ್ರೀಮಂತ ನೇಕಾರರಲ್ಲಿ ದುಡಿಯುತ್ತಿರುವ ಕೂಲಿ ನೇಕಾರರಿಗೂ ಎಲ್ಲ ಸೌಲಭ್ಯಗಳನ್ನು ವಿಸ್ತರಿಸಬೇಕು, ಸಾಹಸಿ ನೇಕಾರರಿಗೆ ಸ್ವತಂತ್ರವಾಗಿ ಉದ್ಯೋಗ ನಡೆಸಿ ಸ್ವಾವಲಂಬಿಯಾಗಲು ಸೂಕ್ತ ಯೋಜನೆಯನ್ನು ರೂಪಿಸಬೇಕು ಎಂದು ಸರಕಾರವನ್ನು ಒತ್ತಾಯಿಸುವುದು.

ಮುಂದಿನ ಹೋರಾಟಗಳಿಗೆ ರಾಜ್ಯದ ಕೈಮಗ್ಗ ನೇಕಾರರನ್ನು ಅಣಿನೆರೆಸಲು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಂಘಟನೆಯನ್ನು ವಿಸ್ತರಿಸಲು, ಸ್ಥಳೀಯ ಸಮಿತಿಗಳನ್ನು ರಚಿಸಿ ಕ್ರಿಯಾಶೀಲಗೊಳಿಸಲು ಸಮ್ಮೇಳನವು ನಿರ್ಧರಿಸಿದೆ. ಈ ಜವಾಬ್ದಾರಿಗಳನ್ನು ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ನಿರ್ವಹಿಸಲು ಈ ಕೆಳಗಿನ ಪದಾಧಿಕಾರಿಗಳ ತಂಡವನ್ನು ಸಮ್ಮೇಳನವು ಸರ್ವಾನುಮತದಿಂದ ಆಯ್ಕೆ ಮಾಡಿತು.

ಅಧ್ಯಕ್ಷರು ನಿತ್ಯಾನಂದಸ್ವಾಮಿ, ಉಪಾಧ್ಯಕ್ಷರು 1) ವಿ.ಜಿ. ಮಾಗಿನಹಳ್ಳಿ (ಗುಳದೇಗುಡ್ಡ), 2) ಡಿ.ಎಂ. ಖಲಾಸಿ(ಬಾಗಲಕೋಟೆ), 3)ಗುರುಸಂಗಪ್ಪಗೌಡ ಪಾಟೀಲ್(ಸುರಪುರ), 4)ಎಸ್.ಎಫ್. ಕ್ಯಾದಗಿ(ತುಮ್ಮಿನಕಟ್ಟೆ), ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್(ಬಳ್ಳಾರಿ), ಜಂಟಿ ಕಾರ್ಯದರ್ಶಿ ಹನುಮಂತಪ್ಪ ಕದರಮಂಡಲಗಿ(ರಾಣೆಬೆನ್ನೂರ್), ಸಂಘಟನಾ ಕಾರ್ಯದರ್ಶಿಗಳು 1) ವಿ.ಪಿ. ಕುಲಕರ್ಣಿ(ರಾಮದುರ್ಗ), 2) ಎಂ.ಎಚ್.ಮುಲ್ಲಾ(ಹುಬ್ಬಳ್ಳಿ), ಕಾರ್ಯದರ್ಶಿಗಳು 1) ರುದ್ರಪ್ಪ ಹಡಗಿನಾಳ(ದೇಶನೂರ), 2) ಎ.ಟಿ. ತಿಪ್ಪೇಸ್ವಾಮಿ(ದಾವಣಗೆರೆ), 3) ಸದಾಶಿವ ಗೋಂದಕರ(ಬನಹಟ್ಟಿ), 4)ಗುರುರಾಜ ಸೆಟ್ಟಿಗಾರ್(ಉಡುಪಿ), 5) ಎಂ. ಕಸ್ತೂರಿಬಾಯಿ(ಹುಬ್ಬಳ್ಳಿ), 6) ಸಂಗಮೇಶ ತಿಪ್ಪ(ಗುಳದೇಗುಡ್ಡ), ಖಜಾಂಚಿ ಜಿ. ಪರಮೇಶ್ವರಪ್ಪ(ಹರಿಹರ).



ಕಾಂ.ಪಿ.ಕೆ.ಗಂಗೂಲಿ ಮಾತನಾಡುತ್ತಿದ್ದಾರೆ. ಚಿತ್ರದಲ್ಲಿ ಇತರರು ಬಲದಿಂದ ಎಡಕ್ಕೆ ಎಸ್.ಸೂರ್ಯನಾರಾಯಣರಾವ್, ವಿ.ಬಿ.ಹೊಂಬಳಿ, ಪ್ರಸನ್ನಕುಮಾರ್, ಗುರುಸಂಗಪ್ಪಗೌಡ ಹಾಗೂ ನಿತ್ಯಾನಂದಸ್ವಾಮಿ.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462.
ಸಂಪಾದಕರು : ಪಿ.ರಾಮಚಂದ್ರರಾವ್